ಕರ್ನಾಟಕ ಸರ್ಕಾರ

## ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

# ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ

**2025-26**

# ಏಳನೆಯ ತರಗತಿ

## ವಿಷಯ: **ಕನ್ನಡ**

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,**

**ಬನಶಂಕರಿ 3ನೇ ಹಂತ, ಬೆಂಗಳೂರು-560085**

**ಮತ್ತು**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ**

**( ಡಯಟ್ ) ಮಂಡ್ಯ 571401**

| ಪರಿಕಲ್ಪನೆ ಮತ್ತು ಮಾರ್ಗದರ್ಶನ | |
|---|---|
| ಶ್ರೀಮತಿ ರಶ್ಮಿ ಮಹೇಶ್ V, ಭಾ.ಆ.ಸೇ<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | |
| ಡಾ. ತ್ರಿಲೋಕ್ ಚಂದ್ರ K V. ಭಾ.ಆ.ಸೇ<br>ಆಯುಕ್ತರು,<br>ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು | ಶ್ರೀ ಗೋಪಾಲಕೃಷ್ಣ H N,<br>ನಿರ್ದೇಶಕರು,<br>DSERT, ಬೆಂಗಳೂರು |
| ಡಯಟ್ ಸಹಕಾರ | |
| ಶ್ರೀ ಪುರುಷೋತ್ತಮ,<br>ಪ್ರಾಂಶುಪಾಲರು<br>ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ<br>(ಡಯಟ್) ಮಂಡ್ಯ. | ಶ್ರೀಮತಿ ನಿರ್ಮಲ ವಿ. ಮೆಂಟರ್<br>ಉಪನ್ಯಾಸಕರು<br>ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ<br>(ಡಯಟ್) ಮಂಡ್ಯ. |
| **ಸಂಯೋಜನೆ** | |
| ಶ್ರೀಮತಿ ರಾಧಾ P,<br>ಹಿರಿಯ ಸಹಾಯಕ ನಿರ್ದೇಶಕರು,<br>DSERT, ಬೆಂಗಳೂರು | |
| **ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ ರಚನಾ ಸಂಪನ್ಮೂಲ ತಂಡ** | |
| 1. ಶ್ರೀ ಗಿರೀಶನಾಯಕ | ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ(SQ )<br>ಕೆ ಆರ್ ಸಾಗರ, ಶ್ರೀರಂಗಪಟ್ಟಣ ತಾಲೂಕು |
| 2. ಶ್ರೀ ಕೀರ್ತಿ ಬಿ ವಿ | ಸಹ ಶಿಕ್ಷಕರು, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ<br>ನಳ್ಳೇನಹಳ್ಳಿ, ಪಾಂಡವಪುರ ತಾಲೂಕು |
| 3. ಶ್ರೀಮತಿ ಧನಲಕ್ಷ್ಮಿ | ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ<br>ಪಾಲಹಳ್ಳಿ, ಶ್ರೀರಂಗಪಟ್ಟಣ ತಾಲೂಕು |
| 4. ಶ್ರೀ ಮಹೇಶ್ ಬಿ ಎಂ | ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ<br>ಹೊನಗಹಳ್ಳಿ, ಮಳವಳ್ಳಿ, ತಾಲೂಕು |
| 5. ಶ್ರೀಮತಿ ಶಿಲ್ಪಾ ಎನ್ | ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು, ಸರ್ಕಾರಿ<br>ಹಿರಿಯ ಪ್ರಾಥಮಿಕ ಶಾಲೆ<br>ತೊರೆ ಶೆಟ್ಟಹಳ್ಳಿ, ಮದ್ದೂರು ತಾಲೂಕು |
| 6. ಶ್ರೀ ಸಂತೋಷ್ | ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ<br>ಕುರಹಟ್ಟಿ, ಪಾಂಡವಪುರ ತಾಲ್ಲೂಕು |
| ಮಾರ್ಗದರ್ಶಕರು ಹಾಗೂ ಪರಿಶೀಲಕರು | |
| ಶ್ರೀಮತಿ ಕವಿತಾ<br>ಬಿ ಆರ್ ಪಿ ನೆಲಮಂಗಲ. | ಶ್ರೀಮತಿ ಪ್ರೀತಿ ಹೆಗಡೆ, ಸ.ಶಿ.<br>ಕೆ.ಪಿ.ಎಸ್.ಹೆಗ್ಗನಹಳ್ಳಿ<br>ಬೆಂಗಳೂರು ಉತ್ತರ ಜಿಲ್ಲೆ |

| ಪರಿವಿಡಿ | | |
|---|---|---|
| ಪಠ್ಯ ಭಾಗ | | |
| ಪ್ರಶ್ನೆಗಳು | | |
| ಕ್ರ.ಸಂ | ಪಾಠದ ಶೀರ್ಷಿಕೆಗಳು | ಪುಟಸಂಖ್ಯೆ |
| 1 | ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು | 6 ರಿಂದ 7 |
| 2 | ಸೀನಶೆಟ್ಟರು ನಮ್ಮ ಟೀಚರು | 8 ರಿಂದ 10 |
| 3 | ಹಿಲ್ಟನ್ ಹೆಡ್ ಚಳವಳಿ | 11 ರಿಂದ 12 |
| 4 | ಮೈಲಾರ ಮಹದೇವ | 13 ರಿಂದ 14 |
| 5 | ಪರಿಸರ ಸಮತೋಲನ | 15 ರಿಂದ 16 |
| 6 | ಚಿಗಳಿ ಇರುವೆ | 17 ರಿಂದ 18 |
| 7 | ಬಿಲ್ಲ ಹಬ್ಬ | 19 ರಿಂದ 22 |
| 8 | ಸಂಕ್ರಾಂತಿಯಂದು ಸುಖ-ದುಃಖ | 23 ರಿಂದ 24 |
| ಪದ್ಯಭಾಗ | | |
| ಪ್ರಶ್ನೆಗಳು | | |
| 1 | ಹುತ್ತರಿ ಹಾಡು | 25 ರಿಂದ 26 |
| 2 | ಸ್ವಾತಂತ್ರ್ಯ ಸ್ವರ್ಗ | 27 ರಿಂದ 29 |
| 3 | ಭಾಗ್ಯದ ಬಳೆಗಾರ | 30 ರಿಂದ 31 |
| 4 | ವಚನಗಳ ಭಾವ ಸಂಗಮ | 32 ರಿಂದ 33 |
| 5 | ಹಚ್ಚೇವು ಕನ್ನಡದ ದೀಪ | 34 ರಿಂದ 35 |
| 6 | ಬಿಡುಗಡೆಯ ಹಾಡು | 36 ರಿಂದ 37 |
| 7 | ತಿರುಕನ ಕನಸು | 38 ರಿಂದ 40 |
| 8 | ಅಭಿಮನ್ಯು ಪರಾಕ್ರಮ | 41 ರಿಂದ 42 |
| ಪಠ್ಯ ಭಾಗ | | |
| ಮಾದರಿ ಉತ್ತರಗಳು | | |
| 1 | ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು | 43ರಿಂದ 44 |
| 2 | ಸೀನಶೆಟ್ಟರು ನಮ್ಮ ಟೀಚರು | 45 |
| 3 | ಹಿಲ್ಟನ್ ಹೆಡ್ ಚಳವಳಿ | 46 ರಿಂದ 47 |
| 4 | ಮೈಲಾರ ಮಹದೇವ | 48 ರಿಂದ 49 |
| 5 | ಪರಿಸರ ಸಮತೋಲನ | 50 |
| 6 | ಚಿಗಳಿ ಇರುವೆ | 51ರಿಂದ 52 |
| 7 | ಬಿಲ್ಲ ಹಬ್ಬ | 53 ರಿಂದ 55 |
| 8 | ಸಂಕ್ರಾಂತಿಯಂದು ಸುಖ-ದುಃಖ | 56 |
| ಪದ್ಯಭಾಗ | | |
| ಮಾದರಿ ಉತ್ತರಗಳು | | |
| 1 | ಹುತ್ತರಿ ಹಾಡು | 57 |
| 2 | ಸ್ವಾತಂತ್ರ್ಯ ಸ್ವರ್ಗ | 58 |
| 3 | ಭಾಗ್ಯದ ಬಳೆಗಾರ | 59 ರಿಂದ 60 |
| 4 | ವಚನಗಳ ಭಾವ ಸಂಗಮ | 61 ರಿಂದ 63 |
| 5 | ಹಚ್ಚೇವು ಕನ್ನಡದ ದೀಪ | 64 |
| 6 | ಬಿಡುಗಡೆಯ ಹಾಡು | 65 ರಿಂದ 66 |
| 7 | ತಿರುಕನ ಕನಸು | 67 ರಿಂದ 68 |
| 8 | ಅಭಿಮನ್ಯು ಪರಾಕ್ರಮ | 69 |

# ಕಲಿಕಾ ಫಲಗಳು

## ಗದ್ಯಭಾಗ

| ಕ್ರ.ಸಂ | ಪಾಠದ ಶೀರ್ಷಿಕೆಗಳು | ಕಲಿಕಾ ಫಲ |
|---|---|---|
| 1 | ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು | • ಲಭ್ಯವಿರುವ ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಾದ ಕವನ,ಕಥೆ,ಲೇಖನ ಮತ್ತು ನಾಟಕಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವರು.<br>• ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ,ಭಾವನಾತ್ಮಕ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು. |
| 2 | ಸೀನಶೆಟ್ಟರು ನಮ್ಮ ಟೀಚರು | • ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ,ಭಾವನಾತ್ಮಕ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು.<br>• ತಾವು ಕಂಡ ಚಿತ್ರ,ಘಟನೆ ಅಥವಾ ದೃಶ್ಯವನ್ನು ಕುರಿತು ಪಡೆದ ಅನುಭವಗಳನ್ನು ತಮ್ಮ ಸೃಜನಾತ್ಮಕತೆಯೊಂದಿಗೆ ಮೌಖಿಕ,ಲಿಖಿತ ಹಾಗೂ ಆಂಗಿಕವಾಗಿ ವ್ಯಕ್ತಪಡಿಸುವರು. |
| 3 | ಹಿಲ್ಟನ್ ಹೆಡ್ ಚಳವಳಿ | • ಸ್ಥಳೀಯ ಸಾಮೂಹಿಕ ಮತ್ತು ಪ್ರಾಕೃತಿಕ ಸನ್ನಿವೇಶದಲ್ಲಿನ ಅಂಕಗಳನ್ನು ವಿಶ್ಲೇಷಿಸಿ ತಾರ್ಕಿಕವಾಗಿ ಉತ್ತರಿಸುವರು.(ಉದಾ.ವರದಕ್ಷಣೆ ಪರಿಣಾಮಗಳು, ಧೂಮಪಾನದಿಂದ ಆಗುವ ದುಷ್ಪರಿಣಾಮಗಳು) |
| 4 | ಮೈಲಾರ ಮಹದೇವ | • ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ,ಭಾವನಾತ್ಮಕ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು.<br>• ತಾವು ಕಂಡ ಚಿತ್ರ,ಘಟನೆ ಅಥವಾ ದೃಶ್ಯವನ್ನು ಕುರಿತು ಪಡೆದ ಅನುಭವಗಳನ್ನು ತಮ್ಮ ಸೃಜನಾತ್ಮಕತೆಯೊಂದಿಗೆ ಮೌಖಿಕ,ಲಿಖಿತ ಹಾಗೂ ಆಂಗಿಕವಾಗಿ ವ್ಯಕ್ತಪಡಿಸುವರು |
| 5 | ಪರಿಸರ ಸಮತೋಲನ | • ತಾವು ಓದಿದ ಅಥವಾ ತಿಳಿದ ವಿಷಯವಸ್ತುವಿನ ಬಗ್ಗೆ ವೈಚಾರಿಕವಾಗಿ ವಿಮರ್ಶಿಸುತ್ತಾ ಏಕೆ, ಹೇಗೆ, ಏನು ಎಂಬುದನ್ನು ಅರಿಯಲು ಪ್ರಯತ್ನಿಸುವರು ಅಥವಾ ಸಮೂಹದಲ್ಲಿ ಚರ್ಚಿಸುವರು. |
| 6 | ಚಿಗಳಿ ಇರುವೆ | • ಸ್ಥಳೀಯ ಪ್ರಾಕೃತಿಕ ಸನ್ನಿವೇಶದಲ್ಲಿನ ಅಂಶಗಳನ್ನು ವಿಶ್ಲೇಷಿಸಿ ತಾರ್ಕಿಕವಾಗಿ ಉತ್ತರಿಸುವರು, ಮಾತನಾಡುವರು.<br>• ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಲ್ಲಿ ರಚನಾಕಾರರ ದೃಷ್ಟಿಯಿಂದ ಅಭಿವ್ಯಕ್ತಿಸಿರುವ ದೃಷ್ಟಿಕೋನವನ್ನು ಅರ್ಥೈಸಿಕೊಂಡು ತನ್ನ ದೈನಂದಿನ ಅನುಭವಗಳೊಂದಿಗೆ ಅದರ ಸಾಮ್ಯತೆಗಳನ್ನು ಗಮನದಲ್ಲಿರಿಸಿಕೊಂಡು ತಮ್ಮ ವಿಚಾರವನ್ನು ಅಭಿವ್ಯಕ್ತಿ ಪಡಿಸುವರು. |
| 7 | ಬಿಲ್ಲ ಹಬ್ಬ | • ಲಭ್ಯವಿರುವ ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಾದ ಕವನ, ಕಥೆ ಲೇಖನ ಮತ್ತು ನಾಟಕಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು,<br>• ತಾವು ಕಂಡ ಚಿತ್ರಘಟನೆ, ಸನ್ನಿವೇಶ ಚಿತ್ರಸರಣಿ ಅಥವಾ ದೃಶ್ಯವನ್ನು ಕುರಿತು ಪಡೆದ ಅನುಭವಗಳನ್ನು ತಮ್ಮ ಸೃಜನಾತ್ಮಕತೆಯೊಂದಿಗೆ ಮೌಖಿಕ ,ಲಿಖಿತ ಹಾಗೂ ಆಂಗಿಕವಾಗಿ ವ್ಯಕ್ತಪಡಿಸುವರು. |
| 8 | ಸಂಕ್ರಾಂತಿಯಂದು ಸುಖ-ದುಃಖ | • ಸೂಕ್ತ ಲೇಖನ ಚಿನ್ಹೆಗಳು ಮತ್ತು ಕಾಲ,ಲಿಂಗ ,ಮೊದಲಾದ ವ್ಯಾಕರಣಾಂಶಗಳ ಪ್ರಯೋಗ ಮಾಡುವರು.<br>• ಪಠ್ಯದಲ್ಲಿನ ಸಾಹಿತ್ಯ ಓದಿ ಅದರ ಉಪಯೋಗದ ಬಗ್ಗೆ ಮಾತನಾಡುವರು. |

| ಪದ್ಯಭಾಗ | | |
|---|---|---|
| **ಕ್ರ.ಸಂ** | **ಪಾಠದ ಶೀರ್ಷಿಕೆಗಳು** | **ಕಲಿಕಾ ಫಲ** |
| 1 | ಹುತ್ತರಿ ಹಾಡು | • ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ,ಭಾವನಾತ್ಮಕ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು. |
| 2 | ಸ್ವಾತಂತ್ರ್ಯ ಸ್ವರ್ಗ | • ಲಭ್ಯವಿರುವ ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಾದ ಕವನ,ಕಥೆ,ಲೇಖನ ಮತ್ತು ನಾಟಕಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವರು. |
| 3 | ಭಾಗ್ಯದ ಬಳೆಗಾರ | • ಜನಪದ ಗೀತೆ, ಕಥೆಗಳು, ಶಿಶುಗೀತೆಗಳ ಬಗ್ಗೆ ಚರ್ಚೆ ಮಾಡುವರು.<br>ಕರಕುಶಲ ಕಲೆ ,ವಾಸ್ತು ಶಿಲ್ಪಕಲೆ ನೃತ್ಯಕಲೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವರು.<br>• ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ,ಭಾವನಾತ್ಮಕ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು. |
| 4 | ವಚನಗಳ ಭಾವ ಸಂಗಮ | • ಸಂವೇಧನಾತ್ಮಕ ಅಂಶಗಳಾದ ಜಾತಿ, ಧರ್ಮ, ಲಿಂಗ, ಆಚಾರ -ವಿಚಾರ ,ರೂಢಿ ಸಂಪ್ರದಾಯ ,ಉಡುಗೆ- ತೊಡುಗೆ ಮೊದಲಾದ ಅಂಶಗಳ ಬಗ್ಗೆ ಅನುಭವಗಳನ್ನು ಮೌಖಿಕವಾಗಿ ಅಭಿವ್ಯಕ್ತ ಪಡಿಸುವರು .ಪಠ್ಯದಲ್ಲಿನ ಸಾಹಿತ್ಯ ಓದಿ ಅದರ ಉಪಯೋಗದ ಬಗ್ಗೆ ಮಾತನಾಡುವರು.<br>• ಸಂವೇಧಾನಾತ್ಮಕ ಅಂಶಗಳನ್ನು ಕುರಿತು ತಾರ್ಕಿಕ ಅಭಿಪ್ರಾಯವನ್ನು ಬರವಣಿಗೆಯ ಮೂಲಕ ಅಭಿವ್ಯಕ್ತಿಪಡಿಸುವರು. |
| 5 | ಹಚ್ಚೇವು ಕನ್ನಡದ ದೀಪ | • ಲಭ್ಯವಿರುವ ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಾದ ಕಥೆ,ಲೇಖನ ಮತ್ತು ನಾಟಕಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವರು.<br>• ಸಂವೇದಾನಾತ್ಮಕ ಅಂಶಗಳಾದ ಜಾತಿ, ಧರ್ಮ, ಲಿಂಗ, ಆಚಾರ -ವಿಚಾರ ,ರೂಢಿ ಸಂಪ್ರದಾಯ ,ಉಡುಗೆ- ತೊಡುಗೆ ಮೊದಲಾದ ಅಂಶಗಳ ಬಗ್ಗೆ ಅನುಭವಗಳನ್ನು ಮೌಖಿಕವಾಗಿ ಅಭಿವ್ಯಕ್ತ ಪಡಿಸುವರು .ಪಠ್ಯದಲ್ಲಿನ ಸಾಹಿತ್ಯ ಓದಿ ಅದರ ಉಪಯೋಗದ ಬಗ್ಗೆ ಮಾತನಾಡುವರು. |
| 6 | ಬಿಡುಗಡೆಯ ಹಾಡು | • ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಲ್ಲಿ ರಚನಾಕಾರರ ದೃಷ್ಟಿಯಿಂದ ಅಭಿವ್ಯಕ್ತಿಸಿರುವದೃಷ್ಟಿಕೋನವನ್ನು ಅರ್ಥೈಸಿಕೊಂಡು ತನ್ನ ದೈನಂದಿನ ಅನುಭವಗಳೊಂದಿಗೆ ಅದರ ಸಾಮ್ಯತೆಗಳನ್ನು ಗಮನದಲ್ಲಿರಿಸಿಕೊಂಡು ತಮ್ಮ ವಿಚಾರವನ್ನು ಅಭಿವ್ಯಕ್ತಿ ಪಡಿಸುವರು. |
| 7 | ತಿರುಕನ ಕನಸು | • ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ,ಭಾವನಾತ್ಮಕ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು. |
| 8 | ಅಭಿಮನ್ಯು ಪರಾಕ್ರಮ | • ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ ,ಭಾವನಾತ್ಮಕ ಬರೆವಣಿಗೆ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ ಸಂಭಾಷಣೆ ಮತ್ತು ಅಭಿಪ್ರಾಯಗಳನ್ನು ಹಾಗು ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು. |

# ಗದ್ಯಭಾಗ (ಪ್ರಶ್ನೆಗಳು)

## ಗದ್ಯಪಾಠ – 1

## ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು

**ಕಲಿಕಾ ಫಲ**

- **ಲಭ್ಯವಿರುವ ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಾದ ಕವನ,ಕಥೆ,ಲೇಖನ ಮತ್ತು ನಾಟಕಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವರು.**
- **ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ,ಭಾವನಾತ್ಮಕ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು.**

| | ಕ್ಲಿಷ್ಟತೆಯ ಮಟ್ಟ | ಪ್ರಶ್ನೆ ಸಂಖ್ಯೆ |
|---|---|---|
| 1 | ಸುಲಭ | 10 |
| 2 | ಸಾಧಾರಣ | 06 |
| 3 | ಕಠಿಣ | 06 |
| | **ಒಟ್ಟು** | **22** |

| | ಉದ್ದಿಷ್ಟಗಳು | ಶೇಕಡ |
|---|---|---|
| 1. | ಜ್ಞಾನ | 15% |
| 2. | ತಿಳುವಳಿಕೆ | 40% |
| 3. | ಅಭಿವ್ಯಕ್ತಿ | 30% |
| 4. | ಪ್ರಶಂಸೆ | 15% |
| | **ಒಟ್ಟು** | **100** |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 70 % |
| ಭಾಷಾ ಚಟುವಟಿಕೆಗಳು | 30% |
| **ಒಟ್ಟು** | **100 %** |

### I. ಹೊಂದಿಸಿ ಬರೆಯಿರಿ

| | ಅ | ಆ |
|---|---|---|
| 1. | ೧. ರವಿ | ಅನ್ವರ್ಥನಾಮ (ಸುಲಭ) |
| | ೨. ನದಿ | ವಿಶೇಷಣ (ಸುಲಭ) |
| | ೩. ಜಾಣ | ಅಂಕಿತನಾಮ (ಸುಲಭ) |
| | ೪. ದೊಡ್ಡ | ರೂಢನಾಮ (ಸುಲಭ) |

### II ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ

2. ಹಾಡ್ಕತೆ (ಸುಲಭ)
3. ಭೀತಿ (ಸುಲಭ)
4. ಪ್ರಾಣಿಗಿಂಡಿ (ಸುಲಭ)
5. ಸಾಂತ್ವನ (ಸುಲಭ)

### III ಆವರಣದಲ್ಲಿ ಸೂಚಿಸಿದಂತೆ ಉತ್ತರಿಸಿ.

6. ಹುಡುಗಿಯು ಪೂಜೆಗೆ ಐದು ಹೂಗಳನ್ನು ತಂದಳು.(ಈ ವಾಕ್ಯದಲ್ಲಿರುವ ಸಂಖ್ಯಾ ವಾಚಕ ಪದ ಗುರುತಿಸಿ ಬರೆಯಿರಿ) (ಸುಲಭ)
7. ಅವರು ಮನೆಯಿಂದ ಶಾಲೆಗೆ ಬಂದರು.(ಈ ವಾಕ್ಯದಲ್ಲಿರುವ ಸರ್ವನಾಮ ಪದ ಗುರುತಿಸಿ ಬರೆಯಿರಿ) (ಸುಲಭ)
8. ಅಮ್ಮ ನೀಡಿದ ಹಣ್ಣು ತುಂಬಾ ಸಿಹಿಯಾಗಿತ್ತು.(ಈ ವಾಕ್ಯದಲ್ಲಿರುವ ವಿಶೇಷಣವನ್ನು ಗುರುತಿಸಿ ಬರೆಯಿರಿ) (ಸುಲಭ)
9. .ವೈದ್ಯರು ರೋಗಿಗೆ ಮದ್ದು ನೀಡಿದರು.(ಈ ವಾಕ್ಯದಲ್ಲಿರುವ ಕ್ರಿಯಾಪದ ಗುರುತಿಸಿ ಬರೆಯಿರಿ) (ಸುಲಭ)

**IV. ಒಂದು ವಾಕ್ಯದಲ್ಲಿ ಉತ್ತರಿಸಿ**.

10.ಪುಟ್ಟಜ್ಜಿ ಹೇಳಿದ ತರಾವರಿ ಕಥೆಗಳನ್ನು ಹೆಸರಿಸಿ. (ಸುಲಭ)

11.ಯುವಕ ಯಾರನ್ನು ಬಿಟ್ಟು ಕೊಡಲಾರೆ ಎಂದು ಹೇಳಿದ. ? (ಸುಲಭ)

12.ಜಿಂಕೆ ಯುವಕನನ್ನು ಹೇಗೆ ಉಪಚರಿಸಿತು. ? (ಸುಲಭ)

13.ಜಿಂಕೆಯ ಕುತ್ತಿಗೆಯಲ್ಲಿ ಏನಿತ್ತು? (ಸುಲಭ )

V. **ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ**

14. ಯುವಕ ಕಾಡಿನಲ್ಲಿ ಹೇಗೆ ಮನೆ ನಿರ್ಮಿಸಿದನು?(ಸಾಧಾರಣ)

15. ಹುಲಿಗೂ ಮತ್ತು ಯುವಕನಿಗೂ ನಡೆದ ಕಾಳಗದ ಬಗೆಗೆ ಬರೆಯಿರಿ. (ಸಾಧಾರಣ)

16. ಯುವಕ ಯುವತಿಯ ನಡುವೆ ಜಿಂಕೆಯ ಬಗೆಗೆ ನಡೆದ ಸಂಭಾಷಣೆ ವಿವರಿಸಿ. (ಸಾಧಾರಣ)

17. ನಾ.ಡಿಸೋಜರವರ ಯಾವುದಾದರೂ ಎರಡು ಕೃತಿಗಳನ್ನು ಹೆಸರಿಸಿ. (ಸಾಧಾರಣ)

**VI ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**.

18. ನಿಮಗೆ ತಿಳಿದಿರುವ ಯಾವುದಾದರೂ ಒಂದು ಹಾಡ್ಗತೆಯನ್ನು ಬರೆಯಿರಿ.(ಕಠಿಣ)

19 .ಸಣ್ಣ ಕಥೆ ಹಾಗೂ ಹಾಡ್ಗಗೆ ಇರುವ ವ್ಯತ್ಯಾಸ ತಿಳಿಸಿ. (ಕಠಿಣ)

20. ಈ ಪಾಠದಲ್ಲಿ ಬಂದಿರುವ ವ್ಯಕ್ತಿಗಳು ಹಾಗೂ ಪ್ರಾಣಿಗಳ ಹೆಸರನ್ನು ಬರೆಯಿರಿ. (ಸುಲಭ)

21. ಸಾಕುಪ್ರಾಣಿ ಕಾಡು ಪ್ರಾಣಿಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ . (ಕಠಿಣ)

22. ಯುವಕ ಮತ್ತು ಕಾಡು ಪ್ರಾಣಿಗಳ ಒಡನಾಟ ಹೇಗಿತ್ತು? (ಕಠಿಣ)

## ಗದ್ಯಪಾಠ - 2
## ಸೀನ ಸೆಟ್ಟರು ನಮ್ಮ ಟೀಚರು

**ಕಲಿಕಾ ಫಲ**

- **ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ,ಭಾವನಾತ್ಮಕ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು.**
- **ತಾವು ಕಂಡ ಚಿತ್ರ,ಘಟನೆ ಅಥವಾ ದೃಶ್ಯವನ್ನು ಕುರಿತು ಪಡೆದ ಅನುಭವಗಳನ್ನು ತಮ್ಮ ಸೃಜನಾತ್ಮಕತೆಯೊಂದಿಗೆ ಮೌಖಿಕ,ಲಿಖಿತ ಹಾಗೂ ಆಂಗಿಕವಾಗಿ ವ್ಯಕ್ತಪಡಿಸುವರು.**

| **ಕ್ಲಿಷ್ಟತೆಯ ಮಟ್ಟ** | | **ಪ್ರಶ್ನೆಗಳ ಸಂಖ್ಯೆ** |
|---|---|---|
| 1 | ಸುಲಭ | 05 |
| 2 | ಸಾಧಾರಣ | 04 |
| 3 | ಕಠಿಣ | 06 |
| **ಒಟ್ಟು** | | **15** |

| **ಉದ್ದಿಷ್ಟಗಳು** | | **ಶೇಕಡ** |
|---|---|---|
| 1. | ಜ್ಞಾನ | 20% |
| 2. | ತಿಳುವಳಿಕೆ | 40% |
| 3. | ಅಭಿವ್ಯಕ್ತಿ | 30% |
| 4. | ಪ್ರಶಂಸೆ | 10% |
| **ಒಟ್ಟು** | | **100** |

| **ಪ್ರಶ್ನೆಗಳ ಸ್ವರೂಪ** | **ಶೇಕಡ** |
|---|---|
| ಘಟಕ ಆಧಾರಿತ | 80 % |
| ಭಾಷಾ ಚಟುವಟಿಕೆಗಳು | 20% |
| **ಒಟ್ಟು** | **100 %** |

**I. ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಸೂಕ್ತ ಆಯ್ಕೆಗಳನ್ನು ಆರಿಸಿ ಬರೆಯಿರಿ.**

1. "ಇವರು ಇವತ್ತಿನಿಂದ ನಿಮ್ಮ ಟೀಚರು, ಇವರು ನಿಮಗೆಲ್ಲ ಏನೆಲ್ಲ ಕಲಿಸಿ ಕೊಡುತ್ತಾರೆ ನೋಡ್ತಾ ಇರಿ" ಈ ಮಾತನ್ನು ಹೇಳಿದವರು. (ಸುಲಭ)
   ಅ)ಮಾಂಡವಿ ಟೀಚರ್ ಆ)ತುಂಗಾ
   ಇ)ಸೀನ ಸೆಟ್ಟರು. ಈ)ಯಶೋದ

2. ಹಂಗಾರೆ ಸೀನಸೆಟ್ಟರು ಇನ್ನು ನಮ್ಮ ಟೀಚರು ಎಂಬಲ್ಲಿ ಬಂದಿರುವ ಸರ್ವನಾಮ ಪದ. (ಸುಲಭ)
   ಅ)ಸೀನ ಶೆಟ್ಟರು ಆ)ಇನ್ನೂ
   ಇ)ಟೀಚರು. ಈ)ನಮ್ಮ

3. ಎಂಥ ಮಗ ಆರಾಮ? ಅವ್ವ ಅಪ್ಪಯ್ಯ <u>ಚಂದಾ</u> ಅದಾರ? ಎಂಬಲ್ಲಿ ಗೆರೆ ಎಳೆದ ಪದದ ನಾನಾರ್ಥಪದ. (ಸುಲಭ)
   ಅ)ಚೆನ್ನಾಗಿ,ತೆರಿಗೆ. ಆ)ಚೆನ್ನಾಗಿ ಮರ.
   ಇ)ಚೆನ್ನಾಗಿ ಚಂದ್ರ. ಈ)ಚೆನ್ನಾಗಿ ಶಶಿ

4. ಮೂರ್ ಎಕರೆ ಜಮೀನಿನಲ್ಲಿ ಸೀನಿನ ಸೆಟ್ಟರು ಬೆಳೆಯುತ್ತಿದ್ದ ಬೆಳೆ. (ಸುಲಭ)
   ಅ)ರಾಗಿ. ಆ)ಸಾಸಿವೆ.
   ಇ)ಕಡಲೆ. ಈ)ಭತ್ತ

5. ನಾಟಿ ಮುಗಿದ ಮೇಲೆ ಇನ್ನು ಯಾವಾಗ <u>ಹೊಡೆ</u> ಹೊರಟಿತೋ? ಎಂಬಲ್ಲಿ ಹೊಡೆ ಪದದ ಅರ್ಥ. (ಸುಲಭ)
   ಅ) ಬೆತ್ತದ ಏಟು. ಆ)ಕಾಳು ತುಂಬುವ ಮೊದಲು ಕಾಣುವ ಪೈರಿನ ತುದಿ.
   ಇ) ಪೈರಿನ ಸಸಿ ನೆಡುವುದು ಈ)ಒಣಗಿದ ಸಸಿಯ ತುದಿ

6. ಶ್ರೀಮತಿ ಗಾಯತ್ರಿ ಯವರು ಬರೆದ ಮಕ್ಕಳ ಸೃಜನಶೀಲ ಕಲಿಕೆ ಸುತ್ತ ಹೆಣೆದ ಕಾದಂಬರಿ. (ಸುಲಭ)
   ಅ)ತೊತ್ತೋಚಾನ್. ಆ)ಗೆಳೆಯರಿಗಾಗಿ ಪರಿಸರ.
   ಇ)ತುಂಗಾ. ಈ) ಗಂಗ

II. 7. **ನೀಡಿರುವ ಚಿತ್ರಕ್ಕೆ ಸೂಕ್ತ ಶೀರ್ಷಿಕೆಯನ್ನು ನೀಡಿರಿ.** (ಸಾಧಾರಣ)



8 .ಬೆಳೆ,ಮಳೆ,ಕಳೆ,ಕೊಳೆ ಪದಗಳ ಬಳಸಿಕೊಂಡು ಕಿರುಕವನ ರಚಿಸಿರಿ. (ಸಾಧಾರಣ)
9. ಸೀನ ಸೆಟ್ಟರು ನಮ್ಮ ಟೀಚರು ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು ಏಕೆ? (ಸಾಧಾರಣ)
10. ಅವರು,ಇವರು,ಅವನು,ನೀನು,ಅದು,ನಾವು,ನೀನು,ಇವಳು,ಇವರು ಪದಗಳನ್ನು ಉತ್ತಮ ಮಧ್ಯಮ ಪ್ರಥಮ ಪುರುಷ ಸರ್ವನಾಮಗಳಾಗಿ ವಿಂಗಡಿಸಿ ಬರೆಯಿರಿ. (ಸಾಧಾರಣ)

III **ಕೆಳಗಿನ ಪ್ರಶ್ನೆ ಗಳಿಗೆ ಉತ್ತರಿಸಿ.**

11.ನೀಡಿರುವ ಚಿತ್ರದ ಬಗ್ಗೆ ನಿಮ್ಮದೇ ಅಭಿಪ್ರಾಯವನ್ನು ನಾಲ್ಕು ವಾಕ್ಯಗಳಲ್ಲಿ ಬರೆಯಿರಿ. (ಕಠಿಣ)



12. ಹಳ್ಳಿ ಜೀವನವು ನಗರ ಜೀವನಕ್ಕಿಂತ ಉತ್ತಮವಾದದ್ದು ಹೇಗೆಂದು ಸಮರ್ಥಿಸಿರಿ. (ಕಠಿಣ)

13. ನೀಡಿರುವ ಚಿತ್ರದಲ್ಲಿರುವ ರೈತರಿಗೆ ನಿಮ್ಮದೇ ಹೆಸರು ನೀಡಿ ಅವರು ಏನೆಲ್ಲಾ ಮಾತನಾಡುತ್ತಿರಬಹುದು ಎಂಬುದನ್ನು ಸಂಭಾಷಣೆಯಲ್ಲಿ ಬರೆಯಿರಿ. (ಕಠಿಣ)




.

**14.** "ರೈತ ಅನ್ನದಾತ ನಮಗೆಲ್ಲಾ ಉಪಕಾರಿ" ಎಂಬ ಮಾತನ್ನು ಸಮರ್ಥಿಸಿ. (ಕಠಿಣ)

IV **ನೀಡಿರುವ ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ**.

15.

"ಹಂಗಾರೆ ಸೀನ ಸೆಟ್ರು ಇನ್ನು ನಮ್ಮ ಟೀಚರು" ಎಂದು ತುಂಗಾ ನಕ್ಕಳು.

"ನಾ ಟೀಚರಲ್ಲ, ಎಂತಾ ಅಲ್ಲ, ನಾನೊಬ್ಬ ಪಡಪೋಶಿ ರೈತ. ನಿಮ್ಮ ಹೆಡ್ ಮೇಡಮ್ಮ ನಿಮ್ಗೆಲ್ಲಾ ಗದ್ದೆ ಕೆಲ್ಸ ಹೇಳ್ಕೊಡಾಕೆ ನನ್ನ ಕರ್ಸಿದಾರೆ"ಎಂದರು. ಸಂಕೋಚ ತಮಾಷೆಯಿಂದ ಸೀನ ಸೆಟ್ಟರು, ಮಾಂಡವಿ ಆತನ ಪಕ್ಕಕ್ಕೇ ನಿಂತು," ಹೌದು,ಹೌದು, ಇವರು ನಿಮ್ಮ ಬೇಸಾಯದ ಟೀಚರು, ನಿಮಗೆ ಬೇಸಾಯದಲ್ಲಿ ಸಹಾಯ ಮಾಡಲು ಇವರು ಒಪ್ಪಿಕೊಂಡಿರುವುದು ನಮ್ಮ ಪುಣ್ಯ . ಸರಿ ಮೇಷ್ಟ್ರು, ಈಗ ನೀವು ಪ್ರಾರಂಭಿಸಬಹುದು"ಎಂದರು.

ಚಿಣ್ಣರ ಲೋಕದ ಬಹುಪಾಲು ಮಕ್ಕಳು ರೈತ ಕುಟುಂಬದವರೇ. ಒಂದಲ್ಲಾ ಒಂದು ರೀತಿಯಲ್ಲಿ ಬೇಸಾಯದಲ್ಲಿ ತೊಡಗಿ ಕೊಳ್ಳುತ್ತಿದ್ದ ಅವರಿಗೆ ಹೊಸದಾಗಿ ಬೇಸಾಯವನ್ನೇನೂ ಕಲಿಸಬೇಕಾಗಿರಲಿಲ್ಲ. ಆದರೆ ಶಾಲೆಯ ಕಲಿಕೆಯಲ್ಲಿ ಬೇಸಾಯವನ್ನು ಅಳವಡಿಸುವ ಮಾಂಡವಿಯ ಉದ್ದೇಶವೇ ಬೇರೆಯಾಗಿತ್ತು. ಶಾಲಾ ಶಿಕ್ಷಣ ನಿಜ ಬದುಕಿನ ಜೊತೆಗೆ ಹಾಸು ಹೊಕ್ಕಿನ ಸಂಬಂಧ ಹೊಂದಿರಬೇಕೆಂಬುದೇ ಮಾಂಡವಿಯ ನಂಬಿಕೆಯಾಗಿತ್ತು. ಅದೇ ಅವರ ಶಿಕ್ಷಣ ಮಾದರಿಯ ತಳಹದಿ ಕೂಡ. ಶಾಲಾ ಶಿಕ್ಷಣದಲ್ಲಿ ಅವರು ಬೇಸಾಯವನ್ನು ಅಳವಡಿಸಲು ಮುಖ್ಯ ಕಾರಣ ಇದಾಗಿದ್ದರೂ ಕೂಡ ಅದು ಇನ್ನೂ ಅನೇಕ ವಿಚಾರಗಳಿಗೆ ಸಹಾಯವಾಗಿತ್ತು.

೧. ಬೇಸಾಯದ ಟೀಚರು ಯಾರು ? (ಸುಲಭ)

೨. ಚಿಣ್ಣರ ಲೋಕದ ಬಹುಪಾಲು ಮಕ್ಕಳು ಯಾವ ಕುಟುಂಬದಿಂದ ಬಂದವರಾಗಿರುತ್ತಾರೆ? (ಸುಲಭ)

೩. ಮಾಂಡವಿ ಟೀಚರ್ ಶಾಲಾ ಶಿಕ್ಷಣದಲ್ಲಿ ಬೇಸಾಯವನ್ನು ಅಳವಡಿಸಲು ಮುಖ್ಯವಾದ ಕಾರಣಗಳು ಯಾವುವು? (ಕಠಿಣ)

..............................................................................................................................................

## ಗದ್ಯಪಾಠ – 3
## ಹಿಲ್ಟನ್ ಹೆಡ್ ಚಳವಳಿ

**ಕಲಿಕಾ ಫಲ**

- **ಸ್ಥಳೀಯ ಸಾಮೂಹಿಕ ಮತ್ತು ಪ್ರಾಕೃತಿಕ ಸನ್ನಿವೇಶದಲ್ಲಿನ ಅಂಶಗಳನ್ನು ವಿಶ್ಲೇಷಿಸಿ ತಾರ್ಕಿಕವಾಗಿ ಉತ್ತರಿಸುವರು.(ಉದಾ.ವರದಕ್ಷಣೆ ಪರಿಣಾಮಗಳು, ಧೂಮಪಾನದಿಂದ ಆಗುವ ದುಷ್ಪರಿಣಾಮಗಳು)**

| | ಕ್ಲಿಷ್ಟತೆಯ ಮಟ್ಟ | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 12 |
| 2 | ಸಾಧಾರಣ | 15 |
| 3 | ಕಠಿಣ | 07 |
| | **ಒಟ್ಟು** | **34** |

| | ಉದ್ದಿಷ್ಟಗಳು | ಶೇಕಡ |
|---|---|---|
| 1. | ಜ್ಞಾನ | 19% |
| 2. | ತಿಳುವಳಿಕೆ | 58% |
| 3. | ಅಭಿವ್ಯಕ್ತಿ | 14% |
| 4. | ಪ್ರಶಂಸೆ | 09% |
| | **ಒಟ್ಟು** | **100** |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 57 % |
| ಭಾಷಾ ಚಟುವಟಿಕೆಗಳು | 43% |
| **ಒಟ್ಟು** | **100 %** |

### I. ಒಂದು ವಾಕ್ಯದಲ್ಲಿ ಉತ್ತರಿಸಿ.

**1.** 'ಹಿಲ್ಟನ್ ಹೆಡ್ ಚಳುವಳಿ' - ಈ ಗದ್ಯಭಾಗವನ್ನು ಬರೆದವರು ಯಾರು ? ( ಸುಲಭ )
2. ಲೇಖಕರು ಯಾವ ವರ್ಷ ಅಮೆರಿಕಾಗೆ ಹೋಗಿದ್ದರು ? (ಸುಲಭ)
3. ಹಿಲ್ಟನ್ ಹೆಡ್ ದ್ವೀಪ ಯಾವ ಸಾಗರದಲ್ಲಿದೆ ? (ಸುಲಭ)
4. ಅಮೆರಿಕದಲ್ಲಿ ವಾಸವಾಗಿದ್ದ ಮೂಲ ನಿವಾಸಿಗಳನ್ನು ಏನೆನ್ನುತ್ತಾರೆ ? (ಸುಲಭ)
5. ಶಶಿಧರ ವಿಶ್ವಾಮಿತ್ರ ರ ಮುಖ್ಯವಾದ ಕೃತಿಗಳಾವುವು ?(ಸಾಧಾರಣ)
6. ಯಾವ ದೇಶವನ್ನು ಸಾಹುಕಾರರ ನಾಡು ಎಂದು ಕರೆಯುತ್ತಿದ್ದರು ? (ಸಾಧಾರಣ)
7. ಹಿಲ್ಟನ್ ಹೆಡ್ ನಲ್ಲಿ ಬಂದಿಳಿಯುವ ಶ್ರೀಮಂತರ ಉಡುಗೆ ತೊಡುಗೆ ಹೇಗಿತ್ತು ? (ಸುಲಭ)
8. ಹಿಲ್ಟನ್ ಹೆಡ್ ದ್ವೀಪದಲ್ಲಿ ಏನೇನು ಕ್ರೀಡೆಗಳನ್ನು ಆಯೋಜಿಸಲಾಗುತ್ತಿತ್ತು ? (ಸಾಧಾರಣ)
9. ಶಶಿಧರ ವಿಶ್ವಾಮಿತ್ರ ರ ಆತ್ಮಕಥೆ ಯಾವುದು ? (ಸುಲಭ)
10. ಯಾವ ಆಟವನ್ನು ಶ್ರೀಮಂತರ ಆಟವೆಂದು ಕರೆಯಲಾಗುತ್ತದೆ ? (ಸುಲಭ)
11. ಕಡಲ ತಡಿಯ ಲೈಟ್ ಹೌಸನ್ನೇರಿದರೆ ಯಾವ ಚಿತ್ರಣವು ಕಾಣಸಿಗುತ್ತದೆ ? (ಸಾಧಾರಣ)
12. ಹಿಲ್ಟನ್ ಹೆಡ್ ನಲ್ಲಿರುವ ಸ್ಮಾರಕ ಯಾವುದು ? (ಸುಲಭ).
13. ಯಾವ ಮರದ ಬಳಿ ಜನರು ಪರಿಸರ ಸಂರಕ್ಷಣೆಗೆ ಒಗ್ಗೂಡಿದ್ದರು ? (ಸುಲಭ)

### II. ಈ ಆಂಗ್ಲ ಪದಗಳಿಗೆ ಕನ್ನಡ ರೂಪ ಬರೆಯಿರಿ.

14.ಲಕ್ಸುರಿ (ಕಠಿಣ)
15.ಲಿಬರ್ಟಿ (ಕಠಿಣ)
16.ಐಡಿಯಾ (ಕಠಿಣ)
17.ಸೀಬೀಚ್ (ಕಠಿಣ)

### III. ವಿರುದ್ಧ ಪದ ಬರೆಯಿರಿ.

18.ಆಗಮನ (ಸಾಧಾರಣ )
19.ಸುಂದರ (ಸಾಧಾರಣ )
20.ಲಾಭ (ಸಾಧಾರಣ )
21. ಆಸಕ್ತಿ (ಸಾಧಾರಣ)

IV. **ಈ ಕೆಳಗಿನ ಪದಗಳ ಅರ್ಥ ಬರೆಯಿರಿ.**

22. ಪಚ್ಚೆ (ಸಾಧಾರಣ )
23. ಬಡ್ಡೆ (ಸಾಧಾರಣ )
24. ಪರ್ಯಾವರಣ (ಸಾಧಾರಣ)
25. ಅಭಿಯಂತರ (ಸಾಧಾರಣ)

**V. ಬಿಟ್ಟ ಸ್ಥಳ ತುಂಬಿರಿ.**

26. ಒಬ್ಬ ____________ಗೆ ಪರ್ಯಾವರಣದ ಸುಖ ದುಃಖಗಳಿಗೆ ಮನಸ್ಸು ಕೊಡುವ ಇಂಬಾಯಿತು.(ಸಾಧಾರಣ)
( ನೆಲದಲ್ಲಾಳಿಗೆ,ವಕೀಲನಿಗೆ, ವೈದ್ಯನಿಗೆ )
27. _________ ಮರಗಳನ್ನು ಕಡಿಯಲೇಕೂಡದುಎನ್ನುವ ಚಳುವಳಿ ಆರಂಭವಾಯಿತು.(ಸಾಧಾರಣ )
( ಆಲದ,ಮಾವಿನ, ಓಕ್ )
28. ಓಕ್ ಮರದ ಸಾನ್ನಿಧ್ಯದಲ್ಲೇ ಎಷ್ಟೋ _____ಗಳಾಗಿವೆಯಂತೆ.(ಸುಲಭ)
( ಕೊಲೆ, ವಿವಾಹ, ಜಗಳ )
29. _________ ದಶಕದಲ್ಲಿ ಪರಿಸರ ಸಂರಕ್ಷಣೆಗಾಗಿ ಜನ ಒಗ್ಗೂಡಿ ಪಣತೊಟ್ಟಿದ್ದು ಈ ಮರದಲ್ಲಿಯೇ. (ಸಾಧಾರಣ )
( ಐವತ್ತರ, ಅರವತ್ತರ, ಎಪ್ಪತ್ತರ )
30. ಯುರೋಪಿಯನ್ನರ ಆಗಮನವಾದ ಮೇಲೆ ಅಮೇರಿಂಡಿಯನ್ನರ ಸಮುದಾಯವು _______ ಆಯಿತು. (ಸಾಧಾರಣ )
( ಅಭಿವೃದ್ಧಿ, ಶಿಕ್ಷಿತ, ಧೂಳೀಪಟ )

VI.**ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

31. ಯುರೋಪಿಯನ್ನರು ಬಂದ ಮೇಲೆ ಹಿಲ್ಟನ್ ಹೆಡ್ ನಲ್ಲಿ ಏನೇನು ಬದಲಾವಣೆಗಳಾದವು ?(ಕಠಿಣ )
32. ಹಿಲ್ಟನ್ ಹೆಡ್ ಚಳವಳಿ ಈ ಗದ್ಯಭಾಗದಲ್ಲಿ ಬಂದಿರುವ ಆಂಗ್ಲ ಪದಗಳನ್ನು ಸಂಗ್ರಹಿಸಿ ಬರೆಯಿರಿ.(ಸುಲಭ)
33. ಹಿಲ್ಟನ್ ಹೆಡ್ ಮೊದಲು ಹೇಗಿತ್ತು ?(ಸುಲಭ)
34. ಹಿಲ್ಟನ್ ಹೆಡ್ ನ ಸ್ಮಾರಕ ಮರದ ಬಗ್ಗೆ ಬರೆಯಿರಿ.(ಕಠಿಣ)

.............................................................................................................................................

**ಗದ್ಯಪಾಠ – 4**

## ಮೈಲಾರ ಮಹದೇವ

**ಕಲಿಕಾ ಫಲ**

- **ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ,ಭಾವನಾತ್ಮಕ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು.**
- **ತಾವು ಕಂಡ ಚಿತ್ರ,ಘಟನೆ ಅಥವಾ ದೃಶ್ಯವನ್ನು ಕುರಿತು ಪಡೆದ ಅನುಭವಗಳನ್ನು ತಮ್ಮ ಸೃಜನಾತ್ಮಕತೆಯೊಂದಿಗೆ ಮೌಖಿಕ,ಲಿಖಿತ ಹಾಗೂ ಆಂಗಿಕವಾಗಿ ವ್ಯಕ್ತಪಡಿಸುವರು.**

| **ಕ್ಲಿಷ್ಟತೆಯ ಮಟ್ಟ** | | **ಪ್ರಶ್ನೆಗಳ ಸಂಖ್ಯೆ** |
|---|---|---|
| 1 | ಸುಲಭ | 12 |
| 2 | ಸಾಧಾರಣ | 10 |
| 3 | ಕಠಿಣ | 05 |
| **ಒಟ್ಟು** | | **27** |

| **ಉದ್ದಿಷ್ಟಗಳು** | | **ಶೇಕಡ** |
|---|---|---|
| 1. | ಜ್ಞಾನ | 20% |
| 2. | ತಿಳುವಳಿಕೆ | 30% |
| 3. | ಅಭಿವ್ಯಕ್ತಿ | 25% |
| 4. | ಪ್ರಶಂಸೆ | 15% |
| **ಒಟ್ಟು** | | **100** |

| **ಪ್ರಶ್ನೆಗಳ ಸ್ವರೂಪ** | **ಶೇಕಡ** |
|---|---|
| ಘಟಕ ಆಧಾರಿತ | 70 % |
| ಭಾಷಾ ಚಟುವಟಿಕೆ | 30% |
| **ಒಟ್ಟು** | **100 %** |

I. **ಹೊಂದಿಸಿ ಬರೆಯಿರಿ** ( ಸುಲಭ)

1. ೧.ದಂಡಿಯಾತ್ರೆ - ಪ್ರಕೃತಿ ಚಿಕಿತ್ಸೆ
   ೨. ಚರಕ - ಉಪ್ಪಿನ ಸತ್ಯಾಗ್ರಹ
   ೩.ಸೇವಾಶ್ರಮ - ಸೆರೆಮನೆ
   ೪.ಹಿಂಡಲಗಾ - ನೂಲು

II. **ಕೆಳಗಿನ ವಾಕ್ಯಗಳಲ್ಲಿ ವಿಶೇಷ್ಯ ಮತ್ತು ವಿಶೇಷಣಗಳನ್ನು ಬರೆಯಿರಿ**.

2. ಅವರು ಮನೆಯನ್ನು ದೊಡ್ಡದಾಗಿ ಕಟ್ಟಿದ್ದಾರೆ. (ಸುಲಭ)
3. ರವಿಯು ತುಂಬಾ ಚೆನ್ನಾಗಿ ಓದುತ್ತಾನೆ. ( ಸುಲಭ )
4. ಸೌಮ್ಯ ಬಹಳ ಸುಂದರವಾಗಿದ್ದಾಳೆ. ( ಸುಲಭ )
5. ರಾತ್ರಿ ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತವೆ. ( ಸುಲಭ )

**III. ಗುಂಪಿಗೆ ಸೇರದ ಪದ ಆರಿಸಿ ಬರೆ**

6.ನೆಲ, ರಾತ್ರಿ, ಬ್ಯಾಂಕ್ . ಹಗಲು --------- ( ಸುಲಭ )

7.ಕಾರ್ಡು, ಸರ್ಕಾರ , ಕಪ್ಪು , ಇಸ್ತ್ರಿ----------- ( ಸುಲಭ )

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

8. ನಿಮಗೆ ತಿಳಿದಿರುವ ಐದು ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳನ್ನು ಬರೆಯಿರಿ. ( ಸುಲಭ )
9. ನಾವು ಸ್ವದೇಶಿ ವಸ್ತುಗಳನ್ನೇ ಬಳಕೆ ಮಾಡಬೇಕು. ಏಕೆ ? ( ಸಾಧಾರಣ )

10.ಬಾಲ್ಯದಿಂದಲೇ ಏಕೆ ದೇಶಪ್ರೇಮವನ್ನು ಬೆಳಸಿಕೊಳ್ಳಬೇಕು? ( ಸಾಧಾರಣ )

11.ಯಾವುದಾದರೂ ಮೂರು ಸ್ವಾತಂತ್ರ ಚಳುವಳಿಯ ಹೆಸರುಗಳನ್ನು ತಿಳಿಸಿ. ( ಸಾಧಾರಣ )

12.ಅಂದು ಜನರಿಗೆ ಖಾದಿ ಬಟ್ಟೆಯ ಮೇಲೆ ಅಪಾರ ಗೌರವವಿರಲು ಕಾರಣವೇನು? ( ಕಠಿಣ )

13.ಸಬರಮತಿ ಆಶ್ರಮದ ಕುರಿತಂತೆ, ನಿಮ್ಮ ಅಭಿಪ್ರಾಯವನ್ನು ಬರೆಯಿರಿ. ( ಕಠಿಣ )

14.ಸೆರೆಮನೆಗೂ ಮತ್ತು ಅರಮನೆಗೂ ಇರುವ ವ್ಯತ್ಯಾಸಗಳನ್ನು ಬರೆಯಿರಿ. (ಕಠಿಣ )

15.ನಾವು ಶಿಸ್ತು ಬದ್ಧ ವ್ಯಾಯಾಮವನ್ನು ರೂಡಿಸಿಕೊಳ್ಳಬೇಕು ಏಕೆ? ( ಸಾಧಾರಣ)

16.ಅಹಿಂಸಾತ್ಮಕ ಹೋರಾಟದ ಉದ್ದೇಶವೇನು? ( ಕಠಿಣ )

17.ನಿಮಗೆ ಇಷ್ಟವಾದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರ ಬಗ್ಗೆ ನಾಲ್ಕೈದು ಸಾಲುಗಳಲ್ಲಿ ಬರೆಯಿರಿ. ( ಕಠಿಣ )

V. **ಮಾದರಿಯಲ್ಲಿ ಸೂಚಿಸಿರುವಂತೆ ವಿವರಣೆಗಳಿಗೆ ಹೊಂದುವ ಪದ ಬರೆಯಿರಿ**.

ಮಾದರಿ: ಪುಸ್ತಕಗಳನ್ನು ಸಂಗ್ರಹಿಸಿ ಓದಲು ಇಟ್ಟಿರುವ ಸ್ಥಳ- (ಗ್ರಂಥಾಲಯ)

18. ವನ್ಯಜೀವಿಗಳ ಸಂರಕ್ಷಿತ ಪ್ರದೇಶ_ (-----------------) ( ಸಾಧಾರಣ )
19. ಖೈದಿಗಳನ್ನು ಸೆರೆಯಲ್ಲಿ ಇಡುವ ಸ್ಥಳ......(---------------------------) ( ಸುಲಭ) )

20. ಬಟ್ಟೆ ನೇಯಲು ಉಪಯೋಗಿಸುವ ಯಂತ್ರ (-------------------------) ( ಸಾಧಾರಣ )
21.ಇವರ ಹುಟ್ಟುಹಬ್ಬವನ್ನು ಮಕ್ಕಳ ದಿನಾಚರಣೆಯಾಗಿ ಆಚರಿಸುತ್ತಾರೆ. (-------------------) ( ಸುಲಭ )

22. ನಿಮ್ಮ ಮನೆಯಲ್ಲಿ ನೀವು ಬಳಸುವ ಸ್ವದೇಶಿ ವಸ್ತುಗಳನ್ನು ಪಟ್ಟಿ ಮಾಡಿ. ( ಸಾಧಾರಣ )

23. ನಿಮಗೆ ತಿಳಿದಿರುವ 10 ಅನ್ಯದೇಶಿಯ ಪದಗಳನ್ನು ಬರೆಯಿರಿ. ( ಸಾಧಾರಣ )

24. ನೀಡಿರುವ ವಿಷಯವನ್ನು ಕುರಿತು ಅಂತರ್ಜಾಲದಲ್ಲಿ ಮಾಹಿತಿ ಸಂಗ್ರಹಿಸಿ ಬರೆಯಿರಿ. ( ಕಠಿಣ )

೧.ಸ್ವಾತಂತ್ರ್ಯ ದಿನಾಚರಣೆ ೨.ಮಕ್ಕ ಳ ದಿನಾಚರಣೆ.

25. ನೀವು ಭೇಟಿ ನೀಡಿದ ಯಾವುದಾದರೂ ಒಂದು ಆಶ್ರಮದ ಬಗ್ಗೆ ನಿಮ್ಮದೇ ಮಾತುಗಳಲ್ಲಿ ಬರೆಯಿರಿ. ( ಕಠಿಣ )

26. ಅಸಹಕಾರ ಚಳುವಳಿಯ ಬಗ್ಗೆ 3-4 ವಾಕ್ಯಗಳಲ್ಲಿ ಬರೆಯಿರಿ. (ಕಠಿಣ
27. ಈ ಕೆಳಗಿನ ಚಿತ್ರ ಯಾವ ಕಾರ್ಯಕ್ರಮಕ್ಕೆ ಸಂಭಂದಿಸಿದೆ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯ ಬರೆಯಿರಿ. (ಕಠಿಣ )



........................................................................................................................

**ಗದ್ಯಪಾಠ 5**

## ಪರಿಸರ ಸಮತೋಲನ

**ಕಲಿಕಾ ಫಲ**

- **ತಾವು ಓದಿದ ಅಥವಾ ತಿಳಿದ ವಿಷಯವಸ್ತುವಿನ ಬಗ್ಗೆ ವೈಚಾರಿಕವಾಗಿ ವಿಮರ್ಶಿಸುತ್ತಾ ಏಕೆ? ಹೇಗೆ? ಏನು? ಎಂಬುದನ್ನು ಅರಿಯಲು ಪ್ರಯತ್ನಿಸುವರು ಅಥವಾ ಸಮೂಹದಲ್ಲಿ ಚರ್ಚಿಸುವರು.**

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 10 |
| 2 | ಸಾಧಾರಣ | 06 |
| 3 | ಕಠಿಣ | 04 |
| **ಒಟ್ಟು** | | **20** |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 15% |
| 2. | ತಿಳುವಳಿಕೆ | 40% |
| 3. | ಅಭಿವ್ಯಕ್ತಿ | 30% |
| 4. | ಪ್ರಶಂಸೆ | 15% |
| **ಒಟ್ಟು** | | **100** |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 57% |
| ಭಾಷಾ ಚಟುವಟಿಕೆಗಳು | 43% |
| **ಒಟ್ಟು** | **100 %** |

I. **ಆವರಣದಲ್ಲಿ ಸೂಚಿಸಿದಂತೆ ಉತ್ತರಿಸಿ.**

1. ಉಪ್ಪಿಗಿಂತ ರುಚಿಯಿಲ್ಲ , ತಾಯಿಗಿಂತ -------------- ( ಈ ಗಾದೆ ಮಾತನ್ನು ಪೂರ್ಣಗೊಳಿಸಿ) (ಸುಲಭ)
2. ಹುಲಿ,ನಾಯಿ,ಆನೆ, ಸಿಂಹ ( ಇವುಗಳಲ್ಲಿ ಸಸ್ಯಹಾರಿ ಪ್ರಾಣಿಯನ್ನು ಹೆಸರಿಸಿ. (ಸುಲಭ)
3. ಬಳ್ಳಿ,ಸೊಪ್ಪು,ಕಡಲು,ಚಿಗುರು. ( ಇವುಗಳಲ್ಲಿ ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ) (ಸುಲಭ)
4. ಊರಲ್ಲಿ,ಬೆಟ್ಟದಾವರೆ,ಮೊಟ್ಟೆಯಿಡು, ಒಂದೊಂದು ( ಇವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆಯಾದ ಪದ ) ( ಕಠಿಣ)

II. **ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

5. ದಟ್ಟವಾದ ಕಾಡು ಎಲ್ಲಿ ಬೆಳೆಯುತ್ತದೆ? (ಸುಲಭ)
6. ಬೀಜ ಪ್ರಸರಣ ಯಾವುದರ ಮೂಲಕ ನಡೆಯುತ್ತದೆ? (ಸುಲಭ)
7. ಪ್ರಾಣಿ ಪ್ರಾಣಿಗಳ ನಡುವೆ ಯಾವುದಕ್ಕಾಗಿ ಸ್ಪರ್ಧೆ ನಡೆಯುತ್ತದೆ? ( ಸಾಧಾರಣ )
8. ಸಸ್ಯ ಪ್ರಾಣಿ ಪಕ್ಷಿ ಸಂಕುಲ ಯಾವುದರಿಂದ ನಶಿಸಿ ಹೋಗುತ್ತಿದೆ? ( ಸಾಧಾರಣ )

### III. ಕೊಟ್ಟಿರುವ ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ

9. ನಿರ್ಮಾಣ ( ಸಾಧಾರಣ )
10. ಶತಮಾನ ( ಸಾಧಾರಣ )
11. ಮನಸೋಲು ( ಸಾಧಾರಣ )
12. ಹಿಂಬಾಲಿಸು ( ಸಾಧಾರಣ )

## IV. ಈ ಪದಗಳ ಅರ್ಥ ಬರೆಯಿರಿ

13. ಆಚ್ಛಾದನ ( ಕಠಿಣ )
14. ಆರ್ದ್ರತೆ ( ಕಠಿಣ )
15. ಕಿಸೆ ( ಸಾಧಾರಣ )
16. ಚಿಗರೆ ( ಕಠಿಣ)

## V. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

17. ಸರೋವರ ಕೆರೆ ಮತ್ತು ಹೊಂಡಗಳು ಬೇರೆ ಬೇರೆ ಕೆಲಸಕ್ಕೆ ಬಳಕೆಯಾಗುತ್ತಿವೆ. ಏಕೆ? ( ಕಠಿಣ )
18. ಯೋಜನೆ ತಯಾರಿಸುವ ವಿಜ್ಞಾನಿಗಳು ಯಾವ ರೀತಿಯ ಮುನ್ನೆಚ್ಚರಿಕೆ ವಹಿಸಬೇಕು? ( ಸಾಧಾರಣ )

## VI. ಈ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ

18. ಮೊಸಳೆ ಮತ್ತು ಹಾವುಗಳ ಸಂರಕ್ಷಣೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ತಿಳಿಸಿ. ( ಕಠಿಣ )
20. ಕಾಡನ್ನು ನಾಶ ಮಾಡುವುದರಿಂದ ಆಗುವ ದುಷ್ಪರಿಣಾಮಗಳೇನು? ( ಕಠಿಣ )

..............................................................

## ಗದ್ಯಪಾಠ – 6
## ಚಗಳಿ ಇರುವೆ

**ಕಲಿಕಾ ಫಲ**

- **ಸ್ಥಳೀಯ ಪ್ರಾಕೃತಿಕ ಸನ್ನಿವೇಶದಲ್ಲಿನ ಅಂಶಗಳನ್ನು ವಿಶ್ಲೇಶಿಸಿ ತಾರ್ಕಿಕವಾಗಿ ಉತ್ತರಿಸುವರು, ಮಾತನಾಡುವರು.**
- **ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಲ್ಲಿ ರಚನಾಕಾರರ ದೃಷ್ಟಿಯಿಂದ ಅಭಿವ್ಯಕ್ತಿಸಿರುವ ದೃಷ್ಟಿಕೋನವನ್ನು ಅರ್ಥೈಸಿಕೊಂಡು ತನ್ನ ದೈನಂದಿನ ಅನುಭವಗಳೊಂದಿಗೆ ಅದರ ಸಾಮ್ಯತೆಗಳನ್ನು ಗಮನದಲ್ಲಿರಿಸಿಕೊಂಡು ತಮ್ಮ ವಿಚಾರವನ್ನು ಅಭಿವ್ಯಕ್ತಿ ಪಡಿಸುವರು.**

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 08 |
| 2 | ಸಾಧಾರಣ | 09 |
| 3 | ಕಠಿಣ | 05 |
| ಒಟ್ಟು | | 22 |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 22% |
| 2. | ತಿಳುವಳಿಕೆ | 50% |
| 3. | ಅಭಿವ್ಯಕ್ತಿ | 14% |
| 4. | ಪ್ರಶಂಸೆ | 14% |
| ಒಟ್ಟು | | 100 |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ | 77% |
| ಭಾಷಾ ಚಟುವಟಿಕೆ | 23% |
| ಒಟ್ಟು | 100 % |

### I. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ.

1. ಚಗಳಿ ಇರುವೆಗಳು ಉತ್ಪಾದಿಸುವ ರಾಸಾಯನಿಕ ವಸ್ತುವಿಗೆ ________ ಎಂದು ಹೆಸರು. (ಸಾಧಾರಣ )
2. 'ಕೊಟ್ಟೆ' ಎಂದರೆ _______ ( ಸಾಧಾರಣ )
3. ಜೇನುಗಳಲ್ಲಿ ರಾಣಿ ಜೇನು ಇರುವಂತೆ ಇರುವೆಗಳಲ್ಲಿ ________ ಇರುತ್ತದೆ. ( ಸಾಧಾರಣ )
4. ಅರಸನ ಮನೆ'. ಇದರಲ್ಲಿ ಅರಸನ ಎಂಬುದು ಪೂರ್ವ ಪದ ಆದರೆ ಮನೆ ಎಂಬುದು ________ ಪದ ( ಸಾಧಾರಣ )
5. "ಸ್ವಾಮಿ, ಬನ್ನಿ, ದಯಮಾಡಿ ಕುಳಿತುಕೊಳ್ಳಿ". ಈ ಮಾತಿನಲ್ಲಿರುವ ಪ್ರಮುಖ ಭಾವನೆ ___________ ಆಗಿದೆ. (ಸುಲಭ)

### II. ಒಂದು ವಾಕ್ಯದಲ್ಲಿ ಉತ್ತರಿಸಿ.

6. ಮಲೆನಾಡಿನ ಜನರಿಗೆ ಅತ್ಯಂತ ಚಿರಪರಿಚಿತವಾದ ಇರುವೆ ಯಾವುದು ( ಸಾಧಾರಣ )
7. ನಿನಗೆ ಚಿರಪರಿಚಿತವಾದ ಇರುವೆ ಯಾವುದು? (ಸುಲಭ)
8. ಇರುವೆಗಳಲ್ಲಿ ಇರುವ ಮೌಲ್ಯಗಳು ಯಾವುವು? ( ಕಠಿಣ )
9. ಚಗಳಿ ಇರುವೆಗಳಿಗೆ ಪ್ರಿಯವಾದ ಕೀಟಗಳು ಯಾವುವು? ( ಸಾಧಾರಣ )
10. ಅರಸನ ಮನೆ = ಅರಮನೆ ಆದರೆ ಮಳೆಯ ಕಾಲ ಏನಾಗುತ್ತದೆ? ( ಸಾಧಾರಣ )

## III. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

11. ಗೋಪಾಲಕ ಇರುವೆಗಳು ಎಂದರೆ ಯಾರು? ಇವರ ಕೆಲಸವೇನು? ( ಕಠಿಣ )
12. ಚಗಳಿ ಇರುವೆ ಶತ್ರುವನ್ನು ಹೇಗೆ ಎದುರಿಸುತ್ತದೆ? ( ಕಠಿಣ )
13. ಚಗಳಿ ಇರುವೆಗಳಿಂದ ಮಲೆನಾಡಿಗರು ತಯಾರಿಸುವ ಆಹಾರ ಪದಾರ್ಥಗಳು ಯಾವುವು? ( ಸಾಧಾರಣ )
14. ಮನುಷ್ಯನಿಗೆ ಉಪಯುಕ್ತವಾಗಿರುವ ಕೀಟಗಳು ಯಾವುವು? (ಸುಲಭ)
15. ನೀವು ನೋಡಿರುವ ಇರುವೆಗಳ ವಿಧಗಳನ್ನು ಹೆಸರಿಸಿ. (ಸುಲಭ)
16. ಕೆ ಪಿ ಪೂರ್ಣಚಂದ್ರ ತೇಜಸ್ವಿ ರವರ ಸ್ಥಳ, ಕಾಲ, ಕೃತಿಗಳನ್ನು ಪರಿಚಯಿಸಿ. ( ಸಾಧಾರಣ )
17. ಕೆಂಪಿರುವೆ ಗೂಡು ಕಟ್ಟುವ ರೀತಿಯನ್ನು ವರ್ಣಿಸಿ. ( ಕಠಿಣ )
18. ಇವುಗಳ ಅರ್ಥ ಏನು? ( ಸಾಧಾರಣ )
    ಅ)ಲಾರ್ವ ಆ)ಮಾಳಿಗೆ ಇ)ಫಿರೋಮನ್
19. ಈ ಪದಗಳಿಗೆ ಒಂದೊಂದು ವಾಕ್ಯ ರಚಿಸಿ (ಸುಲಭ)
    ಅ) ಪ್ರಾರ್ಥನೆ ಆ)ಮೆಚ್ಚುಗೆ
20. 'ಸಮೋಸ' ಎಂಬುದು ಒಂದು ತಿಂಡಿ ಯಾದರೆ, 'ಸಮಾಸ' ಎಂಬುದು ಏನು? ಒಂದು ಉದಾಹರಣೆ ಸಹಿತ ತಿಳಿಸಿ. ( ಸಾಧಾರಣ )

## IV. ಐದು- ಆರು ವಾಕ್ಯಗಳಲ್ಲಿ ಉತ್ತರಿಸಿ.

21. ಚಗಳಿ ಇರುವೆಗಳು ಉಪಕಾರಿಗಳೂ ಹೌದು, ಉಪದ್ರವಕಾರಿಗಳೂ ಹೌದು ಎಂಬ ಹೇಳಿಕೆಯನ್ನು ವಿಶ್ಲೇಷಿಸಿ, ಸಮರ್ಥಿಸಿ. ( ಕಠಿಣ )
22. ಇವುಗಳು ಗೂಡನ್ನು ಹೇಗೆ ನಿರ್ಮಿಸುತ್ತವೆ ಎಂಬುದನ್ನು ವರ್ಣಿಸಿ.
    ಅ) ಜೇನುಹುಳು ಆ) ರೇಷ್ಮೆ ಹುಳು. ( ಕಠಿಣ )

## ಗದ್ಯಪಾಠ -7
## ಬಿಲ್ಲಹಬ್ಬ

**ಕಲಿಕಾಫಲ**

- **ಲಭ್ಯವಿರುವ ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಾದ ಕವನ ಕಥೆ ಲೇಖನ ಮತ್ತು ನಾಟಕಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವರು.**
- **ತಾವು ಕಂಡ ಚಿತ್ರಘಟನೆ, ಸನ್ನಿವೇಶ ಚಿತ್ರಸರಣಿ ಅಥವಾ ದೃಶ್ಯವನ್ನು ಕುರಿತು ಪಡೆದ ಅನುಭವಗಳನ್ನು ತಮ್ಮ ಸೃಜನಾತ್ಮಕತೆಯೊಂದಿಗೆ ಮೌಖಿಕ ,ಲಿಖಿತ ಹಾಗೂ ಆಂಗಿಕವಾಗಿ ವ್ಯಕ್ತಪಡಿಸುವರು.**

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 38 |
| 2 | ಸಾಧಾರಣ | 08 |
| 3 | ಕಠಿಣ | 14 |
| ಒಟ್ಟು | | 60 |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 64% |
| 2. | ತಿಳುವಳಿಕೆ | 22% |
| 3. | ಅಭಿವ್ಯಕ್ತಿ | 10% |
| 4. | ಪ್ರಶಂಸೆ | 08% |
| ಒಟ್ಟು | | 100 |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 75% |
| ಭಾಷಾ ಚಟುವಟಿಕೆ | 25% |
| **ಒಟ್ಟು** | **100 %** |

### I. ಆವರಣದಲ್ಲಿ ಸೂಚಿಸಿದಂತೆ ಉತ್ತರಿಸಿ.

1. ರಾಜ ( ಈ ಪದದ ತತ್ಸಮ ರೂಪ ಬರೆಯಿರಿ) (ಸುಲಭ)
2. ಬಂಧನ ( ಈ ಪದದ ವಿರುದ್ಧ ಪದ ಬರೆಯಿರಿ) (ಸುಲಭ)
3. " ಅರಸನ ಅಂಕಯಿಲ್ಲ ದೆವ್ವದ ಕಾಟ ಇಲ್ಲ" (ಈ ಮಾತನ್ನು ಯಾರು ಯಾರಿಗೆ ಹೇಳಿದರು) (ಸುಲಭ)
4. ದೇವಕಿ, ವಸುದೇವ, ನಂದ ,ಕಂಸ (ತಾರ್ಕಿಕವಾಗಿ ಚಿಂತಿಸಿ ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ) (ಸುಲಭ)
5. ತಾಯಿ (ಈ ಪದಕ್ಕೆ ಪುರುಷ ಲಿಂಗ ಪದ ಬರೆಯಿರಿ) (ಸುಲಭ)
6. ರಾಕ್ಷಸ (ಬಹುವಚನ ರೂಪವಾಗಿ ಪರಿವರ್ತಿಸಿ ) (ಸುಲಭ)
7. ಕೈ ತೊಳೆ = __________ + _____________ = ______________
   (ಈ ಪದವನ್ನು ಬಿಡಿಸಿ ಸಮಾಸ ಹೆಸರು ತಿಳಿಸಿ ) (ಸುಲಭ)
8. ಶರ್ವರಿಗೂ ಹಾತ್ರ್ಕೀಯ ಸ್ವಾಗತ (ಈ ವಾಕ್ಯವನ್ನು ಶುದ್ಧ ರೂಪದಲ್ಲಿ ಬರೆಯಿರಿ) ( ಸಾಧಾರಣ )
9. ನೀನು ಇಲ್ಲೇನು ಮಾಡುತ್ತಿರುವೆ ? ( ಇಲ್ಲಿರುವ ಲೇಖನ ಚಿನ್ಹೆ ಗುರುತಿಸಿ ಹೆಸರಿಸಿ ) ( ಸಾಧಾರಣ )
10. ಭಾ.ತ,ರ.ಹಾ.ಮ ( ಅದಲು ಬದಲಾಗಿರುವ ಅಕ್ಷರವನ್ನು ಸರಿಪಡಿಸಿ ಅರ್ಥಪೂರ್ಣ ಪದ ರಚಿಸಿ ಬರೆಯಿರಿ) ( ಸಾಧಾರಣ )

## II.ಬಿಟ್ಟ ಸ್ಥಳ ಸೂಕ್ತ ಉತ್ತರದಿಂದ ತುಂಬಿರಿ.

11. ಕೃಷ್ಣನು—--------- ರಕ್ತ ಹೀರಿದನು. (ಸುಲಭ)
12. ಕೃಷ್ಣನ ಬಗ್ಗೆ---------- ಮತ್ತು ------- ಶೋಧನೆ ಮಾಡುತ್ತಿರುವವರು . (ಸುಲಭ)
13. ಕಂಸನ ಪರವಾಗಿ ------ಮತ್ತು ------- ರು ಕೆಲಸ ಮಾಡಲು ಬಂದವರು . (ಸುಲಭ)
14. ರಾಜಗೋಪುರದ ಇಡೀ ರಚನೆ —--------ಮೇಲೆ ನಿಂತಿರುತ್ತದೆ. . (ಸುಲಭ)
15. ಪಟ್ಟದ ಆನೆಯ ಹೆಸರು -------- ಆಗಿದೆ . (ಸುಲಭ)
16. ವಸುದೇವ ದೇವಕಿಯರು —---------ಲ್ಲಿದ್ದಾರೆ. . (ಸುಲಭ)
17. ರಾಕ್ಷಸರು —------- ಕುಡಿಯುವವರು . (ಸುಲಭ)
18. ಮಥುರ ನಗರದಲ್ಲಿ ನಡೆಯುತ್ತಿದ್ದು ದ್ದು—----------- ಮಹೋತ್ಸವ. . (ಸುಲಭ)
19. ರಾಜನ ಮುಂದೆ ತಮ್ಮ ಶಕ್ತಿ ಪ್ರದರ್ಶಿಸಿದವರಿಗೆ —----------ಪ್ರಶಸ್ತಿ ಸಿಗುತ್ತದೆ. . (ಸುಲಭ)
20. ದೇವಕಿಯ ಪ್ರಕಾರ ಕೃಷ್ಣ —-------- ಮತ್ತು —---- ರ ಮಗ. . (ಸುಲಭ)

## III. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

21. ಕಂಸನ ಅರಮನೆಯಲ್ಲಿ ಗುಸು-ಗುಸು ಮಾತಾಡುತ್ತಿದ್ದವರು . (ಸುಲಭ)
    ಅ) ಮಂತ್ರಿ, ಸೈನಿಕ ಆ)ಮಂತ್ರಿ, ದುರ್ವಿಧ
    ಇ)ಮಂತ್ರಿ, ವೈದ್ಯ ಈ)ಮಂತ್ರಿ,ಸೇನಾಪತಿ

22. ಕೃಷ್ಣನ ಕೈಯಲ್ಲಿ ತೃಣಾವರ್ತ —--ಆಗಿ ಹೋದ. . (ಸುಲಭ)
    ಅ)ಛತ್ರಿ. ಆ) ಬುಗುರಿ.
    ಇ)ಬಾಡಿಗೆ. ಈ)ಬಂಡಿ

23. ಮಂತ್ರಿಯು ---------- ಹೆಬ್ಬಾಗಿಲನ್ನು ತಯಾರಿ ಮಾಡಿದ್ದನು. . (ಸುಲಭ)
    ಅ) ಕ್ರೀಡಾಂಗಣ ಆ) ಅರಮನೆ
    ಇ) ಒಡ್ಡೋಲಗ ಈ)ಸೆರೆಮನೆ

24. ಕುವಲಯಾಪೀಡ —------ಬಣ್ಣ ನೋಡಿದ್ರೆ ಮೈಮೇಲೆ ಬೀಳುತ್ತಿತ್ತು. (ಸುಲಭ)
    ಅ) ಕೆಂಪು ಆ)ಹಸಿರು
    ಇ) ಕಪ್ಪು ಈ)ಹಳದಿ

25. ವಸುದೇವನು ಕೃಷ್ಣನನ್ನು ನೋಡಿ ------ವರ್ಷಗಳಾಗಿತ್ತು . (ಸುಲಭ)
    ಅ) ಹತ್ತು ಆ) ಇಪ್ಪತ್ತು
    ಇ)ಹದಿನೈದು ಈ) ಹದಿನಾರು

26. ಕಂಸನು ಶೃಂಖಲೆಯನ್ನು —-------ರಿಂದ ಮಾಡಿಸಿದ್ದನು. (ಸುಲಭ)
    ಅ) ಕಬ್ಬಿಣ ಆ) ಅಪರಂಜಿ
    ಇ) ಬೆಳ್ಳಿ ಈ) ತಾಮ್ರ

27. —---------ನಗರದಲ್ಲಿ ಧನುರ್ಯಾಗ ಮಹೋತ್ಸವ ನಡೆಯುತ್ತಿತ್ತು. . (ಸುಲಭ)
    ಅ) ಮಥುರಾ ಆ) ದ್ವಾರಕ
    ಇ) ಗೋಕುಲ ಈ)ಕಾಳಿ

28. ಕಂಸನು ಲಕ್ಷ ಲಕ್ಷ ಮಕ್ಕಳನ್ನು ಸಾಯಿಸಿದ್ದು —---------ರಾತ್ರಿ. . (ಸುಲಭ)
ಅ) ಅಷ್ಟಮಿ ಆ) ನವಮಿ
ಇ)ದಶಮಿ ಈ)ಪಂಚಮಿ

29. ವಸುದೇವನ ಮೊದಲ ಹೆಂಡತಿ—------- ಆಗಿದ್ದಾಳೆ . (ಸುಲಭ)
ಅ) ಪೂತನಿ ಆ) ರೋಹಿಣಿ
ಇ) ದೇವಕಿ ಈ)ಯಶೋದೆ.

30. ಕಂಸನಿಂದ ಕೊಲ್ಲಲು ಸಾಧ್ಯವಾಗದೇ ಇರುವವನು —-------- ನಾಗಿದ್ದಾನೆ. (ಸುಲಭ)
ಅ) ಶಕಟ ಆ)ತೃಣಾವರ್ತ
ಇ)ಕೃಷ್ಣ ಈ)ಶೈಲಿಕ

**IV.ಒಂದು ವಾಕ್ಯದಲ್ಲಿ ಉತ್ತರಿಸಿ.**

31. ಕೃಷ್ಣ ನು ಪೂತನಿಗೆ ಏನು ಮಾಡಿದನು? (ಸುಲಭ)
32. ಕೃಷ್ಣನ ಕೈಯಲ್ಲಿ ಸಿಕ್ಕ ತೃಣಾವರ್ತ ಏನಾದ? . (ಸುಲಭ)
33. ಯಾವ ಬೆಟ್ಟ ಕೃಷ್ಣನ ಕೈಯಲ್ಲಿ ಛತ್ರಿಯಾಯಿತು? . (ಸುಲಭ)
34. ಗೂಢಾಚಾರ ಶೋಧನೆ ಮಾಡುತ್ತಿರುವವರು ಯಾರು? . (ಸುಲಭ)
35. ಕಂಸನ ಬಳಿ ಗೂಢಾಚಾರರನ್ನು ಕರೆತಂದವರು ಯಾರು? ( ಸುಲಭ )
36. ರಾಜಗೋಪುರದ ಕೀಲಿನ ರಚನೆ ಮಾಡಿದವರು ಯಾರು? . (ಸುಲಭ)
37. ಪಟ್ಟದಾನೆಯು ಯಾವ ಬಣ್ಣ ನೋಡಿದಾಗ ಮೈಮೇಲೆ ಬೀಳುತ್ತದೆ? . (ಸುಲಭ)
38. ವಸುದೇವನು ಏನನ್ನು ಕಂಸನಿಗೆ ಕೊಡಲು ಹೇಳುತ್ತಾನೆ? ( ಸಾಧಾರಣ )
39. ಕಂಸನು ಯಾವ ಕಥೆಯ ಬಗ್ಗೆ ನೆನಪಿಸುತ್ತಾನೆ? ( ಸಾಧಾರಣ )
40. ಮಥುರ ನಗರದಲ್ಲಿ ಯಾವ ಉತ್ಸವ ನಡೆಯುತ್ತಿರುತ್ತದೆ? . (ಸುಲಭ)

V. **ಕೊಟ್ಟಿರುವ ಪ್ರಶ್ನೆಗಳಿಗೆ 3 - 4 ವಾಕ್ಯದಲ್ಲಿ ಉತ್ತರಿಸಿ.**

41. ದುರ್ವಿಧನು ಪಟ್ಟದಾನೆಯನ್ನು ಹೇಗೆ ತಯಾರು ಮಾಡಿದ್ದನು? ( ಸಾದಾರಣ)
42. ಕಂಸನಿಗಿದ್ದ ರಾಜಕೀಯ ಅಭಿಪ್ರಾಯವೇನು? ( ಸಾಧಾರಣ )
43. ವಸುದೇವನು ಅಪ್ಪ-ಅಮ್ಮ ರ ಪುಣ್ಯ ಎಂದು ಯಾವುದನ್ನು ಹೇಳುತ್ತಾನೆ? ( ಸಾಧಾರಣ )
44. ಸಂಕೋಲೆ ಬಗ್ಗೆ ಕಂಸ ಏನೆಂದು ಹೇಳುತ್ತಾನೆ? ( ಸಾಧಾರಣ )
45. ಬಿಲ್ಲ ಹಬ್ಬದ ದಿನದಂದು ನಡೆಯುತ್ತಿದ್ದ ಧನುರ್ಯಾಗದ ಬಗ್ಗೆ ಬರೆಯಿರಿ. ( ಸಾಧಾರಣ )
46. ಬಯಲಲ್ಲಿದ್ದರೂ ಕಂಸನ ವೇದನೆ ಏನಾಗಿತ್ತು? ( ಸಾಧಾರಣ )
47. ಅಷ್ಟಮಿಯ ರಾತ್ರಿ ಹುಟ್ಟಿದ ಮಕ್ಕಳನ್ನುಕಂಸನು ಏನು ಮಾಡಿದನು? ( ಸಾಧಾರಣ )
48. ಕಂಸನು ಕೃಷ್ಣನನ್ನು ಏಕೆ ಕೊಲ್ಲುತ್ತೇನೆ ಎಂದು ಹೇಳುತ್ತಾನೆ? ( ಸಾಧಾರಣ )

VI. **ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು ಐದು ವಾಕ್ಯದಲ್ಲಿ ಉತ್ತರಿಸಿ.**

49. ಕಂಸನ ಕೈ ಯಮ ಪಾಶವಾಗುವುದು ಯಾವಾಗ? (ಕಠಿಣ )
50. ಕಂಸನು ಕ್ರೀಡಾಂಗಣಕ್ಕೆ ಇನ್ನೊಂದು ಬಾಗಿಲನ್ನು ಏಕೆ ನಿರ್ಮಿಸಬೇಕೆಂದು ಹೇಳುತ್ತಾನೆ? ( ಕಠಿಣ)
51. ಆನೆಯನ್ನು ಮದ್ದು ಹಾರಿಸಿ ಸುಟ್ಟುಬಿಡಿ- ಎನ್ನುವ ಕಂಸನ ಉದ್ದೇಶವೇನು? ( ಕಠಿಣ)
52. ಸೆರೆಮನೆಯ ಸುಖವನ್ನು ಕಂಸನು ಹೇಗೆ ವರ್ಣಿಸುತ್ತಾನೆ? ( ಕಠಿಣ )

53. ಕೃಷ್ಣನ ಬಗ್ಗೆ ಕಂಸನಿಗಿದ್ದ ಅನುಮಾನವೇನು? ( ಕಠಿಣ )
54. ತಾಯಿಯಾಗಿಯೂ ಕೃಷ್ಣ ನನ್ನ ಮಗನಲ್ಲ ಎನ್ನುವ ದೇವಕಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು? ( ಕಠಿಣ )
55. ರಾಜನಾಗಿದ್ದರೂ ಕಂಸನ ವೇದನೆ ಏನು? ( ಕಠಿಣ )
56. ಬಿಲ್ಲ ಹಬ್ಬ ನಾಟಕದಲ್ಲಿ ನಿಮಗಿಷ್ಟವಾದ ಪಾತ್ರವನ್ನು ವಿವರಿಸಿ. ( ಕಠಿಣ )

**VII. ಈ ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿ.**

57. ಯಮ ಪಾಶ ( ಸಾಧಾರಣ )
58. ಪಥ್ಯ. ( ಸಾಧಾರಣ )
59. ಚಿಂತಾಮಗ್ನ ( ಸಾಧಾರಣ )

**VIII. ಹೊಂದಿಸಿ ಬರೆಯಿರಿ.**

60.

| | | |
|---|---|---|
| ೧. | ವಸುದೇವ | ಹಳದಿ . (ಸುಲಭ) |
| ೨. | ರಾಜಗೋಪುರ. | ದೇವಕಿ . (ಸುಲಭ) |
| ೩. | ಪಟ್ಟದಾನೆ | ನಂದನ . (ಸುಲಭ) |
| ೪. | ಶೃಂಖಲೆ | ಕೀಲಿ . (ಸುಲಭ) |
| ೫. | ಬಲರಾಮ. | ಸ್ವರ್ಣ . (ಸುಲಭ) |
| ೬. | ಯಶೋಧೆ. | ರೋಹಿಣಿ . (ಸುಲಭ) |

.................................................................................................

## ಗದ್ಯಪಾಠ -8
## ಸಂಕ್ರಾಂತಿಯಂದು ಸುಖ-ದುಃಖ

**ಕಲಿಕಾ ಫಲ**

- **ಸೂಕ್ತ ಲೇಖನ ಚಿನ್ಹೆಗಳು ಮತ್ತು ಕಾಲ,ಲಿಂಗ ,ಮೊದಲಾದ ವ್ಯಾಕರಣಾಂಶಗಳ ಪ್ರಯೋಗ ಮಾಡುವರು.**
- **ಪಠ್ಯದಲ್ಲಿನ ಸಾಹಿತ್ಯ ಓದಿ ಅದರ ಉಪಯೋಗದ ಬಗ್ಗೆ ಮಾತನಾಡುವರು.**

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 04 |
| 2 | ಸಾಧಾರಣ | 08 |
| 3 | ಕಠಿಣ | 04 |
| ಒಟ್ಟು | | 16 |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 45% |
| 2. | ತಿಳುವಳಿಕೆ | 45% |
| 3. | ಅಭಿವ್ಯಕ್ತಿ | 10% |
| 4. | ಪ್ರಶಂಸೆ | 00% |
| ಒಟ್ಟು | | 100 |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ | 55% |
| ಭಾಷಾ ಚಟುವಟಿಕೆ | 45% |
| ಒಟ್ಟು | 100 % |

### I.ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಸೂಕ್ತ ಆಯ್ಕೆಗಳನ್ನು ಆರಿಸಿ ಬರೆಯಿರಿ.

1.ಭಾರತದಲ್ಲಿ ಎಷ್ಟೊಂದು ಭಾಷೆಗಳು (ಸುಲಭ)
(ಈ ವಾಕ್ಯದ ಕೊನೆಯಲ್ಲಿ ಬಳಸಬಹುದಾದ ಲೇಖನ ಚಿನ್ಹೆ)
ಅ) ! ಆ) ?
ಇ) ' '. ಈ) :-

2.ನನಗೆ ಇಬ್ಬರು <u>ಬಾವ</u> ಇದ್ದಾರೆ. (ಗೆರೆ ಎಳೆದ ಪದದ ಬಹುವಚನ ರೂಪ) . (ಸುಲಭ)
ಅ)ಬಾವಗಳು ಆ)ಭಾಷಾವಾರು
ಇ)ಬಾವಂದಿರು ಈ)ಬಾವ

3.ಹಿರಿಯರು ಸಂಕ್ರಾಂತಿ ಎಂದು ಜಗಳವಾಡಿದವರನ್ನು ಒಂದೆಡೆ ಸೇರಿಸಿ ______ ಮಾಡುತ್ತಿದ್ದರು. (ಸುಲಭ)
ಅ)ಒಗ್ಗಟ್ಟು ಆ)ರಾಜಿ.
ಇ)ಶಿಕ್ಷೆ ಈ) ಒಬ್ಬಟ್ಟು

4. ಬೇವು ಬೆಲ್ಲ ಹಂಚಿ ತಿನ್ನುವ ಹಬ್ಬ (ಸುಲಭ)
ಅ) ಸಂಕ್ರಾಂತಿ ಆ) ಯುಗಾದಿ
ಈ) ದಸರಾ ಈ) ವಿಜಯದಶಮಿ.

5.' ಅಪ್ಪ ಅಂದ್ರೆ ಆಕಾಶ' ಕೃತಿಯ ರಚನಕಾರರು. (ಸುಲಭ)

ಅ)ಎ ಆರ್ ಮಣಿಕಾಂತ್. ಆ) ಕೃಷ್ಣಾನಂದ ಕಾಮತ್

ಇ) ಪೂರ್ಣಚಂದ್ರ ತೇಜಸ್ವಿ ಈ)ಹೆಚ್ ಎಸ್ ವೆಂಕಟೇಶ್ ಮೂರ್ತಿ.

6 'ನೆನಪಿನ ದೋಣಿಯಲ್ಲಿ 'ಎಂಬ ಆತ್ಮ ಕಥನದ ಕರ್ತೃ ಕುವೆಂಪು.

(ಗೆರೆ ಎಳೆದ ಪದಗಳಿಗೆ ಬಳಸಬಹುದಾದ ಸೂಕ್ತ ಲೇಖನ ಚಿನ್ಹೆ) ( ಸಾಧಾರಣ )

ಅ) ಭಾವಸೂಚಕ ಆ) ವಾಕ್ಯವೇಷ್ಟನ

ಇ)ಪ್ರಶ್ನಾರ್ಥಕ. ಈ) ಉದ್ಧರಣ

## II. ಒಂದು ವಾಕ್ಯದಲ್ಲಿ ಉತ್ತರಿಸಿ.

7. ಜಾತಿ, ಧರ್ಮ, ಲಿಂಗ ಭೇದವಿಲ್ಲದೆ ಆಚರಿಸುವ ಹಬ್ಬಗಳು ಯಾವುವು? ( ಸಾಧಾರಣ )
8. ಜಾನುವಾರುಗಳಿಗೆ ಮೀಸಲಾದ ವಿಶೇಷ ಹಬ್ಬ ಯಾವುದು? ( ಸಾಧಾರಣ )
9. ನಮ್ಮ ಮನೆಯಲ್ಲಿ ನಾಲ್ಕು ದನ ಇದೆ. ಈ ವಾಕ್ಯದ ಬಹುವಚನ ರೂಪ ಬರೆಯಿರಿ. ( ಸಾಧಾರಣ)
10. ದನ ಕರುಗಳನ್ನು ಬೆಂಕಿಯಲ್ಲಿ ಜಿಗಿಸುವುದನ್ನು ಏನೆಂದು ಕರೆಯುತ್ತಾರೆ? ( ಸಾಧಾರಣ )
11. ಇಂದು ಕೃಷಿಕರ ಮನೆಯಲ್ಲಿ ದನ ಕರುಗಳ ಜಾಗಕ್ಕೆ ಬಂದು ನಿಂತಿರುವ ವಾಹನ ಯಾವುದು? ( ಸಾಧಾರಣ )

## III. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

12. ನಿಮ್ಮ ಮನೆಯಲ್ಲಿ ಆಚರಿಸುವ ಹಬ್ಬಗಳನ್ನು ಪಟ್ಟಿ ಮಾಡಿ. ( ಕಠಿಣ )
13. ಸಂಕ್ರಾಂತಿಯಂದು ದನಕರುಗಳನ್ನು ಹೇಗೆ ಸಿಂಗರಿಸುತ್ತಾರೆ?. ( ಕಠಿಣ )
14. ದನ ಕರುಗಳಿಗೆ ಕಿಚ್ಚು ಹಾಯಿಸುವುದರ ಹಿಂದಿರುವ ಕಾರಣತಿಳಿದು ಬರೆಯಿರಿ. ( ಕಠಿಣ )
15. ಎಳ್ಳು ಬೆಲ್ಲ ತಿನ್ನುವುದರ ವೈಜ್ಞಾನಿಕ ಕಾರಣ ತಿಳಿದು ಬರೆಯಿರಿ. ( ಕಠಿಣ )

## IV. ಹೊಂದಿಸಿ ಬರೆಯಿರಿ

16.

| ಅ | ಆ |
|---|---|
| ೧.ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ. | ಪಾಪು ( ಸಾಧಾರಣ ) |
| ೨.ವಿ. ಸೀತಾರಾಮಯ್ಯ. | ಚಂಪಾ ( ಸಾಧಾರಣ ) |
| ೩..ಚಂದ್ರಶೇಖರ ಪಾಟೀಲ | ಕುವೆಂಪು ( ಸಾಧಾರಣ ) |
| ೪..ಪಾಟೀಲ ಪುಟ್ಟಪ್ಪ | ಕಸಾಪ ( ಸಾಧಾರಣ ) |
| ೫..ಕನ್ನಡ ಸಾಹಿತ್ಯ ಪರಿಷತ್ತು. | ವಿಸೀ ( ಸಾಧಾರಣ ) |

........................................................................................

# ಪದ್ಯಭಾಗ(ಪ್ರಶ್ನೆಗಳ ವಿಭಾಗ)

**ಪದ್ಯಪಾಠ - 1**
**ಹುತ್ತರಿ ಹಾಡು**

**ಕಲಿಕಾಫಲ**

- **ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ,ಭಾವನಾತ್ಮಕ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು.**

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 09 |
| 2 | ಸಾಧಾರಣ | 08 |
| 3 | ಕಠಿಣ | 03 |
| **ಒಟ್ಟು** | | **20** |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 20% |
| 2. | ತಿಳುವಳಿಕೆ | 40% |
| 3. | ಅಭಿವ್ಯಕ್ತಿ | 20% |
| 4. | ಪ್ರಶಂಸೆ | 20% |
| **ಒಟ್ಟು** | | **100** |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 65% |
| ಭಾಷಾ ಚಟುವಟಿಕೆಗಳು | 35% |
| **ಒಟ್ಟು** | **100 %** |

**I. ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ**.

1.ಬಗ್ಗ (ಸುಲಭ)
2.ಭೂರಮೆ (ಸುಲಭ)
3.ಒಡಲ್ (ಸುಲಭ)
4.ಬೆರಗು (ಸುಲಭ)

**II. ವಾಕ್ಯ ಪೂರ್ಣಗೊಳಿಸಿ,**

5.ದೇಶ ಸೇವೆ........................... (ಸಾಧಾರಣ)
6.ದೇಶವೇ ಗುಡಿ..................... (ಸಾಧಾರಣ)

III. **ಹೊಂದಿಸಿ ಬರೆಯಿರಿ**

| ಅ | ಆ |
|---|---|
| 7. | |
| ೧.ಕಾವೇರಿ | ಸೊಂಟಕ್ಕೆ ಕಟ್ಟಿದ ವಸ್ತ್ರ (ಸುಲಭ) |
| ೨. ಪಂಜೆ ಮಂಗೇಶರಾವ್ | ಭಾಗಮಂಡಲ (ಸುಲಭ) |
| ೩. ಅಗಸ್ತ್ಯ | ಕವಿಶಿಷ್ಯ (ಸುಲಭ) |
| ೪. ದಟ್ಟಿ ಕುಪ್ಪಸ | ತಪದ ಮನೆ (ಸುಲಭ) |

IV. **ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

8.ಕೊಡಗು ಯಾವ ಗಿರಿಯಿಂದ ಯಾವ ಗಿರಿಯವರೆಗೆ ಬೆಳೆದಿದೆ ? (ಸುಲಭ)
9.ಭೂರಮೆಯು ಹೇಗೆ ನಿಂತಿದ್ದಾಳೆ? (ಸುಲಭ)
10.ಕೊಡಗರ ಪೂರ್ವಜರು ಯಾವ ಪ್ರಾಣಿಯ ಹಾಲನ್ನು ಕುಡಿದಿದ್ದಾರೆ? (ಸುಲಭ)
11. ಕಾವೇರಿಯ ತವರು ಮನೆ ಯಾವುದು? (ಸುಲಭ)

**V. ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.**

12.ಹುತ್ತರಿ ಹಬ್ಬ ವನ್ನು ಯಾವಾಗ ಆಚರಿಸುತ್ತಾರೆ ?(ಸಾಧಾರಣ )
13.ಯಾವ ಹೊಯ್ಲಿಗೆ ಕುಣಿಯುವ ಪದ ಹೊರಹೊಮ್ಮಬೇಕು? (ಸಾಧಾರಣ)
14.ಕೊಡಗರು ಹೇಗೆ ಸೋಲನ್ನು ಅರಿಯದವರು? (ಸಾಧಾರಣ)
15.ಕೊಡಗನ್ನಾಳಿದ ರಾಜರುಗಳನ್ನು ಹೆಸರಿಸಿ. (ಸಾಧಾರಣ)
16.ಕೊಡಗರ ಕ್ಷಾತ್ರಭೇಟೆಯ ಪರಾಕ್ರಮ ತಿಳಿಸಿ. (ಸಾಧಾರಣ)
17.ಕಾವೇರಿಯು ಹೇಗೆ ಹರಿಯುತ್ತಿದ್ದಾಳೆ? (ಸಾಧಾರಣ)
18.ಕವಿಯು ಕೊಡಗಿನ ಪ್ರಾಕೃತಿಕ ಸೌಂದರ್ಯವನ್ನು ಹೇಗೆ ವರ್ಣಿಸಿದ್ದಾರೆ. ? (ಕಠಿಣ)
19.ಕೊಡಗರ ಶೌರ್ಯ ಸಾಹಸದ ಬಗ್ಗೆ ನಿಮ್ಮದೇ ಮಾತುಗಳಲ್ಲಿ ಬರೆಯಿರಿ. (ಕಠಿಣ)
20.ಕೊಡಗಿನವರ ವೇಷಭೂಷಣವನ್ನು ವರ್ಣಿಸಿರಿ. (ಕಠಿಣ)

…………………………………………………………………………………………

## ಪದ್ಯಪಾಠ: 2
## ಸ್ವಾತಂತ್ರ್ಯ ಸ್ವರ್ಗ

**ಕಲಿಕಾಫಲ**

- **ಲಭ್ಯವಿರುವ ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಾದ ಕಥೆ,ಲೇಖನ ಮತ್ತು ನಾಟಕಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವರು.**

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 04 |
| 2 | ಸಾಧಾರಣ | 04 |
| 3 | ಕಠಿಣ | 04 |
| ಒಟ್ಟು | | 12 |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 20% |
| 2. | ತಿಳುವಳಿಕೆ | 40% |
| 3. | ಅಭಿವ್ಯಕ್ತಿ | 30% |
| 4. | ಪ್ರಶಂಸೆ | 10% |
| ಒಟ್ಟು | | 100 |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 75% |
| ಭಾಷಾ ಚಟುವಟಿಕೆಗಳು | 25% |
| ಒಟ್ಟು | 100 % |

### I. ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಸೂಕ್ತ ಆಯ್ಕೆಗಳನ್ನು ಆರಿಸಿ ಬರೆಯಿರಿ.

1. ಕವಿಯ ಪ್ರಕಾರ ಸ್ವಾತಂತ್ರ್ಯ ಸ್ವರ್ಗದ ಪರಿಕಲ್ಪನೆ. (ಸುಲಭ)
   ಅ) ಸ್ವೇಚ್ಛೆಯ ಸ್ವರ್ಗವಲ್ಲ. ಆ) ಹೆದರಿಕೆ ಇರುವುದಿಲ್ಲ
   ಇ) ಎಲ್ಲರೂ ಒಂದು ಎಂಬ ಭಾವನೆ. ಈ) ಮೇಲಿನ ಎಲ್ಲವೂ

2. 'ಮಸ್ತಕ' ಪದದ ಅರ್ಥ: (ಸುಲಭ)
   ಅ) ಪುಸ್ತಕ. ಆ) ಮೆದುಳು.
   ಇ) ಹೃದಯ. ಈ).ಶರೀರ

3. ಸ್ವಾತಂತ್ರ್ಯ ಸ್ವರ್ಗ ಕವನವನ್ನು ಈ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. (ಸುಲಭ)
   ಅ) ತಮಸಾನದಿ -ಎಡಬಲದಿ. ಆ)ನಿರೀಕ್ಷೆಯಲ್ಲಿ
   ಇ) ಅವ್ವ. ಈ)ಗಂಧ ಕೇಶರ

4. ಮೈಸೂರಿನಿಂದ ನಮ್ಮ ಶಾಲೆಗೆ ಹುಡುಗಿ ಬಂದಿದ್ದಾಳೆ. ಎಂಬ ವಾಕ್ಯದ ಬಹುವಚನ ರೂಪ. (ಸುಲಭ)
   ಅ) ಮೈಸೂರಿನಿಂದ ನಮ್ಮ ಶಾಲೆಗಳಿಗೆ ಹುಡುಗಿ ಬಂದಿದ್ದಾಳೆ.
   ಆ) ಮೈಸೂರಿನಿಂದ ನಮ್ಮ ಶಾಲೆಗಳಿಗೆ ಹುಡುಗಿಯರು ಬಂದಿದ್ದಾರೆ.
   ಇ) ಮೈಸೂರಿನಿಂದ ನಮ್ಮ ಶಾಲೆಗೆ ಹುಡುಗಿಯರು ಬಂದಿದ್ದಾರೆ.
   ಈ) ಮೈಸೂರಿನಿಂದ ನಮ್ಮ ಶಾಲೆಗೆ ಹುಡುಗಿ ಬಂದಿದ್ದಾರೆ.

5. ಚಡ್ಡಿ ಗಿಡ್ಡಿ ಹಾಕಿಕೊಂಡು
   ಕುದುರೆ ಮೇಲೆ ಕುಳಿತುಕೊಂಡು

ಲಗಾಮು ಹಿಡಿದುಕೊಂಡು
ಹೈ ಹೈ ಹೈ

(ನೀಡಿರುವ ಪದ್ಯಭಾಗದಲ್ಲಿರುವ ಪ್ರಾಸಪದಗಳು ) (ಸುಲಭ)

ಅ)ಚಡ್ಡಿ ,ಕುದುರೆ. ಆ)ಹಾಕಿಕೊಂಡು. ಕುಳಿತುಕೊಂಡು


ಇ)ಕುದುರೆ, ಲಗಾಮು. ಈ)ಗಿಡ್ಡಿ ,ಮೇಲೆ

II. **ಒಂದು ವಾಕ್ಯದಲ್ಲಿ ಉತ್ತರಿಸಿ.**

6. ನೀಡಿರುವ ಚಿತ್ರಕ್ಕೆ ಸೂಕ್ತ ಶೀರ್ಷಿಕೆ ನೀಡಿರಿ. (ಸಾಧಾರಣ)



7. ಸಂಕುಚಿತ ಮನೋವೃತ್ತಿ ಅಳಿದರೆ ಏನಾಗುವುದು? (ಸಾಧಾರಣ)
8. ಡಾ ಎಂ ಅಕಬರ ಅಲಿಯವರ ಯಾವುದಾದರೂ ಒಂದು ಕೃತಿಯನ್ನು ಹೆಸರಸಿ? (ಸಾಧಾರಣ)
9. ಕವಿಯು ಬಾಳು ಹೇಗೆ ಇರಬೇಕೆಂದು ಆಶಿಸಿದ್ದಾರೆ? (ಸಾಧಾರಣ)
10. ಕವಿಯು ಸಂಪ್ರದಾಯದ ಅನಿಷ್ಟ ,ರೂಢಿ ,ನಿಯಮಗಳನ್ನು ಏನೆಂದು ಕರೆಯುತ್ತಾರೆ. ?(ಕಠಿಣ)
11. ನೀಡಿರುವ ಕವನವನ್ನು ಒದಿ ಅರ್ಥೈಸಿಕೊಂಡು ನಿಮ್ಮ ಅಭಿಪ್ರಾಯಗಳನ್ನು ನಾಲ್ಕು ಐದು ವಾಕ್ಯಗಳಲ್ಲಿ ಬರೆಯಿರಿ. (ಕಠಿಣ)



12. ನೀಡಿರುವ ಚಿತ್ರಕ್ಕೆ ಸೂಕ್ತ ಶೀರ್ಷಿಕೆ ನೀಡಿ ನಿಮ್ಮ ಅಭಿಪ್ರಾಯಗಳನ್ನು ನಾಲ್ಕು ಐದು ವಾಕ್ಯಗಳಲ್ಲಿ ಬರೆಯಿರಿ. (ಕಠಿಣ)



## ಪದ್ಯಪಾಠ-3
## ಭಾಗ್ಯದ ಬಳೆಗಾರ

**ಕಲಿಕಾಫಲ**

- **ಜನಪದ ಗೀತೆ, ಕಥೆಗಳು, ಶಿಶುಗೀತೆಗಳ ಬಗ್ಗೆ ಚರ್ಚೆ ಮಾಡುವರು. ಕರಕುಶಲ ಕಲೆ, ವಾಸ್ತು ಶಿಲ್ಪಕಲೆ ನೃತ್ಯಕಲೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವರು.**
- **ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ,ಭಾವನಾತ್ಮಕ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು.**

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 10 |
| 2 | ಸಾಧಾರಣ | 08 |
| 3 | ಕಠಿಣ | 03 |
| **ಒಟ್ಟು** | | **21** |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 22% |
| 2. | ತಿಳುವಳಿಕೆ | 28% |
| 3. | ಅಭಿವ್ಯಕ್ತಿ | 42% |
| 4. | ಪ್ರಶಂಸೆ | 08% |
| **ಒಟ್ಟು** | | **100** |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ | 70% |
| ಭಾಷಾ ಚಟುವಟಿಕೆ | 30% |
| **ಒಟ್ಟು** | **100 %** |

### I. ಪದ್ಯದ ಸಾಲುಗಳಲ್ಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.

1. ನವಿಲು ಸಾರಂಗ - - - - - ಬಳೆಗಾರ. (ಸುಲಭ)
2. ಮಿಂಚಾಡೊವೆರಡು - - - - -ಕಾಣೊ ಬಳೆಗಾರ. (ಸುಲಭ)
3. ನಟ್ಟ ನಡುವೇಲಿ - - - - - -ಆಡುತ್ತಾಳೆ. (ಸುಲಭ)
4. ಅಚ್ಚ ಕೆಂಪಿನ ಬಳೆ - - - - - -ಗೀರಿನ ಬಳೆ. (ಸುಲಭ)

### I. ಪದಗಳ ಅರ್ಥ ಬರೆಯಿರಿ

5. ಹಡೆದವ್ವ = (ಸಾಧಾರಣ)
6. ಬಾಲೆ = (ಸಾಧಾರಣ)
7. ಸಾರಂಗ = (ಸಾಧಾರಣ)
8. ಹಟ್ಟಿ = (ಸಾಧಾರಣ)
9. ತವರು = (ಸಾಧಾರಣ)

### III. ಹೊಂದಿಸಿ ಬರೆಯಿರಿ (ಸಾಧಾರಣ)

| ಅ | ಆ |
|---|---|
| 10. | |
| ೧.ಕದ | ಅಚ್ಚ ಕೆಂಪಿನದು |
| ೨.ಚಪ್ಪರ | ಸೀಬೆ |
| ೩.ಬಳೆ | ಬಾಳೆ |
| ೪.ಬಲಕ್ಕೆ | ಮುತ್ತಿನದು |
| ೫.ಎಡಕ್ಕೆ | ಕಂಚಿನದು |

**IV.ಒಂದು ವಾಕ್ಯದಲ್ಲಿ ಉತ್ತರಿಸಿ**

11.ಮುತ್ತೈದೆ ಹೆಣ್ಣು ಯಾರನ್ನು ತನ್ನ ತವರಿಗೆ ಹೋಗಲು ಹೇಳುತ್ತಿದ್ದಾಳೆ? (ಸುಲಭ)

12.ಹಡೆದವ್ವ ಯಾವ ಆಟವನ್ನು ಆಡುತ್ತಾಳೆ? (ಸುಲಭ)

13.ಹಡೆದವ್ವನಿಗೆ ಯಾವ ಬಣ್ಣದ ಬಳೆಗಳು ಎಂದರೆ ಇಷ್ಟ? (ಸುಲಭ)

14.ಯಾವ ಎರಡು ಹಣ್ಣಿನ ಗಿಡಗಳ ನಡುವೆ ಹೋಗಬೇಕೆಂದು ಬಳೆಗಾರನಿಗೆ ಮುತ್ತೈದೆ ಹೇಳುತ್ತಾಳೆ? (ಸಾಧಾರಣ)

**V.ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

15.ತವರು ಮನೆ ನೋಡಲು ಹೇಗಿದೆ? (ಸಾಧಾರಣ)

16.ತವರು ಮನೆಗೆ ಹೋಗಲು ಗುರುತುಗಳೇನು? (ಸಾಧಾರಣ)

17.ಜನಪದರು ಪಗಡೆಯ ರೀತಿ ಬೇರೆ ಯಾವ ಆಟಗಳನ್ನು ಆಡುತ್ತಿದ್ದರು? (ಕಠಿಣ)

18.ಬಳೆಗಾರನ ರೀತಿ, ಬೇರೆ ಯಾವ ವಸ್ತುಗಳನ್ನು ಮಾರಾಟ ಮಾಡಲು ಮಾರಾಟಗಾರರು ನಿಮ್ಮ ಮನೆಯ ಬಳಿ ಬರುತ್ತಾರೆ? ತಿಳಿಸಿ.(ಸುಲಭ)

**VI ಕೆಳಗಿನ ಪದ್ಯದ ಸಾರಾಂಶವನ್ನು ಬರೆಯಿರಿ (ಕಠಿಣ)**

19.ಆಲೆ ಆಡುತ್ತಾವೆ ಗಾಣ ತಿರುಗುತಾವೆ
ನವಿಲು ಸಾರಂಗ ನಲಿತಾವೆ ಬಳೆಗಾರ
ಅದೇ ಕಾಣೋ ನನ್ನ ತವರೂರು
ಮುತ್ತೈದೆ ಎಲೆ ಹೆಣ್ಣೆ ತೋರುಬಾರೆ ತವರೂರ.

**VII. 20 ಪದಬಂಧ ಪೂರ್ಣಗೊಳಿಸಿ.**

**ಮೇಲಿನಿಂದ ಕೆಳಕ್ಕೆ:**

( 1) ಬಳೆ ಮಾರುವವನು (೪)(ಸುಲಭ)

( 2 )ಜನಸಾಮಾನ್ಯರಿಗೆ ಸಂಬಂಧಿಸಿದ್ದು (೪) (ಸುಲಭ)

(3)ಇದು ದಕ್ಷಿಣ ದಿಕ್ಕು (೩) (ಸುಲಭ)

**ಎಡದಿಂದ ಬಲಕ್ಕೆ:**

( 4 )ದಾಳಗಳನ್ನು ಬಳಸಿ ಆಡುವ ಆಟ (೩) (ಸುಲಭ)

( 5)ಕಲ್ಪವೃಕ್ಷವಿದು(೫) (ಸುಲಭ)

( 6 )ಕಬ್ಬಿನ ರಸ ತೆಗೆಯುವುದು(೨) (ಸುಲಭ)

| | | | | | |
|---|---|---|---|---|---|
| | | | | | 1. |
| 4. | | | | | |
| | | | 2 | | |
| | 3,5 | | | | |
| | | | | | |
| 6. | | | | | |

VIII. 21.ನಿಮ್ಮ ಮನೆಯ ದಾರಿಯನ್ನು ತಿಳಿಸಲು ನೀವು ಬಳಸುವ ಗುರುತುಗಳನ್ನು ವಿವರಿಸಿ; ( ಕಠಿಣ)

……………………………………………………………

**ಪದ್ಯಪಾಠ- 4**
**ವಚನಗಳ ಭಾವ ಸಂಗಮ**

**ಕಲಿಕಾಫಲ**

- **ಸಂವೇದನಾತ್ಮಕ ಅಂಶಗಳಾದ ಜಾತಿ, ಧರ್ಮ, ಲಿಂಗ, ಆಚಾರ -ವಿಚಾರ ,ರೂಢಿ ಸಂಪ್ರದಾಯ ,ಉಡುಗೆ- ತೊಡುಗೆ ಮೊದಲಾದ ಅಂಶಗಳ ಬಗ್ಗೆ ಅನುಭವಗಳನ್ನು ಮೌಖಿಕವಾಗಿ ಅಭಿವ್ಯಕ್ತ ಪಡಿಸುವರು.ಪಠ್ಯದಲ್ಲಿನ ಸಾಹಿತ್ಯ ಓದಿ ಅದರ ಉಪಯೋಗದ ಬಗ್ಗೆ ಮಾತನಾಡುವರು.**
- **ಸಂವೇದನಾತ್ಮಕ ಅಂಶಗಳನ್ನು ಕುರಿತು ತಾರ್ಕಿಕ ಅಭಿಪ್ರಾಯವನ್ನು ಬರವಣಿಗೆಯ ಮೂಲಕ ಅಭಿವಕ್ತಪಡಿಸುವರು.**

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 07 |
| 2 | ಸಾಧಾರಣ | 07 |
| 3 | ಕಠಿಣ | 07 |
| **ಒಟ್ಟು** | | **21** |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 20% |
| 2. | ತಿಳುವಳಿಕೆ | 40% |
| 3. | ಅಭಿವ್ಯಕ್ತಿ | 20% |
| 4. | ಪ್ರಶಂಸೆ | 20% |
| **ಒಟ್ಟು** | | **100** |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 70% |
| ಭಾಷಾ ಚಟುವಟಿಕೆಗಳು | 30% |
| **ಒಟ್ಟು** | **100 %** |

## I. ಹೊಂದಿಸಿ ಬರೆಯಿರಿ.

1.

೧. ರಾಮನಾಥ. ಕ್ರಿಯಾಪದ (ಸುಲಭ)
೨.ಶಂಬುಜಕೇಶ್ವರ ಮಡಿವಾಳ ಮಾಚಯ್ಯ (ಸುಲಭ)
೩.ಕುಣಿದಾಡು ಜೇಡರ ದಾಸಿಮಯ್ಯ (ಸುಲಭ)
೪.ಕಲಿ ದೇವರ ದೇವ ಸತ್ಯಕ್ಕ (ಸುಲಭ)

## II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

2.ನಿಮಗೆ ತಿಳಿದಿರುವ ಐದು ವಚನಕಾರರ ಹೆಸರುಗಳನ್ನು ಬರೆಯಿರಿ. (ಸಾದಾರಣ)
3.ವಚನಗಳು ಜನಸಾಮಾನ್ಯರ ನಡತೆಯ ಮೇಲೆ ಪ್ರಭಾವ ಬೀರುತ್ತವೆ ಹೇಗೆ?.(ಸಾದಾರಣ)
4.ವಚನಕಾರರು ಅಂಕಿತನಾಮಗಳನ್ನು ಇಟ್ಟುಕೊಳ್ಳಲು ಕಾರಣವೇನು? (ಸಾದಾರಣ)
5.ಬಸವಣ್ಣನವರ ಯಾವುದಾದರೂ ಒಂದು ವಚನದ ಬಗ್ಗೆ ವಿವರಣೆ ನೀಡಿ. (ಸಾದಾರಣ)
6.ಚಂದನವನ್ನು ತೀಡುವುದು ಮತ್ತು ಒಳ್ಳೆಯವರ ಸಂಘ ಮಾಡುವುದು ಇವೆರಡೂ ಹೇಗೆ ಉತ್ತಮ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. (ಕಠಿಣ)
7.ಮಾನವನ ನಡೆ ನುಡಿ ಏಕೆ ಉತ್ತಮವಾಗಿರಬೇಕು (ಸಾದಾರಣ)
8.ಯಾವುದಾದರೂ ಮೂರು ವಚನಕಾರರ ಭಾವಚಿತ್ರ ಸಂಗ್ರಹಿಸಿ ಅವರ ಬಗೆಗೆ (ಕಠಿಣ) ನಾಲ್ಕೈದು ವಾಕ್ಯಗಳಲ್ಲಿ ಬರೆಯಿರಿ.

9.'ಸಜ್ಜನರ ಸಹವಾಸ ಹೆಜ್ಜೇನು ಉಂಡಂತೆ,' ಈ ವಾಕ್ಯವನ್ನು ನಿಮ್ಮದೇ ಮಾತುಗಳಲ್ಲಿ ವರ್ಣಿಸಿ. (ಕಠಿಣ)

10.ಈ ಕೆಳಗಿನ ಸ್ಥಳದ ಬಗ್ಗೆ ಮಾಹಿತಿ ಸಂಗ್ರಹಿಸಿ ಬರೆಯಿರಿ.(ಸಾದಾರಣ)

ಅ) ಬಸವನಬಾಗೇವಾಡಿ .

11.ಯಾವುದಾದರೂ ಹತ್ತು ಧ್ವನಿ ವ್ಯತ್ಯಾಸವಿರುವ ಪದಗಳನ್ನು ಬರೆಯಿರಿ.

ಉದಾಹರಣೆ: ಧನ– ದನ.(ಸಾದಾರಣ)

12. ಶಾಲೆ ಕುರಿತಂತೆ ನಾಲ್ಕೈದು ಸಾಲುಗಳಲ್ಲಿ ಕವಿತೆ ರಚಿಸಿ(ಕಠಿಣ)

III. **ಕೆಳಗಿನ ಗಾದೆಗಳನ್ನು ವಿವರಿಸಿ.**

13. ಮಾತು ಬೆಳ್ಳಿ ಮೌನ ಬಂಗಾರ. (ಸುಲಭ)

14. ಹನಿ ಹನಿ ಗೂಡಿದರೆ ಹಳ್ಳ ತೆನೆ ತೆನೆ ಗೂಡಿದರೆ ಬಳ್ಳ.(ಸುಲಭ)

IV. **ಕೆಳಗಿನ ಶಿವಶರಣರ ಬಗ್ಗೆ ಮಾಹಿತಿ ಸಂಗ್ರಹಿಸಿ ಬರೆಯಿರಿ.**

15. ಅಕ್ಕಮಹಾದೇವಿ (ಕಠಿಣ)

16. ಬಸವಣ್ಣನವರು (ಕಠಿಣ)

17. ಜೇಡರ ದಾಸಿಮಯ್ಯ(ಕಠಿಣ)

18.ಶಿವಶರಣರು ಎಂದು ಯಾರನ್ನು ಕರೆಯುತ್ತಾರೆ?.(ಸುಲಭ)

19.ಕ್ರಿಯಾಪದವಿರುವ 2 ವಾಕ್ಯಗಳನ್ನು ರಚಿಸಿ.(ಸುಲಭ)

**V. ಕೆಳಗಿನ ವಾಕ್ಯಗಳಲ್ಲಿ ಕರ್ಮಪದ ಮತ್ತು ಕ್ರಿಯಾ ಪದಗಳನ್ನು ಗುರುತಿಸಿ.**

20. ಸುಮಾಳು ನೃತ್ಯವನ್ನು ಮಾಡಿದಳು (ಸುಲಭ)

21.ರವಿಯು ಗೋಡೆಯನ್ನು ಒಡೆದನು.(ಸುಲಭ)

……………………………………………………………………………

**ಪದ್ಯಪಾಠ - 5**
**ಹಚ್ಚೇವು ಕನ್ನಡದ ದೀಪ**

**ಕಲಿಕಾಫಲ**

- **ಲಭ್ಯವಿರುವ ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಾದ ಕಥೆ,ಲೇಖನ ಮತ್ತು ನಾಟಕಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವರು.**
- **ಸಂವೇದನಾತ್ಮಕ ಅಂಶಗಳಾದ ಜಾತಿ, ಧರ್ಮ, ಲಿಂಗ, ಆಚಾರ -ವಿಚಾರ ,ರೂಢಿ ಸಂಪ್ರದಾಯ ,ಉಡುಗೆ- ತೊಡುಗೆ ಮೊದಲಾದ ಅಂಶಗಳ ಬಗ್ಗೆ ಅನುಭವಗಳನ್ನು ಮೌಖಿಕವಾಗಿ ಅಭಿವ್ಯಕ್ತ ಪಡಿಸುವರು .ಪಠ್ಯದಲ್ಲಿನ ಸಾಹಿತ್ಯ ಓದಿ ಅದರ ಉಪಯೋಗದ ಬಗ್ಗೆ ಮಾತನಾಡುವರು.**

| **ಕ್ಲಿಷ್ಟತೆಯ ಮಟ್ಟ** | | **ಪ್ರಶ್ನೆ ಸಂಖ್ಯೆ** |
|---|---|---|
| 1 | ಸುಲಭ | 10 |
| 2 | ಸಾಧಾರಣ | 08 |
| 3 | ಕಠಿಣ | 04 |
| **ಒಟ್ಟು** | | **22** |

| **ಉದ್ದೇಶಗಳು** | | **ಶೇಕಡ** |
|---|---|---|
| 1. | ಜ್ಞಾನ | 33% |
| 2. | ತಿಳುವಳಿಕೆ | 36% |
| 3. | ಅಭಿವ್ಯಕ್ತಿ | 13% |
| 4. | ಪ್ರಶಂಸೆ | 18% |
| **ಒಟ್ಟು** | | **100** |

| **ಪ್ರಶ್ನೆಗಳ ಸ್ವರೂಪ** | **ಶೇಕಡ** |
|---|---|
| ಘಟಕ ಆಧಾರಿತ | 70% |
| ಭಾಷಾ ಚಟುವಟಿಕೆಗಳು | 30% |
| **ಒಟ್ಟು** | **100 %** |

## I. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗು ನೀ ಕನ್ನಡವಾಗಿರು- - - -
   ಈ ಹಾಡನ್ನು ಬರೆದವರು. (ಸುಲಭ)
   ಅ) ಬೇಂದ್ರೆ ಆ)ಕುವೆಂಪು ಇ)ಡಿ ಎಸ್ ಕರ್ಕಿ ಈ) ಪು ತಿ ನ

2. ಹಚ್ಚೇವು ಕನ್ನಡದ ದೀಪ ಪದ್ಯವನ್ನು ಈ ಕವನಸಂಕಲನದಿಂದ ಆರಿಸಿಕೊಳ್ಳಲಾಗಿದೆ. (ಸಾಧಾರಣ)
   ಅ)ಬಣ್ಣದ ಚೆಂಡು ಆ)ಭಾವತೀರ್ಥ ಇ)ನಕ್ಷತ್ರಗಾನ ಈ) ಗೀತಗೌರವ

3. ಸೂರ್ಯೋದಯ ಎಂಬುದು ಈ ಕೆಳಗಿನ ಸಂಧಿಗೆ ಉದಾಹರಣೆಯಾಗಿದೆ.(ಸಾಧಾರಣ)
   ಅ)ಲೋಪ ಸಂಧಿ ಆ)ಗುಣ ಸಂಧಿ ಇ)ಯಣ್ ಸಂಧಿ ಈ)ಸವರ್ಣದೀರ್ಘ ಸಂಧಿ

4. ಈ ಕೆಳಗಿನ ಪದಗಳಲ್ಲಿ ಸವರ್ಣಧೀರ್ಘ ಸಂಧಿ ಏರ್ಪಟ್ಟಿರುವ ಪದ.(ಸಾಧಾರಣ)
   ಅ) ದೇವೇಂದ್ರ ಆ) ರವೀಂದ್ರ ಇ) ಮಹೇಶ ಈ) ಇತ್ಯಾದಿ.

5. ಈ ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ.(ಸುಲಭ)
   ಅ)ಏಕೈಕ ಆ)ವನೌಷದಿ ಇ)ಜಾತ್ಯಾತೀತ ಈ)ಶಿವೈಕ್ಯ

**II. ಮೊದಲೆರಡು ಪದಗಳ ಸಂಬಂಧ ಗ್ರಹಿಸಿ ಖಾಲಿ ಜಾಗದಲ್ಲಿ ಸೂಕ್ತಪದ ತುಂಬಿ.**

6. ಶತ್ರು: ಮಿತ್ರ:: ರಾತ್ರಿ:--------(ಸುಲಭ)
7. ಮಾತಾ: ತಾಯಿ:: ಪಿತ:------(ಸುಲಭ)
8. ದಾವಣಗೆರೆ: ನಡುನಾಡು:: ಬೆಳಗಾವಿ:------(ಸಾ)
9. ಅತ್ಯಂತ: ಯಣ್ ಸಂಧಿ:: ಚಿನ್ಮಯ:-------(ಕಠಿಣ)
10. ೧೯೫೬: ಮೈಸೂರು ರಾಜ್ಯ:: ೧೯೭೩:--------(ಕಠಿಣ)

**III. ಒಂದು ವಾಕ್ಯದಲ್ಲಿ ಉತ್ತರಿಸಿ.**

11. ಕನ್ನಡದ ಕಂಪನ್ನು ಸೂಸುವಲ್ಲಿ ಏನನ್ನು ಚಾಚುತ್ತೇವೆ? (ಸುಲಭ)
12. . ಕಲ್ಪನೆಯ ಕಣ್ಣು ಹರಿವತನಕ ಯಾವದೀಪಗಳನ್ನು ಹಚ್ಚುತ್ತೇವೆ? (ಸುಲಭ)
13. ನಮ್ಮವರು ಗಳಿಸಿದ ಹೆಸರುಳಿಸಲು ನಾವೆಲ್ಲರೂ ಏನು ಮಾಡುತ್ತೇವೆ? (ಸಾ)
14. ನಮ್ಮಸಿರು ತೀಡುವ ಈ ನಾಡಿನಲ್ಲಿ ಯಾವ ಗೀತೆ ಹಾಡುತ್ತೇವೆ? (ಸಾ)
15. ಕರುಳೆಂಬ ಕುಡಿಗೆ ಏನನ್ನು ಮುಡಿಸುತ್ತೇವೆ? (ಕಠಿಣ)

**IV. ಕೆಳಗಿನ ಒಂದೇ ಪದವನ್ನು ನಾಮಪದ & ಕ್ರಿಯಾಪದದ ಅರ್ಥದಲ್ಲಿ ಬಳಸಿ ವಾಕ್ಯಗಳನ್ನು ರಚಿಸಿ.**

16. ಹಂಚು: ಅ)
(ಕಠಿಣ)
ಆ)

17. ಕುಡಿ: ಅ)
(ಕಠಿಣ)
ಆ)

18. ಪಡೆ: ಅ)
(ಕಠಿಣ)
ಆ)

19. ಕಳೆ: ಅ)
(ಕಠಿಣ)
ಆ)

**V. ಈ ಕವಿಯ ಸ್ಥಳ, ಕಾಲ, ಕೃತಿಗಳನ್ನು ಪರಿಚಯಿಸಿ.**

20. ಡಿ ಎಸ್ ಕರ್ಕಿ::(ಸಾ)

**VI. ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

21. ಏನನ್ನು ಮರೆತು, ಏನನ್ನು ಎರೆದು, ಹೇಗೆ ಕನ್ನಡದ ದೀಪ ಹಚ್ಚುತಾರೆ? (ಕಠಿಣ)
22. ಕನ್ನಡ ಮಾತೆಯನ್ನು ಹೇಗೆ ಆದರಿಸುತ್ತಾರೆ? (ಕಠಿಣ)

.......................................................................

## ಪದ್ಯಪಾಠ - 6
## ಬಿಡುಗಡೆಯ ಹಾಡು

**ಕಲಿಕಾ ಫಲ**

- **ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಲ್ಲಿ ರಚನಾಕಾರರ ದೃಷ್ಟಿಯಿಂದ ಅಭಿವ್ಯಕ್ತಿಸಿರುವದೃಷ್ಟಿಕೋನವನ್ನು ಅರ್ಥೈಸಿಕೊಂಡು ತನ್ನ ದೈನಂದಿನ ಅನುಭವಗಳೊಂದಿಗೆ ಅದರ ಸಾಮ್ಯತೆಗಳನ್ನು ಗಮನದಲ್ಲಿರಿಸಿಕೊಂಡು ತಮ್ಮ ವಿಚಾರವನ್ನು ಅಭಿವ್ಯಕ್ತಿ ಪಡಿಸುವರು.**

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 13 |
| 2 | ಸಾಧಾರಣ | 08 |
| 3 | ಕಠಿಣ | 04 |
| ಒಟ್ಟು | | 25 |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 18% |
| 2. | ತಿಳುವಳಿಕೆ | 45% |
| 3. | ಅಭಿವ್ಯಕ್ತಿ | 32% |
| 4. | ಪ್ರಶಂಸೆ | 05% |
| ಒಟ್ಟು | | 100 |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 86% |
| ಭಾಷಾ ಚಟುವಟಿಕೆಗಳು | 14% |
| ಒಟ್ಟು | 100 % |

## I. ಬಿಟ್ಟ ಸ್ಥಳ ಭರ್ತಿ ಮಾಡಿ

1. ಸ್ವಾತಂತ್ರ್ಯ ಇಲ್ಲದ ಬದುಕು —--------- ಕ್ಕೆ ಸಮಾನವಾದದ್ದು.(ಸಾ)
2. ಬಿಡುಗಡೆಯ ಹಾಡು ಈ ಪದ್ಯದ ರಚನಕಾರರು—---------.(ಸುಲಭ)
3. ಮೃಗರಾಜ ಎಂದರೆ —--------- (ಸುಲಭ)
4. ನಮ್ಮ ರಾಷ್ಟ್ರಧ್ವಜದ ಮತ್ತೊಂದು ಹೆಸರು —--------(ಸುಲಭ)
5. ರೆಕ್ಕೆಗಳ ಬಿಗಿಹಿಡಿದು ನರಳುತ್ತಿರುವುದು—------(ಸಾ)

## II. ಒಂದು ವಾಕ್ಯದಲ್ಲಿ ಉತ್ತರಿಸಿ.

6. ನಮ್ಮ ರಾಷ್ಟ್ರಪಿತ ಯಾರು? (ಸುಲಭ)
7. ಪಕ್ಷಿ ಏನನ್ನು ಮುರಿದು ಹೊರಬರಬೇಕು? (ಕಠಿಣ)
8. ಕಡಲುಗಳ ರಾಣಿ ಎಂದರೆ ಯಾರು? (ಸಾ)
9. ಸಿಡಿಲ ಮರಿಗಳು ಯಾರು? (ಸಾ)
10. ನಾವು ಯಾವ ಹಾಡನ್ನು ಹಾಡಬೇಕು? (ಕಠಿಣ)

## III. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

11. ಪಂಜರದ ಪಕ್ಷಿ ಮತ್ತು ಕಡಲುಗಳ ರಾಣಿ ಈ ಪದಗಳ ಸಾಮ್ಯತೆಯನ್ನು ವಿಶ್ಲೇಷಿಸಿ. (ಕಠಿಣ)
12. ನೀರು ಹೇಗೆ ಕೊಳಕಾಗುತ್ತದೆ ಎಂಬುದನ್ನು ಬಿಡುಗಡೆಯ ಹಾಡು ಪದ್ಯದಲ್ಲಿ ತಿಳಿಸಲಾಗಿದೆ?(ಸಾ)
13. ಪಂಜರದ ಪಕ್ಷಿ ಸ್ವತಂತ್ರವಾಗಲು ಏನು ಮಾಡಬೇಕು? (ಸುಲಭ)

14. 'ನಮ್ಮ ಗುಡಿ' ಎಂಬುದನ್ನು ಪದ್ಯದಲ್ಲಿ ಹೇಗೆ ವರ್ಣಿಸಲಾಗಿದೆ? (ಸುಲಭ)
15. ಕಡಲ ರಾಣಿಗೆ ಉಳಿಗಾಲವಿಲ್ಲ ಎಂಬುದನ್ನು ನಿಮ್ಮ ಮಾತಿನಲ್ಲಿ ತಿಳಿಸಿ.(ಕಠಿಣ)
16. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಪ್ರಮುಖರ ಹೆಸರುಗಳನ್ನು ಬರೆಯಿರಿ.(ಸಾ)
17. ತಿಳಿ ನೀರ ಮಳೆ ಏಕೆ ಸುರಿಯಬೇಕು? (ಸಾ)

IV. **ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ**

18. ತೊಲಗು (ಸಾ)
19. ಸೊಕ್ಕು (ಸಾ)

V. **ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ**.

20. ಚಡಪಡಿಸು (ಸಾ)
21. ಪಣ (ಸಾ)

VI. **ಈ ಪದಗಳಿಗೆ ವಿವಿಧಾರ್ಥಕ ಪದಗಳನ್ನು ಬರೆಯಿರಿ**

22. ಹದ್ದು (ಕಠಿಣ)
23. ಸೆರೆ (ಕಠಿಣ)

**VII. ಈ ಪದ್ಯ ಭಾಗ ಪೂರ್ಣಗೊಳಿಸಿ. (ಸುಲಭ)**

24. ಜಾತಿ ಮತಗಳ—-----------

—--------------------------

—--------------------------

—------------ಒಕ್ಕೊರಲ ಹಾಡು.

**VIII. 25.ನಮ್ಮ ರಾಷ್ಟ್ರಧ್ವಜದ ಚಿತ್ರ ಬರೆದು, ಬಣ್ಣ ಹಚ್ಚಿ ಅವುಗಳ ಮಹತ್ವವನ್ನು ವಿವರಿಸಿ. (ಸಾ)**

•••••••••••••••••••••••••••••••••••••••••••••••••••••••••••••

**ಪದ್ಯಪಾಠ - 7**
**ತಿರುಕನ ಕನಸು**

**ಕಲಿಕಾ ಫಲ**

- **ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ,ಭಾವನಾತ್ಮಕ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು.**

| **ಕ್ಲಿಷ್ಟತೆಯ ಮಟ್ಟ** | | **ಪ್ರಶ್ನೆಗಳ ಸಂಖ್ಯೆ** |
|---|---|---|
| 1 | ಸುಲಭ | 31 |
| 2 | ಸಾಧಾರಣ | 07 |
| 3 | ಕಠಿಣ | 10 |
| **ಒಟ್ಟು** | | **48** |

| **ಉದ್ದಿಷ್ಟಗಳು** | | **ಶೇಕಡ** |
|---|---|---|
| 1. | ಜ್ಞಾನ | 64% |
| 2. | ತಿಳುವಳಿಕೆ | 22% |
| 3. | ಅಭಿವ್ಯಕ್ತಿ | 10% |
| 4. | ಪ್ರಶಂಸೆ | 04% |
| **ಒಟ್ಟು** | | **100** |

| **ಪ್ರಶ್ನೆಗಳ ಸ್ವರೂಪ** | **ಶೇಕಡ** |
|---|---|
| ಘಟಕ ಆಧಾರಿತ | 70% |
| ಭಾಷಾ ಚಟುವಟಿಕೆಗಳು | 30% |
| **ಒಟ್ಟು** | **100 %** |

## I. ಆವರಣದಲ್ಲಿ ಸೂಚಿಸಿದಂತೆ ಬರೆಯಿರಿ

1. ಪರಿಶೀಲನೆ, ಮಾಹಿತಿ ಸಂಗ್ರಹಣೆ , ವಿಷಯದ ಆಯ್ಕೆ , ನಿರ್ದಿಷ್ಟ ಚೌಕಟ್ಟಿನಲ್ಲಿ ವಿಷಯದ ಮಂಡನೆ.(ಸಾ)
   **(** ಪ್ರಬಂಧ ಬರೆಯುವ ಹಂತಗಳನ್ನು ಕ್ರಮವಾಗಿ ಬರೆಯಿರಿ)
2. ಶಾಂತಿ ( ಈ ಪದದ ವಿರುದ್ಧ ಪದ ಬರೆಯಿರಿ)(ಸುಲಭ)
3. ರಾಜ ( ಈ ಪದದ ಸಮನಾರ್ಥಕ ಪದಗಳನ್ನು ಬರೆಯಿರಿ)(ಸುಲಭ)
4. ಅಲ್ಪನಿಗೆ ಐಶ್ವರ್ಯ ಬಂದರೆ --------------- ( ಈ ಗಾದೆ ಮಾತನ್ನು ಪೂರ್ಣಗೊಳಿಸಿ )(ಸಾ)
5. ಪಟ್ಟ, ನಲ್ಲ, ಬೇಗ ( ಈ ಪದಗಳಿಗೆ ಪ್ರಾಸ ಪದಗಳನ್ನು ಬರೆಯಿರಿ)(ಸಾ)
6. ಅರಮನೆ, ಓಲಗ, ತಿರುಕ, ರಾಜ ( ಗುಂಪಿಗೆ ಸೇರದ ಪದ ಬರೆಯಿರಿ)(ಸುಲಭ)
7. ಹೆಂಗಸು ( ಈ ಪದವನ್ನು ಬಹುವಚನ ರೂಪಕ್ಕೆ ಬದಲಾಯಿಸಿ ) (ಸುಲಭ)
8. ತಿರುಕ ಹೆದರಿ ಕಣ್ಣ ತೆರೆದನು ! ( ಇಲ್ಲಿರುವ ಚಿನ್ಹೆ ಗುರುತಿಸಿ ಹೇಳಿರಿ) (ಸುಲಭ)

## II. ಬಿಟ್ಟ ಸ್ಥಳಗಳಿಗೆ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.

9. ತಿರುಕನು ಕನಸು ಕಂಡಿದ್ದು —-- (ಸುಲಭ)
   ಅ) ಅರಮನೆಯಲ್ಲಿ ಬ)ರಸ್ತೆಯಲ್ಲಿ
   ಕ)ಮುರುಕು ಧರ್ಮಶಾಲೆಯಲ್ಲಿ ಡ)ಮಾಳಿಗೆಯಲ್ಲಿ

10. ಪುರದ ರಾಜನಿಗೆ —--------- ಇರಲಿಲ್ಲ.(ಸುಲಭ)
    ಅ) ವರಕುಮಾರರು ಬ)ಕುಮಾರಿಯರು
    ಕ)ಮಂತ್ರಿಗಳು ಡ)ಹೆಂಡತಿಯರು

11. ಕುಸುಮಮಾಲೆಯನ್ನು —-------- ಕೈಗೆ ಇಡುವರು(ಸುಲಭ)

ಅ) ಸಿಂಹ　　ಬ)ಆನೆ

ಕ)ಹುಲಿ　　ಡ)ತಿರುಕ

12. ಕರಿಯು --------- ಕೊರಳಿಗೆ ಮಾಲೆ ಹಾಕಿತು. (ಸುಲಭ)

ಅ) ರಾಜನ　　ಆ)ರಾಣಿಯ

ಇ)ತಿರುಕನ　　ಈ)ಮಕ್ಕಳ

13. ರಾಜ್ಯದ ಜೊತೆಗೆ ತಿರುಕನಿಗೆ ------ ಕೊಟ್ಟರು. (ಸುಲಭ)

ಅ) ಹಣ್ಣುಗಳನ್ನು　　ಆ)ಕನ್ಯೆಯರನ್ನು

ಇ)ರಥವನ್ನು　　ಈ)ಮಕ್ಕಳನ್ನು

14. ತಿರುಕ ರಾಜನ ಬಳಿ —---------- ಅಂಗ ಬಲವಿತ್ತು. (ಸುಲಭ)

ಅ) ಗಜ ಬಲ　　ಆ) ಅಶ್ವ ಬಲ

ಇ) ಅಶ್ವ ಬಲ　　ಈ)ಚತುರಂಗಬಲ

15. ರಾಜನು ಸುತರುಗಳಿಗೆ —--------ಮಾಡಲು ನಿಶ್ಚಯಿಸಿದನು.(ಸುಲಭ)

ಅ) ಮದುವೆ　　ಆ)ಪಟ್ಟ

ಇ)ಯುದ್ಧ　　ಈ)ನಾಮಕರಣ

16. ತಿರುಕ ರಾಜನು ಕನಸಿನಿಂದ ಕಣ್ಣು ತೆರೆದನು.ಏಕೆಂದರೆ —----- (ಸುಲಭ)

ಅ) ನಿದ್ರಾಭಂಗವಾದ್ದರಿಂದ　　ಆ)ಮಂಚದಿಂದ ಬಿದ್ದುದರಿಂದ

ಇ)ರಾಜರ ದಂಡು ಮುತ್ತಿದ್ದರಿಂದ　　ಈ)ರಾಣಿಯು ಎಬ್ಬಿಸಿದ್ದರಿಂದ

## III. ಬಿಟ್ಟ ಸ್ಥಳ ತುಂಬಿರಿ.

17. ಮುಪ್ಪಿನ ಷಡಕ್ಷರಿಯವರ ಊರು —------ (ಸುಲಭ)
18. . ಒಡೆಯ ಪದದ ಸಮಾನಾರ್ಥಕ ಪದ —---------- (ಸುಲಭ)
19. —---------- ಒರಗುತ್ತ ಕನಸು ಕಂಡನು. (ಸುಲಭ)
20. ಕರಿಯ ಕೈಗೆ ---------- ನೀಡಿದರು. (ಸುಲಭ)
21. ಆನೆಯು ಯಾರ ಕೊರಳಿಗೆ ಮಾಲೆ ಹಾಕುತ್ತದೋ ಅವರೇ —-------(ಸುಲಭ)
22. ತಿರುಕರಾಜನು —-------- ರಾಜ್ಯವಾಳುತಿದ್ದನು(ಸುಲಭ)
23. ಸುತ ಪದದ —------- ಅರ್ಥ(ಸುಲಭ)
24. ಕೊಡೆ ಪದಕ್ಕೆ ------- ಮತ್ತು ------ ಎಂಬುದು ನಾನಾರ್ಥವಾಗಿದೆ. (ಸುಲಭ)
25. ರಾಜ ಪದದ ತದ್ಭವ ರೂಪ -------- ಆಗಿದೆ. (ಸುಲಭ)
26. ಧರ್ಮ ಪದದ ವಿರುದ್ಧ ಪದ ------- ಆಗಿದೆ ( ಸುಲಭ)

## IV. ಹೊಂದಿಸಿ ಬರೆಯಿರಿ

27.

| | |
|---|---|
| ೧. ಕರಿ | ಸೈನ್ಯ (ಸುಲಭ) |
| ೨.ತಿರುಕ | ಸುಭೋದ ಸಾರ (ಸುಲಭ) |
| ೩.ಮುಪ್ಪಿನ ಷಡಕ್ಷರಿ | ಧರ್ಮಶಾಲೆ (ಸುಲಭ) |
| ೪.ಸುತರು | ಕುಸುಮಬಾಲೆ (ಸುಲಭ) |
| ೫. ರಾಜ | ಧನ, ರಾಜ್ಯ, ತನುಜ, ಯುವತಿ (ಸುಲಭ) , |
| ೬. ಚಾತುರಂಗ | ರಾಯ (ಸುಲಭ) |
| ೭. ಚಾತುರ್ಮದ | ಸೈನ್ಯದ ನಾಲ್ಕು ಅಂಗ (ಸುಲಭ) |
| ೮. ದಂಡು | ಮದುವೆ(ಸುಲಭ) |

## V. ಮಾದರಿಯಂತೆ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯಿರಿ.

ಮಾದರಿ: ವರಕುಮಾರರಿಲ್ಲದಿರಲು=ವರ ಕುಮಾರರು +ಇಲ್ಲದಿರಲು

28. ಮೆಚ್ಚುವಂದದಿ = (ಸುಲಭ)
29. ಬಂದೆವೆನಲು = (ಸುಲಭ)
30. ಮಕ್ಕಳಾದುವಾಗಲೇ = (ಸುಲಭ)
31. ನುಡಿದನಿನಿತು = (ಸುಲಭ)
32. ಬಿಟ್ಟರಲ್ಲಿಯೇ = (ಸುಲಭ)

## VI. ಒಂದು ವಾಕ್ಯದಲ್ಲಿ ಉತ್ತರಿಸಿ.

33. ತಿರುಕನು ಎಲ್ಲಿ ವಾಸಿಸುತ್ತಿದ್ದನು? (ಸಾ)
34. ತಿರುಕನ ಕನಸಲ್ಲಿ ಸತ್ತವರು ಯಾರು? (ಸಾ)
35. ಆನೆಯ ಕೈಯಲ್ಲಿ ಮಾಲೆ ಹಾಕಿಸಿಕೊಂಡವರು ಯಾರು? (ಸಾ)
36. ಕನಸಿನಲ್ಲಿ ರಾಜ ಏನು ಮಾಡುತ್ತಿದ್ದನು? (ಸಾ)
37. ಲೋಲನಾದ ರಾಜ ಮಂತ್ರಿಗೆ ಹೇಳಿದುದೇನು? (ಸಾ)
38. ಉಳಿದ ರಾಯರೆಲ್ಲ ಮೆಚ್ಚುವಂತ ಕೆಲಸ ರಾಜ ಏನು ಮಾಡಿದ? (ಸಾ)
39. ಯಾವುದರಿಂದ ರಾಜ ಹಿಗ್ಗುತ್ತಿದ್ದನು? (ಸಾ)
40. ಯಾರ ದಂಡು ತಿರುಕರಾಜನಿಗೆ ಮುತ್ತಿದಂತಾಯ್ತು? (ಸಾ)

## VII. ಮೂರು/ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

41. ಕರಿಯ ಕೈಗೆ ಮಾಲೆ ಕೊಡಲು ಕಾರಣವೇನು?(ಕಠಿಣ)
42. ತಿರುಕನಿಗೆ ರಾಜನಾಗುವ ಅದೃಷ್ಟ ಹೇಗೆ ಬಂತು?(ಕಠಿಣ)
43. ನೃಪರೆಲ್ಲ ತಿರುಕ ರಾಜನಿಗೆ ಏನು ನೀಡಿದರು?(ಕಠಿಣ)
44. ರಾಜನಾದ ತಿರುಕನ ಜೀವನ ಹೇಗಿತ್ತು?(ಕಠಿಣ)
45. ಸುತರುಗಳ ಮದುವೆ ತಯಾರಿ ಬಗ್ಗೆ ತಿಳಿಸಿ.(ಕಠಿಣ)
46. ರಾಜನು ಯಾವ ಸುಖಗಳಲ್ಲಿ ತೇಲುತ್ತಿದ್ದನು?(ಕಠಿಣ)
47. ರಾಜನು ಕನಸಿನಿಂದ ಕಣ್ಣನು ಏಕೆ ತೆರೆದನು?(ಕಠಿಣ)
48. ಒಂದು ದಿನದ ಮಟ್ಟಿಗೆ ನಿಮ್ಮನ್ನು ರಾಜರನ್ನಾಗಿ ಮಾಡಿದರೆ ಏನೆಲ್ಲಾ ಮಾಡುವಿರಿ ಎಂಬುದನ್ನು ಬರೆಯಿರಿ.(ಕಠಿಣ)

……………………………………………………………

## ಪದ್ಯಪಾಠ - 8
## ಅಭಿಮನ್ಯು ಪರಾಕ್ರಮ

**ಕಲಿಕಾ ಫಲ**

- **ಕಥೆ, ಕವಿತೆಗಳನ್ನು ಓದಿ ಅವುಗಳಲ್ಲಿನ ವರ್ಣನಾತ್ಮಕ ,ಭಾವನಾತ್ಮಕ ಬರೆವಣಿಗೆ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳನ್ನು ಹಾಗು ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು.**

| **ಕ್ಲಿಷ್ಟತೆಯ ಮಟ್ಟ** | | **ಪ್ರಶ್ನೆಗಳ ಸಂಖ್ಯೆ** |
|---|---|---|
| 1 | ಸುಲಭ | 06 |
| 2 | ಸಾಧಾರಣ | 08 |
| 3 | ಕಠಿಣ | 02 |
| **ಒಟ್ಟು** | | **16** |

| **ಉದ್ದಿಷ್ಟಗಳು** | | **ಶೇಕಡ** |
|---|---|---|
| 1. | ಜ್ಞಾನ | 35% |
| 2. | ತಿಳುವಳಿಕೆ | 60% |
| 3. | ಅಭಿವ್ಯಕ್ತಿ | 00% |
| 4. | ಪ್ರಶಂಸೆ | 05% |
| **ಒಟ್ಟು** | | **100** |

| **ಪ್ರಶ್ನೆಗಳ ಸ್ವರೂಪ** | **ಶೇಕಡ** |
|---|---|
| ಘಟಕ ಆಧಾರಿತ | 50% |
| ಭಾಷಾ ಚಟುವಟಿಕೆ | 50% |
| **ಒಟ್ಟು** | **100 %** |

### I. ಕೆಳಗಿನ ರೂಪಕಗಳನ್ನು ಅರ್ಥ ಮಾಡಿಕೊಂಡು ನಿಮ್ಮದೇ ಶೈಲಿಯಲ್ಲಿ ವಿವರಿಸಿ.

1. 'ವಹ್ನಿಜ್ವಾಲೆ ಹಿಮಕಂಜುವುದೆ' (ಸಾದಾರಣ)
2. ಗಾಳಿಬೆಮರುವುದುಂಟೆ (ಸಾದಾರಣ)
3. ಲೆಪ್ಪದುರುಗನ ಹಿಡಿಯಲೇತಕೆ ಗರುಡ ಮಂತ್ರವು (ಸಾದಾರಣ)
4. ಮರೀಚಿಯ ತೊರೆಗೆ ಹರುಗೋಲಿಡುವರುಂಟೇ (ಸಾದಾರಣ)
5. ಮಂಜಿನ ಮೇಲುಗಾಳಿಗವುಂಟೆ ಬಲುಬೇಸಿಗೆಯ ಬಿಸಿಲೊಳಗೆ (ಸಾದಾರಣ)

### II. ಕೆಳಗಿನ ಮಹಾಭಾರತದ ಪಾತ್ರಗಳಿಗೆ ಸಂಬಂಧವನ್ನು ಕಲ್ಪಿಸಿ ಹೊಂದಿಸಿ ಬರೆಯಿರಿ.

6.

| | |
|---|---|
| ೧. ಅಭಿಮನ್ಯು. | ಪಾಂಡವರಲ್ಲಿ ಹಿರಿಯ(ಸುಲಭ) |
| ೨.ಕೊಡನ ಮಗ | ಅರ್ಜುನ ಸುಭದ್ರೆಯ ಮಗ(ಸುಲಭ) |
| ೩.ಕೃಪ | ದ್ರೋಣಾಚಾರ್ಯ(ಸುಲಭ) |
| ೪.ರಾಧೆಯ. | ಪಾಂಡವ ಕೌರವರಿಗೆ ಬಿಲ್ವಿದ್ಯೆ ಕಲಿಸಿದ ಗುರು(ಸುಲಭ) |
| ೫.ಧರ್ಮರಾಯ. | ಕರ್ಣ(ಸುಲಭ) |

### III. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

7. 'ಆಹವ' ಪದದ ಹೊಸಗನ್ನಡ ರೂಪ —-(ಸುಲಭ)
   (ಜಗಳ, ಯುದ್ದ, ಸೈನ್ಯ, ಸೇನೆ)

8. ’ಗದುಗಿನ ನಾರಣಪ್ಪ’ ಎಂದು ಕರೆಯಲಾಗುವ ಕವಿ —-------(ಸುಲಭ)
(ರನ್ನ, ಪಂಪ, ಕುಮಾರವ್ಯಾಸ, ಜನ್ನ)
9. ಛಂದಸ್ಸಿನ ಭಾಷೆಯಲ್ಲಿ ಲಘು ಗುರುತಿಸಲು ಬಳಸುವ ಚಿನ್ಹೆ —---------(ಸುಲಭ)
(U, C, - , ∩)
10. ಛಂದಸ್ಸಿನ ಭಾಷೆಯಲ್ಲಿ ಎರಡು ಮಾತ್ರಾ ಕಾಲದ (ದೀರ್ಘಸ್ವರ) ಅಕ್ಷರಗಳನ್ನು ಹೀಗೆ ಕರೆಯುತ್ತಾರೆ. (ಸುಲಭ)
(ಲಘು, ಅಲ್ಪಪ್ರಾಣ, ಗುರು, ಮಹಾಪ್ರಾಣ)
11. ’ಗದುಗಿನ ಭಾರತ’ ಎಂದು ಕರೆಯಲಾಗುವ ಕೃತಿ—-----(ಸುಲಭ)
(ಕರ್ನಾಟಕ ಭಾರತ, ಭಾರತ ಮಂಜರಿ, ಕರ್ನಾಟಕ ಭಾರತ ಕಥ, ಕರ್ನಾಟಕ ಭಾರತ ಕಥಾ ಮಂಜರಿ )

## IV. **ಈ ಕೆಳಗಿನ ಸಾಲುಗಳನ್ನು ಸಂದರ್ಭ ಸಹಿತ ವಿವರಿ**ಸಿ.

12. ಬಾಲನಿವ ನಿನ್ನದಿರು ದುಗುಡವ ತಾಳಲಾಗದು ಬೊಪ್ಪ(ಸಾದಾರಣ)

## V. **ಈ ಕೆಳಗಿನ ಸಾಲಿಗೆ ಪ್ರಸ್ತಾರ ಹಾಕಿ. (ಕಠಿಣ)**

13. ಕೋಳಿ ಕೂಗಿತು ಬೆಳಕು ಹರಿಯಿತು

## VI. **ಈ ಕೆಳಗಿನ ಪದ್ಯದ ಭಾವವನ್ನು ನಿಮ್ಮದೇ ಶೈಲಿಯಲ್ಲಿ ಬರೆಯಿರಿ(ಕಠಿಣ)**

14. ಜನಪನಂಘ್ರಿಗೆ ಮಣಿದು ಕೈ ಮುಗಿ
ದೆನಗೆ ಬೆಸಸೈ ಬೊಪ್ಪ ತಾ ಬ
ಲ್ಲೆನು ಮಹಾಹೊವದೊಳಗೆ ಪದ್ಮವ್ಯೂಹ ಭೇದನವ

## VII. **ಈ ಪ್ರಶ್ನೆಗಳಿಗೆ ಉತ್ತರಿಸಿ.**

15. ಷಟ್ಪದಿಯ ವಿವಿಧ ರೂಪಗಳನ್ನು ಹೆಸರಿಸಿ (ಸಾದಾರಣ)
16. ಕುಮಾರವ್ಯಾಸ ಬಳಸಿರುವ ಷಟ್ಪದಿಯ ರೂಪ ಯಾವುದು? (ಸಾದಾರಣ)

…………………………………………………………………………………

# ಮಾದರಿ ಉತ್ತರಗಳು

## ಗದ್ಯಪಾಠ - 1

## ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು

1. ೧.ಅಂಕಿತನಾಮ
   ೨.ರೂಢನಾಮ
   ೩.ಅನ್ವರ್ಥನಾಮ
   ೪. ವಿಶೇಷಣ
2. ಹಾಡಿನ ಮೂಲಕ ಹೇಳುವ ಕಥೆ
3. ಭಯ
4. ಕಾಡಿನಲ್ಲಿರುವ ಪ್ರಾಣಿಗಳು ನೀರನ್ನು ಕುಡಿಯಲು ಮಾಡಿಕೊಂಡಿರುವ ಕಿಂಡಿ/ ದಾರಿ
5. ಸಮಾಧಾನ
6. ಐದು
7. ಅವರು
8. ಸಿಹಿ
9. ನೀಡಿದರು
10. ತಮಾಷೆ ಕತೆ, ಪುಟಾಣಿ ಕತೆ,ಸಣ್ಣ ಕತೆ , ದೊಡ್ಡ ಕತೆ, ಹಾಡ್ಕತೆ.
11. ಜಿಂಕೆಯನ್ನು
12. ಸೊಪ್ಪು ಸದೆ, ಬೇರು, ತೊಗಟೆ ತಂದು ಮದ್ದು ಮಾಡಿ ಉಪಚರಿಸಿತು
13. ಗೆಜ್ಜೆ
14. ಬೆಳೆದ ಕಾಡನ್ನು ಕತ್ತರಿಸಿ ಮನೆ ಕಟ್ಟಿದ. ಮನೆಯ ಮುಂದೆ ತೋಟ ಮಾಡಿ ತನಗೆ ಏನು ಬೇಕು ಅದನ್ನು ಬೆಳೆದುಕೊಂಡು ಅಲ್ಲಿಯೇ ಉಳಿದ.
15. ಹುಲಿಯು ಯುವಕನನ್ನು ಸಿಕ್ಕಲ್ಲಿ ಕಚ್ಚಿತು, ಗಾಯ ಮಾಡಿತು, ಕೊನೆಗೆ ಯುವಕ ಸೋಲಲಿಲ್ಲ. ಹುಲಿ ಸೋತು ಪಲಾಯನ ಮಾಡಿತು.
16. ಯುವತಿಯು ಜಿಂಕೆಯನ್ನು ಕುರಿತು ಜಿಂಕೆಯನ್ನು ನಾನು ಸಾಕಿರುವುದು. ಅದು ತಪ್ಪಿಸಿಕೊಂಡು ಕಾಡಿಗೆ ಬಂದಿದೆ.ಅದನ್ನು ಹುಲಿ ಅಟ್ಟಿಸಿಕೊಂಡು ಬಂದಿದೆ ಎಂದು ತಿಳಿಯಿತು. ಆದರೂ ಚುಕ್ಕಿ ಬದುಕಿದೆ ಎಂಬ ನಂಬಿಕೆ ಇಟ್ಟು ಹುಡುಕುತ್ತಿದ್ದೆ ಎಂದು ಹೇಳಿದಾಗ ಯುವಕನು ಜಿಂಕೆಯನ್ನು ನಾನು ಹುಲಿಯಿಂದ ರಕ್ಷಿಸಿದ್ದೇನೆ. ಅದು ನನಗೆ ಸೇರಿದ್ದು ಎಂದು ಹೇಳಿದನು. ಹೀಗೆ ಅವರ ಸಂಭಾಷಣೆ ನಡೆಯಿತು.
17. ಕಾಡಿನ ಬೆಂಕಿ, ದ್ವೀಪ, ಬಳುವಳಿ,ಮುಳುಗಡೆಯ ಊರಿಗೆ ಬಂದವರು ಇವು ಡಾ.ನಾಬರ್ಟ್ ಡಿಸೋಜಾ ಅವರು ಬರೆದಿರುವ ಕೃತಿಗಳು.
18. (ಮಕ್ಕಳ ಸ್ವ ರಚನೆಗೆ ಅವಕಾಶ ನೀಡಿದೆ)
19. ಸಣ್ಣ ಕಥೆಯು ಪುಟ್ಟದಾಗಿದ್ದು, ಸಮಯದ ಅವಧಿಯೂ ಕಡಿಮೆ ಇರುತ್ತದೆ. ಸಾಮಾನ್ಯವಾಗಿ ಇದರೊಳಗೆ ಕಥೆಯೊಳಗೊಂದು ಕಥೆ ಈ ರೀತಿ ಇರದೇ ಒಂದೇ ಕಥೆ ಬರುತ್ತದೆ. ಹಾಡ್ಕತೆಯು ದೀರ್ಘವಾಗಿದ್ದು, ಲಯಬದ್ಧ ಹಾಗೂ ಪ್ರಾಸಬದ್ಧವಾಗಿರುತ್ತದೆ. ಗದ್ಯರೂಪದ ಕಥೆಯೊಂದಿಗೆ ಪದ್ಯವೂ ಇರುತ್ತದೆ. ಕಥೆಯ ವರ್ಣನೆಯು ಪದಗಳ ಚಮತ್ಕಾರದಿಂದ ಕೂಡಿರುತ್ತದೆ. ಕೇಳಲು ಹಿತವಾಗಿರುತ್ತದೆ.
20. ವ್ಯಕ್ತಿಗಳ ಹೆಸರು-ಪುಟ್ಟಜ್ಜಿ,ಚುಕ್ಕಿ.
    ಪ್ರಾಣಿ ಗಳ ಹೆಸರು-ಹುಲಿ, ಚಿರತೆ, ಕಾಡುಕೋಣ, ಆನೆ.

21. ಸಾಕುಪ್ರಾಣಿಗಳು ವ್ಯವಹಾರ ಹಾಗೂ ಪ್ರೀತಿಯ ಉದ್ದೇಶದಿಂದ ಮನೆಗಳಲ್ಲಿ ಸಾಕುವಂತಹವು. ಇವುಗಳು ಸಾಧು ಸ್ವಭಾವದಿಂದ ಕೂಡಿದ್ದು, ಮನುಷ್ಯರಿಗೆ ಸಾಮಾನ್ಯವಾಗಿ ಯಾವುದೇ ಹಾನಿ ಉಂಟು ಮಾಡುವುದಿಲ್ಲ.

    ಕಾಡು ಪ್ರಾಣಿಗಳು ಕಾಡಿನಲ್ಲಿ ವಾಸಿಸುತ್ತಿರುತ್ತವೆ ಹಾಗೂ ಕ್ರೂರ ಭಾವನೆಯನ್ನು ಮೂಡಿಸುತ್ತವೆ.

22. ಯುವಕನು ಕಾಡುಪ್ರಾಣಿಗಳ ಸುದ್ದಿಗೆ ಹೋಗುತ್ತಿರಲಿಲ್ಲ.ಅವು ಇವನ ಸುದ್ದಿಗೆ ಬರುತ್ತಿರಲಿಲ್ಲ.ಇಬ್ಬರು ಅವರವರ ಪಾಡಿಗೆ ಸುಖವಾಗಿದ್ದರು.ಯುವಕನ ಮನೆ ಹತ್ತಿರವೇ ಪ್ರಾಣಿ ಗಿಂಡಿ ಇದ್ದು,ಅಲ್ಲಿಗೆ ಕಾಡು ಪ್ರಾಣಿಗಳು ಬಂದು ನೀರು ಕುಡಿದು ಹೋಗುವಷ್ಟು ನಿರ್ಭಯವಾದ ವಾತಾವರಣವಿತ್ತು.

.

## ಗದ್ಯಪಾಠ -2
## ಸೀನಸೆಟ್ಟರು ನಮ್ಮ ಟೀಚರು

1. ಮಾಂಡವಿ ಟೀಚರ್
2. ನಮ್ಮ
3. ಚೆನ್ನಾಗಿ, ತೆರಿಗೆ
4. ಸಾಸಿವೆ
5. ಕಾಳು ತುಂಬುವ ಮೊದಲು ಕಾಣುವ ಪೈರಿನ ತುದಿ
6. ತುಂಗಾ
7. ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು.
8. ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು.
9. ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶನೀಡುವುದು.
10. ಉತ್ತಮ ಪುರುಷ- ನಾವು
    ಪ್ರಥಮ ಪುರುಷ- ನೀನು, ನೀವು
    ಮಧ್ಯಮ ಪುರುಷ- ಅವರು, ಇವರು, ಅವನು, ಅದು, ಇವಳು
11. ಇದು ಗ್ರಾಮೀಣ ಪ್ರದೇಶದ ಚಿತ್ರ. ಗ್ರಾಮೀಣ ಪ್ರದೇಶಗಳ ಮನೆಗಳು, ವ್ಯವಸಾಯಕ್ಕೆ ಪೂರಕವಾಗಿ ದವಸ ಧಾನ್ಯಗಳನ್ನು ಹೊತ್ತ ಎತ್ತಿನಗಾಡಿಗಳು, ಗ್ರಾಮೀಣ ಪ್ರದೇಶದ ಹೆಣ್ಣು ಮಗಳು, ಗ್ರಾಮೀಣ ಪ್ರದೇಶದ ಸಾಕು ಪ್ರಾಣಿಗಳು, ಮುಂತಾದುವುಗಳನ್ನು ಚಿತ್ರದಲ್ಲಿ ಗಮನಿಸಬಹುದು. (ಮಾದರಿಯಂತೆ ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು)

12.ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು.

13.ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು.

14. ರೈತ ಅನ್ನದಾತ, ನಮಗೆಲ್ಲ ಉಪಕಾರಿ. ರೈತ ಕಷ್ಟಪಟ್ಟು ಬೇಸಾಯ ಮಾಡಿ ಬೆಳೆ ಬೆಳೆಯದಿದ್ದರೆ ನಮಗೆಲ್ಲ ಆಹಾರವಿಲ್ಲದೆ ಜೀವನ ನಿರ್ವಹಣೆ ಬಹಳ ಕಷ್ಟ ಆಗುತ್ತದೆ. ವ್ಯವಸಾಯ ಮಳೆಯೊಡನಾಡುವ ಜೂಜಾಟ ವಾಗಿದ್ದರೂ ರೈತ ಅದನ್ನೆಲ್ಲ ಸಹಿಸಿಕೊಂಡು ನಮಗೆಲ್ಲ ಅನ್ನ ನೀಡುವ ಅನ್ನದಾತನಾಗಿದ್ದಾನೆ. ಅಂತಹ ಅನ್ನದಾತನನ್ನು ನಾವೆಲ್ಲ ಗೌರವಿಸಬೇಕು. (ಮಾದರಿಯಂತೆ ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು)

15.
೧. ಸೀನ ಸೆಟ್ಟರು ಬೇಸಾಯದ ಟೀಚರು.
೨.ಚಿನ್ನರ ಲೋಕದ ಬಹುಪಾಲು ಮಕ್ಕಳು ರೈತ ಕುಟುಂಬದಿಂದ ಬಂದವರಾಗಿರುತ್ತಾರೆ.
೩. ಶಾಲಾ ಶಿಕ್ಷಣ ನಿಜ ಬದುಕಿನ ಜೊತೆಗೆ ಹಾಸು ಹೊಕ್ಕಿನ ಸಂಬಂಧ ಹೊಂದಿರಬೇಕೆಂಬುದು, ಮಾಂಡವಿ ಟೀಚರ್ ಶಾಲಾ ಶಿಕ್ಷಣದಲ್ಲಿ ಬೇಸಾಯವನ್ನು ಅಳವಡಿಸಲು ಮುಖ್ಯ ಕಾರಣವಾಗಿತ್ತು.

# ಗದ್ಯಪಾಠ -3
# ಹಿಲ್ಟನ್ ಹೆಡ್ ಚಳವಳಿ

1. "ಹಿಲ್ಟನ್ ಹೆಡ್ ಚಳುವಳಿ" - ಈ ಗದ್ಯಭಾಗವನ್ನು ಬರೆದವರು ಶಶಿಧರ ವಿಶ್ವಾಮಿತ್ರ.
2. ಲೇಖಕರು 1986ರಲ್ಲಿ ಅಮೆರಿಕಾಗೆ ಹೋಗಿದ್ದರು.
3. ಹಿಲ್ಟನ್ ಹೆಡ್ ದ್ವೀಪ ಅಟ್ಲಾಂಟಿಕ್ ಸಾಗರದಲ್ಲಿದೆ.
4. ಅಮೆರಿಕದಲ್ಲಿ ವಾಸವಾಗಿದ್ದ ಮೂಲ ನಿವಾಸಿಗಳನ್ನು ಸ್ಥಳೀಯ ಅಮೆರಿಂಡಿಯನ್ಸ್ ಎನ್ನುತ್ತಾರೆ.
5. ಶಶಿಧರ ವಿಶ್ವಾಮಿತ್ರರ ಮುಖ್ಯವಾದ ಕೃತಿಗಳು - ಖಿಲ, ಪದ ಕುಸಿಯೆ ನೆಲವಿಹುದೆ, ಹಿಂದೂ ಧರ್ಮ, ಸೃಷ್ಟಿಯ ರಂಗವಲ್ಲಿ.
6. ಅಮೆರಿಕವನ್ನು ಸಾಹುಕಾರರ ನಾಡು ಎಂದು ಕರೆಯುತ್ತಿದ್ದರು.
7. ಹಿಲ್ಟನ್ ಹೆಡ್ ನಲ್ಲಿ ಬಂದಿಳಿಯುವ ಶ್ರೀಮಂತರು ಬೂಟು, ಚೆಡ್ಡಿ, ಟೀಶರ್ಟ್, ಕೂಲಿಂಗ್ ಗ್ಲಾಸ್, ಸ್ಕಲ್ ಕ್ಯಾಪ್ ಧರಿಸುತ್ತಿದ್ದರು.
8. ಹಿಲ್ಟನ್ ಹೆಡ್ ದ್ವೀಪದಲ್ಲಿ ಗಾಲ್ಫ್, ಬೋಟಿಂಗ್ ಗಳನ್ನು ಆಯೋಜಿಸಲಾಗುತ್ತಿತ್ತು.
9. ಶಶಿಧರ ವಿಶ್ವಾಮಿತ್ರರ ಆತ್ಮಕಥೆ ಸಂಚಿ.
10. ಗಾಲ್ಫ್ ಆಟವನ್ನು ಶ್ರೀಮಂತರ ಆಟವೆಂದು ಕರೆಯಲಾಗುತ್ತದೆ.
11. ಕಡಲ ತಡಿಯ ಲೈಟ್ ಹೌಸನ್ನೇರಿದರೆ ಅಟ್ಲಾಂಟಿಕ್ ಮಹಾಸಾಗರ, ನೌಕೆಗಳು, ಕಡಲಕಾಗೆಗಳು ಕಾಣಿಸುತ್ತದೆ.
12. ಹಿಲ್ಟನ್ ಹೆಡ್ ನಲ್ಲಿರುವ ಸ್ಮಾರಕ ಲಿಬರ್ಟಿ ಓಕ್ ಮರ.
13. ಓಕ್ ಮರದ ಬಳಿ ಜನರು ಪರಿಸರ ಸಂರಕ್ಷಣೆಗೆ ಒಗ್ಗೂಡಿದ್ದರು.

14. ಲಕ್ಸುರಿ - ವಿಲಾಸಿ
15. ಲಿಬರ್ಟಿ - ಸ್ವಾತಂತ್ರ್ಯ
16.. ಐಡಿಯಾ - ಉಪಾಯ
17. ಸೀಬೀಚ್ - ಸಮುದ್ರ ತೀರ

18. ಆಗಮನ × ನಿರ್ಗಮನ
19. ಸುಂದರ × ಕುರೂಪ
20. ಲಾಭ × ನಷ್ಟ
21. ಆಸಕ್ತಿ × ನಿರಾಸಕ್ತಿ

22. ಪಚ್ಚೆ - ಹಸಿರು
23. ಬಡ್ಡೆ - ಬೇರು
24. ಪರ್ಯಾವರಣ - ಪರಿಸರ
25. ಅಭಿಯಂತರ - ಇಂಜಿನಿಯರ್

26.ನೆಲದಲ್ಲಾಳಿಗೆ
27. ಓಕ್
28.ವಿವಾಹ
29.ಐವತ್ತರ

30.ಧೂಳೀಪಟ

31. ಯುರೋಪಿಯನ್ನರು ಬಂದ ಮೇಲೆ ಹಿಲ್ಟನ್ ಹೆಡ್ ನಲ್ಲಿ ಪ್ರಾಕೃತಿಕ ಸೌಂದರ್ಯ ಅಳಿಸಿ ಹೋಯಿತು. ಆ ಸ್ಥಳದಲ್ಲಿ ಸೀಬೀಚ್ ಹೋಟೆಲ್ ಗಳು, ಸ್ಟೇಹೋಂಗಳು, ಗಾಲ್ಫ್ ಕೋರ್ಸುಗಳು ನಿರ್ಮಾಣವಾದವು.
32. ಲಕ್ಸುರಿ , ಲಿಬರ್ಟಿ, ಐಡಿಯಾ, ಸೀಬೀಚ್ , ಕೋರ್ಟ್, ಬೋಟ್, ಪ್ಲೇನ್ , ಸ್ಟ್ಯಾಚ್ಯೂ.
33. ಹಿಲ್ಟನ್ ಹೆಡ್ ಮೊದಲು ಒಂದು ಸುಂದರ ದ್ವೀಪವಾಗಿತ್ತು. ಅಲ್ಲಿ ಪುರಾತನ ಸಸ್ಯ ಸಂಪತ್ತು, ಹಳೆ ಕಾಲದ ಹೊಂಡಗಳು, ಹಿನ್ನೀರಿನ ಕೋವುಗಳು, ಕಡಲ ತೀರದ ಸಸ್ಯಗಳು ಮತ್ತು ಕಾಡಿನ ಮರಗಳು ಇದ್ದವು.
34. ಹಿಲ್ಟನ್ ಹೆಡ್ ನ ಸ್ಮಾರಕ ಹಳೆಯ ಓಕ್ ಮರ ಇದನ್ನು ಲಿಬರ್ಟಿ ಓಕ್ ಮರ ಎಂದು ಗುರುತಿಸಲಾಗುತ್ತದೆ. ಐವತ್ತರ ದಶಕದಲ್ಲಿ ಪರಿಸರ ರಕ್ಷಣೆಗಾಗಿ ಜನ ಈ ಮರದ ಕೆಳಗೆ ಒಗ್ಗೂಡಿ ಪಣತೊಟ್ಟಿದ್ದರು. "ಇದು ಸಂರಕ್ಷಿತ ಜಾಗ, ದಯವಿಟ್ಟು ಕಟಕಟೆಯ ಒಳಗೆ ಪ್ರವೇಶಿಸಬೇಡಿ" ಎನ್ನುವ ಫಲಕವನ್ನು ನೆಟ್ಟಿದ್ದರು. ಹೀಗೆ ಆ ಮರ ನೂರು ಕಾಲ ಬಾಳುವಂತೆ ರಕ್ಷಿತವಾಗಿತ್ತು ನಂತರದ ಕಾಲದಲ್ಲಿ ಈ ಮರದ ಪ್ರಸಿದ್ಧಿ ಎಲ್ಲೆಡೆ ಹರಡಿ ಇದರ ಸಾನಿಧ್ಯವನ್ನು ಕಂಡು ಮರಳಿದ ಜನ ತಂತಮ್ಮ ಕ್ಷೇತ್ರಗಳಲ್ಲಿ ಪರ್ಯಾವರಣದ ರಕ್ಷಣೆಯಲ್ಲಿ ಚುರುಕುಗೊಂಡರು

## ಗದ್ಯಪಾಠ - 4
## ಮೈಲಾರ ಮಹದೇವ

1. ೧.ಉಪ್ಪಿನ ಸತ್ಯಾಗ್ರಹ
   ೨. ನೂಲು
   ೩. ಪ್ರಕೃತಿ ಚಿಕಿತ್ಸೆ.
   ೪.ಸೆರೆಮನೆ.
2. ಮನೆ-ದೊಡ್ಡ
3. ಓದು – ತುಂಬಾ ಚೆನ್ನಾಗಿ
4. ಸುಂದರ – ಬಹಳ
5. ನಕ್ಷತ್ರ – ಮಿನುಗು
6. ಬ್ಯಾಂಕ್
7. ಕಪ್ಪು
8. ಮಹಾತ್ಮ ಗಾಂಧೀಜಿ,ಜಗದೀಶ್ ಚಂದ್ರ ಬೋಸ್ ,ಜವಾಹರ್ ಲಾಲ್ ನೆಹರು,ಕಿತ್ತೂರಾಣಿ ಚೆನ್ನಮ್ಮ ,ಝಾನ್ಸಿ ರಾಣಿ ಲಕ್ಷ್ಮೀಬಾಯಿ ಇತ್ಯಾದಿ . ವಿದ್ಯಾರ್ಥಿಗಳು ತಿಳಿಸುವ ಯಾವುದೇ ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ಪರಿಗಣಿಸುವುದು.
9. ಮೊದಲು ನಾವು ದೇಶ, ದೇಶದಲ್ಲಿ ಉತ್ಪನ್ನವಾಗುವ ವಸ್ತುಗಳಿಗೆ ಮಾನ್ಯತೆ ನೀಡಿ, ಅವುಗಳನ್ನು ಬಳಕೆ ಮಾಡುವುದರಿಂದ ದೇಶದ ಅಭಿವೃದ್ಧಿ ಹಾಗೂ ಆರ್ಥಿಕ ಸಮಸ್ಯೆಗೆ ಪರಿಹಾರ ಸಿಕ್ಕಂತಾಗುತ್ತದೆ. ಹಾಗಾಗಿ ದೇಶಪ್ರೇಮವನ್ನು ಎತ್ತಿ ಹಿಡಿಯುತ್ತಾ ಸ್ವದೇಶಿ ವಸ್ತುಗಳನ್ನೇ ಹೆಚ್ಚಾಗಿ ಬಳಸಬೇಕು.
10. ಬಾಲ್ಯದಿಂದಲೇ ನಾವು ನಮ್ಮ ಊರು, ನಮ್ಮ ರಾಜ್ಯ, ನಮ್ಮ ದೇಶ ಎಂಬ ಭಾವನೆ ಬೆಳೆಸಿಕೊಂಡಷ್ಟು ದೇಶದ ಮೇಲಿನ ಹಾಗೂ ನಮ್ಮ ತಾಯ್ನಾಡಿನ ಬಗೆಗೆ  ಒಲವು ಹಾಗೂ ಪ್ರೀತಿ ಹೆಚ್ಚುತ್ತದೆ. ಹಾಗಾಗಿ ಬಾಲ್ಯದಲ್ಲೇ ದೇಶಪ್ರೇಮವನ್ನು ಬೆಳೆಸಬೇಕು.

11.
   1. ಉಪ್ಪಿನ ಸತ್ಯಾಗ್ರಹ
   2. ಮಾಡು ಇಲ್ಲವೇ ಮಡಿ
   3. ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ
   4. ಸಿಪಾಯಿ ದಂಗೆ.
12. ಅಂದು ಜನರಿಗೆ ಸ್ವದೇಶದಲ್ಲೇ ಉತ್ಪನ್ನವಾಗುತ್ತಿದ್ದದ್ದು  ಖಾದಿ ಬಟ್ಟೆ ಆದ್ದರಿಂದ ಎಲ್ಲರೂ ಖಾದಿ ಬಟ್ಟೆಯನ್ನೇ ಹೆಚ್ಚು ಒಲವು ತೋರಿಸಿ ತೊಡುತ್ತಿದ್ದರು.
13. ಸಬರಮತಿ ಆಶ್ರಮವು ಗುಜರಾತಿನ ಅಲಹಾಬಾದ್ ನಲ್ಲಿದೆ. ಈ ಆಶ್ರಮವು ಸ್ವಾತಂತ್ರ ಹೋರಾಟದ ಬಗೆಗಿನ ಪ್ರಮುಖ ನಿರ್ಣಯಗಳನ್ನು ಚರ್ಚಿಸುವ ಜಾಗವಾಗಿತ್ತು . ಅಲ್ಲದೆ ಆಧ್ಯಾತ್ಮಿಕ ಹಾಗೂ ವ್ಯಾಯಾಮ ಮತ್ತು  ಶಿಸ್ತು ಬದ್ಧ ಜೀವನಕ್ಕೂಆಸರೆಯಾಗಿತ್ತು.
14. ಸೆರೆಮನೆಯು ಕೈದಿಗಳನ್ನು ಸೆರೆಹಿಡಿಯುವ ಜಾಗವಾಗಿರುತ್ತದೆ. ಇಲ್ಲಿ ಯಾವುದೇ ಸ್ವತಂತ್ರವಿರುವುದಿಲ್ಲ. ಇಲ್ಲಿ ಅಪರಾಧಿಗಳು ಬಂಧಿಯಾಗಿರುತ್ತಾರೆ.ಅರಮನೆಯಲ್ಲಿ ರಾಜ, ರಾಣಿ ,ರಾಜಕುಮಾರ, ರಾಜಕುಮಾರಿ ಅವರುಗಳಿಗೆ ಸೇವಕರು ಇರುತ್ತಾರೆ. ರಾಜರ ಪರಿವಾರ ಇಲ್ಲಿ ಐಶಾರಾಮಿ ಜೀವನ ನಡೆಸಬಹುದು. ಇದು ರಾಜ ಹಾಗೂ ಅವರ ಕುಟುಂಬ ಸ್ವತಂತ್ರವಾಗಿ ತಮ್ಮ ಇಷ್ಟದಂತೆ ಇರುವ ಮನೆಯಾಗಿರುತ್ತದೆ.

15. ನಮ್ಮ ಉತ್ತಮವಾದ ಆರೋಗ್ಯಕ್ಕಾಗಿ ಹಾಗೂ ಉತ್ತಮವಾದ ಜೀವನಶೈಲಿಗಾಗಿ ನಾವು ಉತ್ತಮ ವ್ಯಾಯಾಮಗಳನ್ನು ಹಾಗೂ ಶಿಸ್ತು ಬದ್ಧ ಜೀವನ ಶೈಲಿಯನ್ನು ರೂಡಿಸಿಕೊಳ್ಳಬೇಕಿದೆ.

16. ಅಹಿಂಸಾತ್ಮಕ ಹೋರಾಟದಿಂದ ಯಾವುದೇ ರೀತಿಯ ಜಗಳ ,ಹೊಡೆದಾಟ ರಕ್ತಪಾತಗಳು ಜರುಗುವುದಿಲ್ಲ. ಯಾವುದೇ ರೀತಿಯ ಹಿಂಸೆ ಇಲ್ಲದಂತೆ ಚಳುವಳಿ ಮಾಡುವುದೇ ಅಹಿಂಸಾತ್ಮಕ ಹೋರಾಟ ಆಗಿರುತ್ತದೆ.

17. ವಿದ್ಯಾರ್ಥಿಗಳು ಬರೆಯುವ ಯಾವುದೇ ಸ್ವಾತಂತ್ರ್ಯ ಹೋರಾಟಗಾರರನ್ನು ಪರಿಗಣಿಸುವುದು.

18. ಅಭಯಾರಣ್ಯ
19. ಸೆರೆಮನೆ
20. ಚರಕ
21. ಜವಾಹರ್ ಲಾಲ್ ನೆಹರು.
22. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು
23. ಬಸ್ಸು, ಕಾರು, ಸ್ಕೂಟರ್, ಟೆಲಿವಿಜನ್ ,ಟೆಲಿಫೋನ್, ರೈಲು ,ಟಿಕೆಟ್, ಸ್ಟೇಷನ್ ರೋಡು,ರೇಡಿಯೋ.

24. ೧. ಮತ್ತು ೨ನೇ ಪ್ರಶ್ನೆಗಳಿಗೆ ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು
25. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು
26. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು
27. ಈ ಕಾರ್ಯಕ್ರಮವು ಮಕ್ಕಳ ದಿನಾಚರಣೆ ಯಾಗಿರುತ್ತದೆ. ( ಕಾರ್ಯಕ್ರಮದ ಕುರಿತಂತೆ ಮಕ್ಕಳ ಅಭಿಪ್ರಾಯವನ್ನು ಸಂಗ್ರಹಿಸುವುದು.)

## ಗದ್ಯಪಾಠ - 5
## ಪರಿಸರ ಸಮತೋಲನ

1. ಬಂಧುವಿಲ್ಲ
2. ಆನೆ
3. ಕಡಲು
4. ಬೆಟ್ಟದಾವರೆ
5. ವಿಪುಲವಾದ ನೀರು, ಅರ್ದ್ರತೆ ಇರುವಲ್ಲಿ ಕಾಡು ಬೆಳೆಯುತ್ತದೆ
6. ಕೀಟ, ವಾಯು, ನೀರು ಮೊದಲಾವುದವುಗಳ ಮೂಲಕ ಬೀಜ ಪ್ರಸರಣ ನಡೆಯುತ್ತದೆ
7. ಆಹಾರ ಆಚ್ಛಾಧನೆಗಳಿಗಾಗಿ ಸ್ಪರ್ಧೆ ನಡೆಯುತ್ತದೆ
8. ಜನಸಂಖ್ಯೆ ಏರಿಕೆ, ಕೈಗಾರಿಕೀಕರಣ, ನಗರೀಕರಣ, ಆಧುನಿಕರಣಗಳ ಭರಾಟೆಯಲ್ಲಿ ಸಸ್ಯ ಪ್ರಾಣಿ ಸಂಕುಲ ನಶಿಸಿ ಹೋಗುತ್ತಿವೆ.
9. ರಿಂದ 12 ರವರೆಗಿನ ಪದಗಳಿಗೆ ಮಕ್ಕಳ ವಾಕ್ಯರಚನೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

13 ಬಟ್ಟೆ

14 ತೇವಾಂಶ, ನೀರಿನ ಅಂಶ

15 ಜೇಬು

16 ಜಿಂಕೆ

17. ಮಾನವನು ವಿಮಾನ ರೈಲ್ವೆ ಮೋಟಾರ್ ನಿಲ್ದಾಣಗಳನ್ನು ಕಟ್ಟುವುದರಿಂದ ಹೆದ್ದಾರಿಗಳನ್ನು ಮಾಡುವುದರಿಂದ, ಸರೋವರ,ಕೆರೆ, ಮತ್ತು ಹೊಂಡಗಳು ಬೇರೆ ಬೇರೆ ಕೆಲಸಕ್ಕೆ ಬಳಕೆಯಾಗುತ್ತಿವೆ.

18 ನಿಸರ್ಗದ ಆಗುಹೋಗುಗಳನ್ನು ವಿವರವಾಗಿ ಅಭ್ಯಸಿಸಿ ಮಾನವನ ಚಟುವಟಿಕೆ ಮಾನವನಿಗೆ ಕಂಟಕ ಪ್ರಾಯವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು

19. ಬನ್ನೇರುಘಟ್ಟದಲ್ಲಿ ಮೊಸಳೆಗಳಿಗಾಗಿ ಮಾಡಿದ ಆಲಯದಲ್ಲಿ ಮೊಸಳೆಗಳ ಪಾಲನೆ ಪೋಷಣೆ ಮಾಡುತ್ತಿದ್ದಾರೆ. ವಿಷಕಾರಿ ಹಾವುಗಳನ್ನು ಸಾಕುವ ಕೇಂದ್ರಗಳನ್ನು ಮುಂಬೈ ಮತ್ತು ಮದರಾಸಿನಲ್ಲಿ ಪ್ರಾರಂಭಿಸಿ ಹಾವುಗಳನ್ನು ಸಂರಕ್ಷಿಸಲಾಗುತ್ತಿದೆ.

20. ಹಕ್ಕಿಗಳು ಬೇರೆ ತಾಣ ಹುಡುಕಿಕೊಳ್ಳುತ್ತವೆ ಮೇವಿಲ್ಲದೆ ಚಿಗರೆಗಳು ಮಾಯವಾಗುತ್ತವೆ. ಚಿಗರೆಗಳನ್ನು ಬೇಟೆಯಾಡಿ ಜೀವಿಸುತ್ತಿದ್ದ ಹುಲಿ ಚಿರತೆ ಸಿಂಹಗಳು ತೊಲಗಬೇಕಾಗುತ್ತದೆ ಅವಿತುಕೊಳ್ಳಲು ಮರೆ ಇಲ್ಲದಿದ್ದರಿಂದ ತೋಳ ಕರಡಿಗಳು ಓಡಿ ಹೋಗುತ್ತವೆ ಹಣ್ಣು ಹಂಪಲು ಸಿಗದಿದ್ದರಿಂದ ಇಣಚಿ ಕಣ್ಣುಕಪ್ಪಡಿಗಳು ಪ್ರಯಾಣ ಬೆಳೆಸುತ್ತವೆ ಬೋಳು ಮಾಡಿದ ಕಾಡಿನಿಂದ ಇಲಿಗಳು ಇಲಿಗಳನ್ನು ನಂಬಿದ್ದ ಹಾವುಗಳು ಹೊರಡುತ್ತವೆ ಕೊರೆಯುವ ಚಳಿ ಸುಡು ಬಿಸಿಲು ಹರಿವ ನೀರಿಗೆ ನೆಲದೊಳಗಿನ ಪ್ರಾಣಿಗಳು ಸಾವಿಗೀಡಾಗುತ್ತವೆ.

## ಗದ್ಯಪಾಠ – 6
## ಚಗಳಿ ಇರುವೆ

1. ಫಿರಮೊನ್
2. ಗೂಡು (ಇರುವೆ ಗೂಡು)
3. ರಾಣಿ ಇರುವೆ
4. ಉತ್ತರ ಪದ
5. ಗೌರವ
6. ಚಗಳಿ ಇರುವೆ ಅಥವಾ ಕೆಂಜುಗ
7. ಕಟ್ಟಿರುವೆ ಅಥವಾ ಕೆಂಪಿರುವೆ
8. ಶಿಸ್ತು, ಧೈರ್ಯ, ಒಗ್ಗಟ್ಟು
9. ತಿಗಣೆ ಮತ್ತು ಜಿಗಿಹುಳು
10. ಮಳೆಗಾಲ
11. ಗೋಪಾಲಕ ಇರುವೆಗಳೆಂದರೆ ಕೆಲಸಗಾರ ಇರುವೆಗಳು. ಇವುಗಳ ಕೆಲಸ ತಿಗಣೆ ಮತ್ತು ಜಿಗಿ ಹುಳುಗಳನ್ನು ಆವು ಗೂಡು ಮಾಡಿರುವ ಮರ-ಗಿಡಗಳಲ್ಲಿ ತಂದಿಟ್ಟು ಸಾಕುವುದು.
12. ಚಗಳಿ  ಇರುವೆಗಳು ಶತ್ರುಗಳನ್ನು ನೋಡಿ ಓಡುವುದಕ್ಕೆ ಬದಲಾಗಿ ತಿರುಗಿ ನಿಂತು ಕಚ್ಚಲು ಸಿದ್ಧವಾಗುತ್ತವೆ ಹಾಗೂ ತನ್ನ ಹಿಂಭಾಗವನ್ನೆತ್ತಿ ಹೊಟ್ಟೆ ಅಡಿಯಲ್ಲಿರುವ  ಗ್ರಂಥಿಗಳಿಂದ  ಅಪಾಯದ ಫಿರಮೋನ್  ಎಂಬ ರಾಸಾಯನಿಕವನ್ನು ಗಾಳಿಯಲ್ಲಿ ಸಿಂಪಡಿಸಿ ಕೆಲವೇ ಕ್ಷಣಗಳಲ್ಲಿ ಸುತ್ತಮುತ್ತ ಇರುವ ಎಲ್ಲ ಚಗಳಿಇರುವೆಗಳೂ ಯುದ್ಧ ಸನ್ನದ್ಧರಾಗುವಂತೆ, ಒಗ್ಗಟ್ಟಾಗುವಂತೆ ಮಾಡುತ್ತವೆ.
13.ಚಟ್ನಿ, ರೊಟ್ಟಿ, ವಡೆ ಮತ್ತು ತಿಳಿ ಸಾಂಬಾರ್ ತಯಾರಿಸುತ್ತಾರೆ.
14. ಎರೆಹುಳು, ಜೇನುಹುಳು, ರೇಷ್ಮೆ ಹುಳು, ಜಿಗಣೆ ಮುಂತಾದವು.
15. ಕೆಂಜುಗ ಕಟ್ಟಿರುವೆ ಕೆಂಪಿರುವೆ, ಕಪ್ಪಿರುವೆ, ನಾತಿರುವೆ ಇತ್ಯಾದಿ.

16. ಕೆ ಪಿ ಪೂರ್ಣಚಂದ್ರ ತೇಜಸ್ವಿ
ಸ್ಥಳ: ಶಿವಮೊಗ್ಗ
ಕಾಲ: 1938ರ ಸೆಪ್ಟೆಂಬರ್ 8ರಂದು ಜನನ
ಕೃತಿಗಳು: ಅಬ್ಬಚೂರಿನ ಪೋಸ್ಟ್ ಆಫೀಸ್ ಚಿದಂಬರ ರಹಸ್ಯ ತಬರನ ಕಥೆ

15. ಇರುವೆ ಗೂಡು ಕಟ್ಟುವಾಗ ಬಗ್ಗಿಸಬೇಕಾದ ಎಲೆಯ ಮೇಲೆ ನೂರಾರು ಇರುವೆಗಳು ಜಮಾಯಿಸಿ ಒಂದರ ಕಾಲನ್ನು ಒಂದು ಹಿಡಿದುಕೊಂಡು ಜೋತಾಡುತ್ತಾ ಕೆಳಗಿಳಿದು ಕೆಳಗಿನ ಎಲೆಯ ಅಂಚನ್ನು ಹಿಡಿದು ಜಲ್ಲಿನಿಂದ ಬರುವ ರಸವನ್ನು ದಾರ ಮಾಡಿ ದಾರದ ಸಹಾಯದಿಂದ ಕೆಲವೇ ಕ್ಷಣಗಳಲ್ಲಿ ಪೊಟ್ಟಣದ ರೂಪದಲ್ಲಿ ಗೂಡನ್ನು ತಯಾರಿಸುತ್ತದೆ.

18. ಲಾರ್ವ=ಕೀಟಗಳ ಮೊಟ್ಟೆ
ಮಾಳಿಗೆ=ಮಹಡಿ, ಅಟ್ಟ
ಫಿರಮೋನ್=ರಾಸಾಯನಿಕ ವಸ್ತು

19.  ಉದಾಹರಣೆ
ಅ) ಪ್ರಾರ್ಥನೆ: ನಾನು ಪ್ರತಿನಿತ್ಯ ದೇವರಲ್ಲಿ ಪ್ರಾರ್ಥಿಸುತ್ತೇನೆ.

ಆ) ಮೆಚ್ಚುಗೆ: ಚಗಳಿಇರುವೆಗಳು ಗೂಡು ಕಟ್ಟುವ ರೀತಿ ನನಗೆ ಮೆಚ್ಚುಗೆಯಾಯಿತು.
( ಸೂಕ್ತ ವಾಕ್ಯ ರಚನೆಯನ್ನು ಪರಿಗಣಿಸುವುದು).

20. ಪದಗಳಿಗೆ ಪದಗಳನ್ನು ಕೂಡಿಸಿದರೆ ಸಮಾಸ ಎನ್ನುತ್ತೇವೆ. ಉದಾಹರಣೆಗೆ :
ಅರಸನ ಮನೆ = ಅರಮನೆ
ಹಿರಿದಾದ ಜೇನು = ಹೆಜ್ಜೇನು

21. ಚಗಳಿ ಇರುವೆಗಳು ಸಸ್ಯಗಳಲ್ಲಿ ಇರುವ ತಿಗಣೆ ಮತ್ತು ಹಾಗೂ ಜಿಗಿ ಹುಳುಗಳನ್ನು ಹಿಡಿದು ಅವುಗಳಿಂದ ಸಸ್ಯಗಳನ್ನು ರಕ್ಷಿಸುವುದರ ಮೂಲಕ ರೈತನಿಗೆ ಸಹಾಯಕವಾಗಿವೆ. ಗೂಡಿನಲ್ಲಿ ತಿಗಣೆ ಮತ್ತು ಹಾಗೂ ಜಿಗಿ ಹುಳುಗಳನ್ನು ಹಿಡಿದು ತಂದು ಸಾಕುವುದರಿಂದ ,ಅವು ಗಿಡದಿಂದ ಗಿಡಕ್ಕೆ ಹಬ್ಬಿ ಕಾಟ ಕೊಡುವುದರಿಂದ . ಚಗಳಿ ಇರುವೆಗಳು ಇರುವ ಮರದಡಿ ಯಾವ ಪ್ರಾಣಿಗಳು ನಿಲ್ಲುವುದು ಅಪಾಯಕಾರಿಯಾಗಿದೆ.

22.
ಅ) ಜೇನು ಹುಳು: ಕೆಲಸಗಾರ ಜೇನುನೊಣಗಳು ತನ್ನ ಬಾಯಿಯಿಂದ ಜೊಲ್ಲು ರಸವನ್ನು ಮೇಣವಾಗಿ ಪರಿವರ್ತಿಸಿ ಆ ಮೇಣದಿಂದ ಗೂಡನ್ನು ಕಟ್ಟುತ್ತವೆ.
ಆ) ರೇಷ್ಮೆ ಹುಳು ವಯಸ್ಸಿಗೆ ಬಂದ ಅಥವಾ ಹಣ್ಣಾದ ರೇಷ್ಮೆ ಹುಳುಗಳು ಬಿಸಿಲಿನ ತಾಪಕೆ ತನ್ನ ಬಾಯಿಯಿಂದ ತಿಳಿ ಹಳದಿ ಹಾಗೂ ಬಿಳಿ ಬಣ್ಣದ ಜೊಲ್ಲನ್ನು ಉತ್ಪಾದಿಸಿ ಆ ಜೊಲ್ಲನ್ನು ತನ್ನ ಸುತ್ತಲೂ ಆವರಿಸಿಕೊಂಡು ಅದು ದಾರದ ರೂಪವಾದ ನಂತರ ನನ್ನ ಸುತ್ತಲೂ ಗೂಡನ್ನು ನಿರ್ಮಿಸುತ್ತದೆ.

## ಗದ್ಯಪಾಠ - 7
## ಬಿಲ್ಲ ಹಬ್ಬ

1. ರಾಯ
2. ಸ್ವತಂತ್ರ
3. ಕಂಸನು ವಸುದೇವ ಮತ್ತು ದೇವಕಿಗೆ ಹೇಳಿದನು.
4. ಕಂಸ ಅಥವಾ ದೇವಕಿ ಅಥವಾ ನಂದ
5. ತಂದೆ.
6. ಕೈಯನ್ನು ತೊಳೆ ಕ್ರಿಯಾಸಮಾಸ
7. ರಾಕ್ಷಸರು
8. ಸರ್ವರಿಗೂ ಆತ್ಮೀಯ ಸ್ವಾಗತ.
9. ಪ್ರಶ್ನಾರ್ಥಕ ಚಿನ್ಹೆ
10. ಮಹಾಭಾರತ.

11. ಪೂತನಿ
12. ಗೂಢಚಾರರು
13. ಸೈನಿಕ ಮತ್ತು ದುರ್ವಿಧ
14. ಸಣ್ಣ ಕೀಲಿನ
15. ಕುವಲಯಾಪೀಡ
16. ಸೆರೆಮನೆ
17. ಹಾಲಾಹಲ
18. ಧನುರ್ಯಾಗ
19. ಮಥುರಾವೀರ
20. ನಂದನ ಮತ್ತು ಯಶೋದೆ

21. ಇ) ಮಂತ್ರಿ, ವೈದ್ಯ
22. ಆ) ಬುಗುರಿ
23. ಅ) ಕ್ರೀಡಾಂಗಣ
24. ಈ) ಹಳದಿ
25. ಈ) ಹದಿನಾರು
26. ಆ)ಅಪರಂಜಿ
27. ಆ) ಮಥುರಾ
28. ಅ)ಅಷ್ಟಮಿ
29. ಆ) ರೋಹಿಣಿ
30. ಇ) ಕೃಷ್ಣ

31. ಕೃಷ್ಣ ಪೂತನಿಯ ರಕ್ತ ಹೀರಿದನು.
32. ಕೃಷ್ಣನ ಕೈಯಲ್ಲಿ ಸಿಕ್ಕ ತೃಣಾವರ್ತ ಬುಗುರಿಯಾಗಿ ಹೋದ.
33. ಗೋವರ್ಧನ ಬೆಟ್ಟ ಕೃಷ್ಣನ ಕೈಯಲ್ಲಿ ಛತ್ರಿಯಾಯಿತು.
34. ಶೋಧನೆ ಮಾಡುತ್ತಿರುವವರು ಗೂಢಚಾರರು, ಮಂತ್ರಿ.

35. ಮಂತ್ರಿ
36. ಶೈಲಿಯು
37. ಹಳದಿ ಬಣ್ಣ
38. ಹಾಲನ್ನು ಕೊಡಲು
39. ಕ್ಷೀರಸಾಗರದ ಮಥನದ ಕಥೆ
40. ಧನುರ್ಯಾಗ ಮಹೋತ್ಸವ

41. ದುರ್ವಿಧನು ಪಟ್ಟದಾನೆಗೆ  ಔಷಧ ಪಥ್ಯವನ್ನೆಲ್ಲ ಮಾಡಿದ್ದನು. ಹಳದಿ ಬಣ್ಣವನ್ನು ನೋಡಿದರೆ ಸಾಕು ಮೈ ಮೇಲೆ ಬೀಳುವ ತರಹ ತರಬೇತಿ ನೀಡಿ ತಯಾರು ಮಾಡಿದ್ದನು.
42. ಕಂಸನ ಪ್ರಕಾರ ರಾಜಕೀಯದಲ್ಲಿ ಯಾರನ್ನು ಯಾರೂ ನಂಬಬಾರದು, ನಮ್ಮನ್ನು ನಾವು ಕೂಡ ನಂಬದೇ ಎಲ್ಲರ ಮೇಲೆ ಕಣ್ಣಿಟ್ಟಿರಬೇಕು.
43. ಅಪ್ಪ ಅಮ್ಮನ ಕಣ್ಣೆದುರು ದಿನಾ ದಿನಾ ಚೂರು ಬೆಳೆಯುವುದನ್ನು ನೋಡುವುದೇ ಅಪ್ಪ-ಅಮ್ಮಂದಿರ ಪುಣ್ಯ ಎಂಬುದು ವಸುದೇವನ ಅಭಿಪ್ರಾಯ.
44. ಕಂಸನು ತಾನು ಹಾಕಿರುವ ಸಂಕೋಲೆಯನ್ನು ನೂರಕ್ಕೆ ನೂರರಷ್ಟು ಶುದ್ಧ ಅಪರಂಜಿಯಿಂದಲೆ ಮಾಡಿಸಿ, ಕೈಗೆ ಎರಡೆಳೆ, ಕಾಲಿಗೆ ಒಂದೆಳೆ ಮಾಡಿಸಿ ಹಾಕಿರುವುದಾಗಿ ಹೇಳುತ್ತಾನೆ.
45. ಮಥುರಾ ನಗರದಲ್ಲಿ ಬಿಲ್ಲ ಹಬ್ಬದ ಪ್ರಯುಕ್ತ ಧನುರ್ಯಾಗ ಮಹೋತ್ಸವ ನಡೆಯುತ್ತದೆ. ದೇಶದ ಎಲ್ಲಾ ಕಡೆಯಿಂದಲೂ ಸಾಹಸಿ ಯುವಕರು ಬಂದು ರಾಜನ ಮುಂದೆ ತಮ್ಮ ಶಕ್ತಿ ಪ್ರದರ್ಶಿಸಿ, ಮಥುರಾವೀರ ಪುಶಸ್ತಿ ಗೆಲ್ಲಬೇಕು ಎಂದು ಸಾಹಸ ಪ್ರದರ್ಶಿಸುತ್ತಾರೆ.
46. ಬಯಲಲ್ಲಿದ್ದರೂ ರಾಜನಾದ ಕಂಸನಿಗೆ ಬಂಧಿಗನಾದ ಅನುಭವ. ಎಲ್ಲಿ ಹೋದರೂ ಅಂಗರಕ್ಷಕರ ಕಾಟ.  ನಿಶ್ಚಿಂತೆಯಿಂದ ಊಟ ಮಾಡುವ ಹಾಗಿಲ್ಲ, ನಿಶ್ಚಿಂತೆಯಿಂದ ನಿದ್ದೆ ಮಾಡುವ ಹಾಗಿಲ್ಲ ಎಂಬುದು ಕಂಸನ ವೇದನೆ ಯಾಗಿತ್ತು.
47. ಅಷ್ಟಮಿಯ ದಿನದ ರಾತ್ರಿ ಹುಟ್ಟಿದ ಎಲ್ಲಾ ಮಕ್ಕಳನ್ನು ಕಂಸನು ಕೊಲ್ಲಿಸಿದ್ದನು. ಆದರೆ ಕೃಷ್ಣನನ್ನು ಮಾತ್ರ ಕಂಸನಿಗೆ ಕೊಳ್ಳಲು ಸಾಧ್ಯವಾಗಿರಲಿಲ್ಲ.
48. ಕಂಸನು ದೇವಕಿ ಹೊಟ್ಟೆಯಲ್ಲಿ ಹುಟ್ಟಿದ ಎಂಟನೆಯ ಮಗ ನಿನ್ನನ್ನು ಕೊಲ್ಲುತ್ತಾನೆ ಎಂಬ ಅಶರೀರವಾಣಿ ಕೇಳಿದ್ದನು. ಆದ್ದರಿಂದ ಕಂಸನು ಕೃಷ್ಣನನ್ನು ಕೊಲ್ಲಬೇಕೆಂದು ನಿಶ್ಚಯಿಸುತ್ತಾನೆ.

49. ಕಂಸನು ದುರ್ವಿಧ ಮತ್ತು ಶೈಲಿಕನಿಗೆ ವಹಿಸಿರುವ ಕೆಲಸಗಳು ತಪ್ಪಿತೆಂದರೆ ಅವನ ಕೈ ಯಮ ಪಾಶವಾಗುವುದು. ಹೇಗೆಂದರೆ ಶೈಲಿಕನು ಕ್ರೀಡಾಂಗಣದ ರಾಜಗೋಪುರದ ಕಮಾನಿಗೆ ಸಣ್ಣ ಕೀಲಿ ಕೈ ಎಳೆದರೆ ಕೃಷ್ಣ ನ ಮೇಲೆ ಗೋಪುರ ಬಿದ್ದು ಕೃಷ್ಣನು ಸಾಯುವ ಉಪಾಯವನ್ನು ಹೂಡಿದ್ದನು . ಆನೆಯ ತುಳಿತದಲ್ಲಿ  ಕೃಷ್ಣನು ಸಾಯುವ ಉಪಾಯದಲ್ಲಿ ಸ್ವಲ್ಪ ಎಡವಟ್ಟಾದರೂ ಕಂಸನ ಕೈ ಯಮ ಪಾಶವಾಗುವುದು.
50. ಕ್ರೀಡಾಂಗಣಕ್ಕೆ ಇರೋದು ಒಂದೇ ಹೆಬ್ಬಾಗಿಲು. ಆ ಬಾಗಿಲವಾಡದ ಕಮಾನಿಗೆ ಕಿರುಗತ್ತಿ ಅಲಂಕಾರ.  ಅದೇ ಕಮಾನಿನ ಮೇಲೆ ರಾಜಗೋಪುರ, ಗೋಪುರದ ರಚನೆ ಒಂದು ಸಣ್ಣ ಕೀಲಿನ ಮೇಲೆ ನಿಂತಿರುತ್ತದೆ. ಅದು ತೆಗೆದರೆ ಕೃಷ್ಣ ಸಾಯುವನು ಎಂಬುದು ಶೈಲಿಕನ ಯೋಜನೆ. ಆದರೆ ಅದೇ ಬಾಗಿಲಿನ ಮೂಲಕ ಕಂಸನೂ ಬರುವುದಾದರೆ ಅವನು ಸಾಯುವನು.ಆದ್ದರಿಂದ ಇನ್ನೊಂದು ಬಾಗಿಲು ನಿರ್ಮಿಸಬೇಕೆಂದು ಹೇಳುತ್ತಾನೆ.
51. ಆನೆಯು ಹಳದಿ ಬಣ್ಣ  ನೋಡಿದರೆ ಘೀ ಎಂದು ಮೈಮೇಲೆ ಬಿದ್ದು ಪ್ರಾಣವನ್ನು ತೆಗೆಯುತ್ತದೆ.  ಒಂದು ವೇಳೆ ಮದ್ದು, ಔಷಧ  ಹೆಚ್ಚಾಗಿ ದಾಂದಲೆ ಮಾಡಿ ಮಕ್ಕಳು,

ಇತರರಿಗೆಲ್ಲ ತೊಂದರೆ ಕೊಟ್ಟಿತು ಎಂಬ ಕರುಣೆಯಿಂದ ಕೆಲಸ ಮುಗಿದ ಮೇಲೆ ಮದ್ದು ಹಾರಿಸಿ ಸುಟ್ಟುಬಿಡಿ ಎಂದು ಕಂಸ ಹೇಳುತ್ತಾನೆ.

52. ಸೆರೆಮನೆ ಎಂದರೆ ಸ್ವರ್ಣ ಶೃಂಖಲೆಯಲ್ಲಿದ್ದು, ಹೊತ್ತು ಹೊತ್ತಿಗೆ ಊಟ, ಹೊತ್ತು ಹೊತ್ತಿಗೆ ನಿದ್ದೆ ಮಾಡಿಕೊಂಡು ನಿಶ್ಚಿಂತವಾಗಿರುವುದು. ಬಿಸಿಲಲ್ಲಿ ಬೇಯದೆ, ಮಳೆಯಲ್ಲಿ ತೋಯದೇ ನಾಲ್ಕು ಗೋಡೆಗಳ ಮಧ್ಯೆ ಹಾಯಾಗಿರುವುದು. ಹೊರಗೆ ಹೋಗದೆ ಭದ್ರವಾಗಿರುವ ವಿಲಾಸಿ ಭವನ ಎಂಬುದು ಕಂಸನ ಆಲೋಚನೆ.
53. ಅಷ್ಟಮಿಯ ರಾತ್ರಿ ಹುಟ್ಟಿದ ಎಲ್ಲಾ ಮಕ್ಕಳನ್ನು ಕೊಲ್ಲಿಸಿದ ಕಂಸನಿಗೆ ಒಂದು ಮಗುವನ್ನು ಮಾತ್ರ ಕೊಲ್ಲಲಿಕ್ಕೆ ಸಾಧ್ಯವಾಗಲಿಲ್ಲ. ಕೊಲ್ಲಲಿಕ್ಕೆ ಕಳಿಸಿದ ಎಲ್ಲಾ ರಾಕ್ಷಸರನ್ನು ಗೋಕುಲದ ಗೊಲ್ಲರ ಹುಡುಗ ಕೃಷ್ಣ ಕೊಂದನು, ಅವನೇ ದೇವಕಿಯ ಅಷ್ಟಮ ಪುತ್ರ ಇರಬೇಕೆಂದು ಕಂಸನ ಅನುಮಾನ.
54. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು

55. ರಾಜನಾಗಿದ್ದರೂ ಸಹ ಸ್ವತಂತ್ರವಾಗಿ ಹೊರಗಡೆ ತಿರುಗಾಡುವ ಹಾಗಿಲ್ಲ. ಸಾವಿನ ಭಯದಿಂದ ಯಾವಾಗಲೂ ಅಂಗರಕ್ಷಕರನ್ನು ಜೊತೆಗೆ ಇರಿಸಿಕೊಂಡಿರಬೇಕು. ನಿಶ್ಚಿಂತವಾಗಿ ಊಟ ಮಾಡುವ ಹಾಗಿಲ್ಲ, ನಿದ್ದೆ ಮಾಡುವ ಹಾಗಿಲ್ಲ. ಏಕೆಂದರೆ ಒಂದು ಕಡೆ ಅಷ್ಟಮಿ ಪುತ್ರನು ಬಂದು ಸಾಯಿಸುವನು ಎಂಬ ಭಯ. ಮತ್ತೊಂದು ಕಡೆ ತಾನು ಸಾಯಿಸಿದ ಅಷ್ಟೂ ಮಕ್ಕಳು ಕಣ್ಣ ಮುಂದೆ ತಕತಕ ಎಂದು ಕುಣಿಯುವ ದೃಶ್ಯ.
56. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು

57. ಉದಾಹರಣೆಗೆ: ಯಮ ಪಾಶ: ದ್ವಿಚಕ್ರ ವಾಹನ ಸವಾರಿ ಮಾಡುವಾಗ ಹೆಲ್ಮೆಟ್ ಧರಿಸದಿದ್ದರೆ ಯಮ ಪಾಶ ನಮ್ಮ ಹಿಂದೆಯೇಇರುತ್ತದೆ.
58. ಪಥ್ಯ: ದೈನಂದಿನ ಬದುಕಿನಲ್ಲಿ ಆಹಾರ ಪಥ್ಯಗಳಿದ್ದರೆ ಆರೋಗ್ಯ.
59. ಚಿಂತಾಮಗ್ನ: ಜೀವನದಲ್ಲಿ ತೊಂದರೆಗಳಿದುರಾದಾಗ ಚಿಂತಾಮಗ್ನರಾಗದೆ ತೊಂದರೆಗಳನ್ನು ಎದುರಿಸುವ ಪ್ರಯತ್ನ ಮಾಡಬೇಕು. ( ೫೭ ರಿಂದ ೫೯ ರವರೆಗಿನ ಪ್ರಶ್ನೆಗಳಿಗೆ ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು )
60.

| | |
|---|---|
| ೧. ವಸುದೇವ | ದೇವಕಿ |
| ೨. ರಾಜಗೋಪುರ | ಕೀಲಿ |
| ೩. ಪಟ್ಟದಾನೆ | ಹಳದಿ |
| ೪. ಶೃಂಖಲೆ | ಸ್ವರ್ಣ |
| ೫ .ಬಲರಾಮ | ರೋಹಿಣಿ |
| ೬. ಯಶೋಧೆ | ನಂದನ |

**ಗದ್ಯಪಾಠ - 8**
**ಸಂಕ್ರಾಂತಿಯಂದು ಸುಖ-ದುಃಖ**
**(ಉತ್ತರಗಳು)**

1.
1. !
2. ಬಾವಂದಿರು
3. ರಾಜಿ
4. ಯುಗಾದಿ
5. ಎ,ಆರ್, ಮಣಿಕಾಂತ್
6. ವಾಕ್ಯವೇಷ್ಟನ

2.
7.ರಾಷ್ಟ್ರೀಯ ಹಬ್ಬಗಳು
8.ಸಂಕ್ರಾಂತಿ
9.ನಮ್ಮ ಮನೆಯಲ್ಲಿ ನಾಲ್ಕು ದನಗಳು ಇವೆ.
10ಕಿಚ್ಚು ಹಾಯಿಸುವುದು.
11. ಟ್ರ್ಯಾಕ್ಟರು

3.
12,13,14,15 :- ವಿದ್ಯಾರ್ಥಿಯು ತಾನು ತಿಳಿದ ವಿಷಯವನ್ನು ಅನ್ವಯಿಸಿ ಉತ್ತರಗಳನ್ನು ಬರೆಯುವುದು.

4.
16. ಕುವೆಂಪು
17. ವಿಸೀ
18. ಚಂಪಾ
19. ಪಾಪು
20. ಕ ಸಾ ಪ

# ಪದ್ಯಭಾಗ
## ಮಾದರಿ ಉತ್ತರಗಳು

1. ಹುಲಿ
2. ಭೂದೇವಿ
3. ಶರೀರ, ದೇಹ.
4. ಆಶ್ಚರ್ಯ
5. ಈಶ ಸೇವೆ
6. ದೇಶಕ್ಕಾಗಿ ದುಡಿ
7. ೧. ಭಾಗಮಂಡಲ
   ೨. ಕವಿ ಶಿಷ್ಯ
   ೩.ತಪದಮನೆ
   ೪. ಸೊಂಟಕ್ಕೆ ಕಟ್ಟುವ ವಸ್ತ್ರ
8 ಬೊಮ್ಮಗಿರಿ ಯಿಂದ ಪುಷ್ಪಗಿರಿಯವರೆಗೆ ಕೊಡಗು ಬೆಳೆದಿದೆ.
9.. ಭೂರಮೆಯೂ ಮೋಹನಗಿರಿಯ ಬೆರಗಿನ ರೂಪಿನಿಂದ ನಿಂತಿದ್ದಾಳೆ.
13. ಕೊಡಗಿನ ಪೂರ್ವಜರು ಹುಲಿಯ ಹಾಲನ್ನು ಕುಡಿದಿದ್ದಾರೆ.
14. ಕೊಡಗು ಕಾವೇರಿ ತಾಯಿಯ ತವರು ಮನೆ.
15. ಹುತ್ತರಿ ಹಬ್ಬವನ್ನುಕೊಡಗರು ಹೊಸ ಅಕ್ಕಿಯನ್ನು ಮನೆಗೆ ತರುವಾಗ ಆಚರಿಸುವ ಹಬ್ಬವಾಗಿದ್ದು ,ಕೊಡಗಿನ  ಸುಗ್ಗಿ ಹಬ್ಬವೂ ಆಗಿದೆ.
16. ಹುತ್ತರಿ ಹಬ್ಬದ ಪಾತರೆ ಕೋಲದ ಹೊಯ್ಲಿಗೆ ಪದ ಹೊರಹೊಮ್ಮಬೇಕು.
17. ಕೊಡಗರ ಪೂರ್ವಜರು ಹುಲಿಯ ಹಾಲನ್ನೇ ಕುಡಿದಂತಹ ಶೌರ್ಯವಂತರು ಕವಣೆಯ ಹಗ್ಗಕ್ಕೆ ಹೆಬ್ಬಾವನ್ನು ಸೆಳೆದವರು, ಆನೆಯ ಕೊಂಬನ್ನೇ ಆಟಕ್ಕೆ ಬಳಸಿದಂತಹ ವೀರರು ಹಾಗಾಗಿ ಇವರು ಸೋಲನ್ನೇ ಕಾಣದವರು.
18 ಕೊಡಗನ್ನು ಚಂದರ ವರ್ಮನು ಚಂಗಾಳ್ವ ಅರಸರು ಹಾಗೂ ಹಾಲೇರಿಯ ಮನೆತನದವರು ಆಳಿದರು. ಡುಗಲಿ ವೀರರು ಹುಲಿಯ ಹಾಲನ್ನು ಕುಡಿದವರು ಕವಣೆಯ ದಾರಕ್ಕೆ ಹೆಬ್ಬಾವನ್ನು ಸೆಳೆ
19. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.
20. ಕಾವೇರಿಯು ಗಿರಿಯ ಬೆರಗಿನ ಸೊಬಗಿನಿಂದ ಇಳಿದು ಬಂದು ಮುಗಿಲಿಗೆ ಮಿಂಚು ಕಾಣುವಂತೆ ಹೊಳೆಯಾಗಿ ಹೊಳೆದು ತನ್ನ ನಂಬಿದವರ ನೆಲವನ್ನು ಮನವನ್ನು ತಣಿಸಿ ಹೊಲದ ಕಳೆಯನ್ನು ಕಳೆಯುವ ತರಹ ಹರಿಯುತ್ತಿದ್ದಾಳೆ.
21. ಕವಿಯು ಕೊಡಗಿಗೆ ಭೂರಮೆಯೇ ಇಳಿದು ಬಂದು ನೆಲೆಸಿರುವಳು,ಕಾವೇರಿಯು ಮೈದುಂಬಿ ಹರಿಯುವ ಬೀಡಾಗಿರುವುದು, ಸೋಲು ಸಾವು ಕಾಣದ ವೀರರು ಇರುವ ನಾಡಾಗಿರುವುದು. ಬೊಮ್ಮಗಿರಿಯಿಂದ ಪುಷ್ಪಗಿರಿಯವರಿಗೆ ಹಬ್ಬಿರುವ ದೇಶವಾಗಿದೆ. ಎಂದು ವರ್ಣಿಸುತ್ತಾ ಅಗಸ್ತ್ಯನ ತಪವಗೈದ ಮನೆಯಾಗಿದ್ದು, ಕಾವೇರಿ ಜನಿಸುವ ನೆಲೆಯಾಗಿದೆ ಎಂದು ವರ್ಣಿಸಿದ್ದಾರೆ.
22. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.
23. ಕೊಡಗಿನ ಪುರುಷರು ಸೊಂಟಕ್ಕೆ ಸುತ್ತುವ ವಸ್ತ್ರವನ್ನು ಕಟ್ಟಿ ತಲೆಗೆ ಸುತ್ತಿದ ಪೇಟದೊಂದಿಗೆ ಕೈಯಲ್ಲಿ ಪಾತುರೆ ಕೋಲ ಹಿಡಿದು ಕಪ್ಪು ಶ್ವೇತ ವರ್ಣದ ಧಿರಿಸಿನೊಂದಿಗೆ ಮಿಂಚುವರು. ಮಹಿಳೆಯರು ಸಂಪ್ರದಾಯ ಬದ್ಧ ಸೀರೆಯೊಂದಿಗೆ ತಲೆಗೆ ವಸ್ತ್ರವನ್ನು ಸುತ್ತಿ ತಮ್ಮ ಸಂಸ್ಕೃತಿ ಮೆರೆಯುವರು.
22. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

## ಪದ್ಯಪಾಠ -2
## ಸ್ವಾತಂತ್ರ್ಯ ಸ್ವರ್ಗ

1. ಮೇಲಿನ ಎಲ್ಲವೂ
2.ಮೆದುಳು
3.ತಮಸಾ ನದಿಯ ಎಡ ಬಲದಿ
4.ಮೈಸೂರಿನಿಂದ ನಮ್ಮ ಶಾಲೆಗೆ ಹುಡುಗಿಯರು ಬಂದಿದ್ದಾರೆ
5.ಹಾಕಿಕೊಂಡು,ಕುಳಿತುಕೊಂಡು .

6.ವಿದ್ಯಾರ್ಥಿಗಳ ಅಭಿವ್ಯಕ್ತಿ ಗೆ ಅವಕಾಶ ನೀಡಲಾಗಿದೆ.
7.ಸಂಕುಚಿತ ಮನೋವೃತ್ತಿ ಅಳಿದರೆ ವಿಶ್ವವೆಂಬುದು ಹೋಳಾಗದೆ ಒಂದಾಗಿರುವುದು.
8. ಅವ್ವ  ನವಚೇತನ, ಸುಮನ ಸೌರಭ, ಗಂಧಕೇಶರ,ತಮಸಾ ನದಿ ಎಡಬಲದಿ( ಇವುಗಳಲ್ಲಿ ಯಾವುದಾದರೂ ಒಂದನ್ನು ಪರಿಗಣಿಸುವುದು.)
9. ಸುವಿಚಾರವೆಂಬ ಶುದ್ಧ ವಾಹಿನಿ ಹರಿದು ಎಲ್ಲರೂ ವಿಚಾರವಂತರಾಗಬೇಕೆಂದು ಕವಿಯ ಆಶಯವಾಗಿದೆ.
10. ಕವಿಯು ಸಂಪ್ರದಾಯದ ಅನಿಷ್ಟ ರೂಢಿ ನಿಯಮಗಳನ್ನು ನಿರ್ಜನದ ಮರುಭೂಮಿ ಎಂದು ಕರೆಯುತ್ತಾರೆ.
11. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.
12.ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

## ಪದ್ಯಪಾಠ -3
## ಭಾಗ್ಯದ ಬಳೆಗಾರ

1. ನಲಿತಾವೆ
2. ಗಿಣಿ
3. ಪಗಡೆಯ
4. ಹಸಿರು

5. ತಾಯಿ
6. ಹೆಣ್ಣು
7. ಮೈಮೇಲೆ ಚುಕ್ಕೆಗಳಿರುವ ಜಿಂಕೆ
8. ಮನೆ
9. ತಾಯಿಯ ಮನೆ

10.
೧.ಕಂಚಿನದು
೨.ಮುತ್ತಿನದು
೩.ಅಚ್ಚ ಕೆಂಪಿನದು
೪.ಬಾಳೆ
೫.ಸೀಬೆ

11. ಮುತ್ತೈದೆ ಹೆಣ್ಣು ಬಳೆಗಾರನನ್ನು ತನ್ನ ತವರಿಗೆ ಹೋಗಲು ಹೇಳುತ್ತಿದ್ದಾಳೆ
12. ಹಡೆದವ್ವ ಪಗಡೆಯ ಆಟವನ್ನು ಆಡುತ್ತಾಳೆ
13. ಹಡೆದವ್ವನಿಗೆ ಅಚ್ಚ ಕೆಂಪಿನ ಬೆಳೆ ಮತ್ತು ಹಸಿರು ಗೀರಿನ ಬಳೆ ಎಂದರೆ ಇಷ್ಟ
14. ಬಾಳೆ ಮತ್ತು ಸೀಬೆ ಗಿಡಗಳ ನಡುವೆ ಹೋಗಬೇಕೆಂದು ಬಳೆಗಾರನಿಗೆ ಮುತ್ತೈದೆ ಹೇಳುತ್ತಾಳೆ.

15. ತವರು ಮನೆಯು ಹೆಂಚಿನ ಮನೆಯಾಗಿದ್ದು ಕಂಚಿನ ಕದವನ್ನು ಹೊಂದಿದೆ ಮಿಂಚಿನಂತೆ ಹೊಳೆಯುವ ಎರಡು ಗಿಳಿಗಳು ಇವೆ

16. ಬಲಕ್ಕೆ ಬೆಳೆದಿರುವ ಬಾಳೆ ಮತ್ತು ಎಡಕ್ಕೆ ಬೆಳೆದಿರುವ ಸೀಬೆಯ ಮಧ್ಯದಲ್ಲಿ ಹೋಗಬೇಕು ಅಲ್ಲಿ ಆಲೆ ಮನೆಯಲ್ಲಿ ಗಾಣ ತಿರುಗುತ್ತಿರುತ್ತದೆ ನವಿಲು ಸಾರಂಗಗಳು ನಲಿಯುತ್ತಿರುತ್ತವೆ ಇವು ತವರು ಮನೆಗೆ ಹೋಗಲು ಗುರುತುಗಳು

17. ಅಳಗುಳಿ ಮನೆ,ಚೌಕಬಾರ,ಆನೆ ಕುರಿ ಮುಂತಾದ ಆಟಗಳನ್ನು ಜನಪದರು ಆಡುತ್ತಿದ್ದರು

18. ಉದಾಹರಣೆಗೆ,

ಹಣ್ಣು ಮಾರುವವರು, ತರಕಾರಿ ಮಾರುವವರು, ಸೊಪ್ಪು ಮಾರುವವರು ಹಾಗೂ ವಿವಿಧ ವಸ್ತುಗಳನ್ನು ಮಾರುವವರು ನಮ್ಮ ಮನೆಯ ಬಳಿ ಮಾರಾಟಕ್ಕಾಗಿ ಬರುತ್ತಾರೆ.

(ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.)

19. ತವರು ಮನೆಗೆ ಹೋಗುವ ದಾರಿಯಲ್ಲಿ ಆಲೆಮನೆ ಇದೆ. ಅಲ್ಲಿ ಕಬ್ಬಿನಿಂದ ರಸ ತೆಗೆಯುವ ಗಾಣ ತಿರುಗುತ್ತದೆ. ನವಿಲು ಮತ್ತು ಸಾರಂಗಗಳು ನಲಿಯುತ್ತಿರುತ್ತವೆ ಅದೇ ನನ್ನ ತವರೂರು ಎಂದು ಮುತ್ತೈದೆಯು ಬಳೆಗಾರನಿಗೆ ತನ್ನ ತವರು ಮನೆಗೆ ಹೋಗಲು ಗುರುತುಗಳನ್ನು ಹೇಳುತ್ತಾಳೆ. ಆದರೆ ಬಳೆಗಾರ ನನಗೆ ನಿನ್ನ ತವರೂರ ಗುರುತು ಸಿಗುತ್ತಿಲ್ಲ ನೀನೇ ಬಂದು ತೋರಿಸು ಎಂದು ಮುತ್ತೈದೆ ಹೆಣ್ಣನ್ನು ಕೇಳುತ್ತಾನೆ.

20. ಪದಬಂಧ ( 24 ರಿಂದ 29 ) ಪದಬಂಧದ ಉತ್ತರಗಳು

| | | | | | |
|---|---|---|---|---|---|
| | | | | | 1.ಬ |
| 1.ಪ | ಗ | ಡೆ | | | ಳೆ |
| | | | 2.ಜ | | ಗಾ |
| | 2.ತೆಂ | ಗಿ | ನ | ಮ | ರ |
| | ಕ | | ಪ | | |
| 3.ಗಾ | ಣ | | ದ | | |

21. ವಿವರಣೆಯ ಸೂಕ್ತತೆ ಮತ್ತು ಅಭಿವ್ಯಕ್ತಿಯನ್ನು ಗಮನಿಸಿ ಮಾರ್ಗದರ್ಶನವನ್ನು ನೀಡುವುದು.

**ಪದ್ಯಪಾಠ – 4**
**ವಚನಗಳ ಭಾವ ಸಂಗಮ**

1.

೧. ಜೇಡರ ದಾಸಿಮಯ್ಯ
೨. ಸತ್ಯಕ್ಕ
೩. ಕ್ರಿಯಾಪದ
೪. ಮಡಿವಾಳ ಮಾಚಯ್ಯ

2. ಬಸವಣ್ಣನವರು ,ಅಕ್ಕಮಹಾದೇವಿ , ಜೇಡರ ದಾಸಿಮಯ್ಯ, ಅಲ್ಲಮಪ್ರಭು ಮತ್ತು ಮಡಿವಾಳ ಮಾಚಯ್ಯ.

3. ವಚನಕಾರರು ಪ್ರಪಂಚದ ಏಳು ಬೀಳುಗಳ ನಡುವೆ ನಡೆವ ಆಗುಹೋಗುಗಳ ಬಗ್ಗೆ ಹಾಗೂ ಮನುಷ್ಯನ ನಡತೆಗಳ ಕುರಿತಂತೆ ತಮ್ಮ ವಚನಗಳ ಮೂಲಕ ಜನಸಾಮಾನ್ಯರಿಗೆ ತಿಳಿಸಲು ಪ್ರಯತ್ನಿಸುತ್ತಾರೆ. ಹಾಗಾಗಿ ಜನಸಾಮಾನ್ಯರಿಗೆ ತಮ್ಮ ನಡವಳಿಕೆಗಳ ಬದಲಾವಣೆಗೆ ವಚನಕಾರರ ಮಾತುಗಳು ಬಹಳ ಮುಖ್ಯವಾಗಿದೆ.



4.ವಚನಕಾರರು ತಾವು ಬರೆದ ಬರಹಗಳು ಅಥವಾ ಹೇಳಿದ ಹೇಳಿಕೆಗಳು/ವಚನಗಳು ಅವರದೇ ಎಂಬ ದೃಡೀಕರಣಕ್ಕಾಗಿ ತಮ್ಮ ತಮ್ಮ ಆರಾಧ್ಯ ದೈವಗಳ ಹೆಸರುಗಳನ್ನು ಅಂಕಿತನಾಮಗಳಾಗಿ ಬಳಸುತ್ತಾರೆ.

5. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

6. ಚಂದನವನ್ನು ತೀಡಿದಷ್ಟು ಸುಗಂಧ ಭರಿತವಾದ ಪರಿಮಳ ಹೊರ ಸೂಸುತ್ತದೆ. ಹಾಗೆಯೇ ಒಳ್ಳೆಯವರ ಸಹವಾಸದಿಂದ ಉತ್ತಮವಾದ ನಡವಳಿಕೆಯನ್ನು ಹಾಗೂ ಉತ್ತಮ ವಿಚಾರಗಳನ್ನು ತಿಳಿದುಕೊಳ್ಳಬಹುದು. ಹಾಗಾಗಿ ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ಎಂದು ಹೇಳಿದ್ದಾರೆ.

7. ಮಾನವನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸವೆಂದರೆ ಮಾನವನಿಗೆ ಯೋಚಿಸುವ ಶಕ್ತಿ ಇರುತ್ತದೆ ಸರಿ ತಪ್ಪುಗಳ ಅರಿವು ಕೂಡ ಇರುತ್ತದೆ. ಆದರೂ ಕೆಲವೊಮ್ಮೆ ತಪ್ಪು ಮಾಡುತ್ತಾನೆ ಯೋಚಿಸುವಂತಹ ಶಕ್ತಿ ಇರುವುದರಿಂದ ತಪ್ಪುಗಳನ್ನು ಮಾಡದಂತೆ ತನ್ನ ನಡೆ ನುಡಿಗಳ ಬಗ್ಗೆ ಗಮನವಿಟ್ಟುಕೊಂಡು ಉತ್ತಮ ಮಾರ್ಗದಲ್ಲಿ ನಡೆಯಲು ಮಾನವನ ನಡೆ ಉತ್ತಮವಾಗಿರಬೇಕು.

8.ಉದಾಹರಣೆ,
(ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.)


9.ಸಜ್ಜನರು ಎಂದರೆ ಒಳ್ಳೆಯವರು .ಯಾವ ಮನುಷ್ಯ ತನ್ನ ಜೀವನದಲ್ಲಿ ಇನ್ನೊಬ್ಬರಿಗೆ ತೊಂದರೆಯಾಗದಂತೆ ಹಾಗೂ ಮಾನವೀಯ ಗುಣಗಳನ್ನು ಬೆಳಸಿಕೊಂಡಿರುವನೋ ಅವನ ಸಹವಾಸ ಮಾಡಬೇಕು. ಅದು ಜೇನನ್ನು ಸವಿದಂತೆ ಸಿಹಿಯಾಗಿರುತ್ತದೆ. ನಾವು ಕೂಡ ನಮ್ಮ ನಡವಳಿಕೆಯಲ್ಲಿ ಬದಲಾವಣೆಯನ್ನು ಕಂಡುಕೊಳ್ಳಬಹುದು ಎಂಬುದು ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ಎಂಬ ಪದದ ಅರ್ಥವಾಗಿದೆ.

10. ಬಸವನ ಬಾಗೇವಾಡಿ ಕರ್ನಾಟಕದ ವಿಜಯಪುರ ಜಿಲ್ಲೆಯ ಒಂದು ತಾಲೂಕು. ಈ ನಗರವು ಸುಪ್ರಸಿದ್ಧ ಶರಣರಾದ ಬಸವಣ್ಣನವರ ಹುಟ್ಟೂರಾಗಿದೆ. ಇದೊಂದು ಪುಣ್ಯಕ್ಷೇತ್ರ. ಈ ನಗರವು ಭಕ್ತಿಯ ಭಂಡಾರವಾಗಿದೆ. ಇಲ್ಲಿಗೆ ಬರುವ ಜನರು ಶರಣರ ಕುರಿತು ಮಾಹಿತಿಗಳನ್ನು ತಿಳಿಯಬಹುದಾಗಿದೆ.

11.ಬಾವಿ-ಭಾವಿ
ಕರೆ–ಖರೆ
ದನ - ಧನ,
ಅನ್ನ- ಅಣ್ಣ
ಘನ- ಗಾನ
ಸರ- ಶರ
ಪ್ರಧಾನ – ಪ್ರಧಾನ
ಜರಿ- ಝರಿ
ಪಲ -ಫಲ
ಭಾನು- ಬಾನು .

12. ಉದಾಹರಣೆ :
ಇದು ನನ್ನ ಶಾಲೆ,
ನಮ್ಮೂರ ಶಾಲೆ
ತಿದ್ದಿ ತೀಡುವ ನೆಲೆ
ಬದುಕು ಕೊಡುವ ನೆಲೆ
ನನ್ನ ಎರಡನೇ ಮನೆ
ನನ್ನ ಜೀವನ ನೀನೆ.

( ಸೂಚನೆ; ಮಕ್ಕಳ ಪದಗಳ ಬಳಕೆ, ಸೂಕ್ತ ಅಭಿವ್ಯಕ್ತಿಯನ್ನು ಗಮನಿಸಿ ಮಾರ್ಗದರ್ಶಿಸಿ )

13 ಮತ್ತು 14ನೇ ಪ್ರಶ್ನೆಗೆ. ವಿದ್ಯಾರ್ಥಿಗಳು ಅವರದೇ ಮಾತುಗಳಲ್ಲಿ ಗಾದೆಗಳನ್ನ ವಿಸ್ತರಿಸಲು ಅನುಕೂಲ ಮಾಡಿಕೊಡುವುದು ಹಾಗೂ ಸುಗಮಕಾರರಾಗಿ ಶಿಕ್ಷಕರು ಕಾರ್ಯ ನಿರ್ವಹಿಸುವುದು.

15. ಅಕ್ಕ ಮಹಾದೇವಿಯವರು ಕನ್ನಡದ ಮೊದಲ ಕವಿಯತ್ರಿ ಆಗಿರುತ್ತಾರೆ. ಇವರು ತಮ್ಮ ಚಿಕ್ಕ ವಯಸ್ಸಿನಲ್ಲೇ ಲೌಕಿಕ ಜೀವನವನ್ನು ತ್ಯಜಿಸಿ, ಆ ಶಿವನನ್ನೇ ಅಂದರೆ ಮಲ್ಲಿಕಾರ್ಜುನನನ್ನೇ ತನ್ನ ಪತಿ ಎಂದು ತಿಳಿದು ಬದುಕಿದರು. ಅಕ್ಕಮಹಾದೇವಿಯವರು ಶರಣರ ಚಳುವಳಿಯಲ್ಲಿ ಪ್ರಮುಖರಾದವರು. ಬದುಕಿನಲ್ಲಿ ಅನೇಕ ಸವಾಲುಗಳನ್ನು ಎದುರಿಸಿ ಎಲ್ಲರಿಗೂ ಮಾದರಿಯಾಗಿ ಬದುಕಿದವರು.
16,17. ವಿದ್ಯಾರ್ಥಿಗಳ ಸಂಗ್ರಹಿಸಿ ತರುವ ಮಾಹಿತಿಯನ್ನು ಗಮನಿಸಿ ಮಾರ್ಗದರ್ಶಿಸುವುದು.

18.  ಶಿವಶರಣರು ಎಂದರೆ ಸಕಲವೂ ಶಿವನೇ ಎಂದು ನಂಬಿದವರು ಹಾಗೂ ಭಕ್ತಿಗೆ ಹೆಸರಾದವರು. ಮಾನವೀಯತೆ ಗುಣಗಳನ್ನು ಬೆ ಳಸಿಕೊಂಡವರು. ತಾವು ತಿಳಿದು ಇತರರಿಗೆ ತಿಳಿಯನ್ನು ಸಾರುವವರು. ಶಿವ ಒಪ್ಪುವಂತಹ ಗುಣಗಳನ್ನು ಜನರಲ್ಲಿ ತಮ್ಮದೇ ಮಾತುಗಳ ಮೂಲಕ ವರ್ಣಿಸುವವರು.

19. ಉದಾಹರಣೆ.

1. ರಾಮನು ಸುಂದರವಾದ ಬರಹ ಬರೆಯುತ್ತಾನೆ.
2. ಸಹನಾಳು ಉತ್ತಮವಾದ ನೃತ್ಯ ಮಾಡುತ್ತಾಳೆ.

20. ನೃತ್ಯ- - ಕರ್ಮಪದ

2.ಮಾಡಿದಳು -ಕ್ರಿಯಾಪದ

21.ಗೋಡೆ - ಕರ್ಮಪದ

2.ಒಡೆದನು - ಕ್ರಿಯಾಪದ

.

## ಪದ್ಯಪಾಠ – 5
## ಹಚ್ಚೇವು ಕನ್ನಡದ ದೀಪ

1. ಕುವೆಂಪು
2. ನಕ್ಷತ್ರ ಗಾನ
3. ಗುಣ ಸಂಧಿ
4. ರವೀಂದ್ರ
5. ಜಾತ್ಯಾತೀತ

6. ಹಗಲು
7. ತಂದೆ
8. ಗಡಿ ನಾಡು
9. ಅನುನಾಸಿಕ ಸಂಧಿ
10. ಕರ್ನಾಟಕ

11. ಕನ್ನಡದ ಕಂಪನ್ನು ಸೂಸುವಲ್ಲಿ  ಕರಣವನ್ನು ಚಾಚುತ್ತೇವೆ.
12. ಕಲ್ಪನೆಯ ಕಣ್ಣು ಹರಿವತನಕ ಸಾಲು ದೀಪಗಳನ್ನು ಹಚ್ಚುತ್ತೇವೆ.
13. ನಮ್ಮವರು ಗಳಿಸಿದ ಹೆಸರುಳಿಸಲು ಎಲ್ಲರು ಒಂದುಗೂಡುತ್ತೇವೆ.
14. ನಮ್ಮುಸಿರು ತೀಡುವನ ಈ ನಾಡಿನಲ್ಲಿ  ಮಾಂಗಲ್ಯ ಗೀತೆಯನ್ನು  ಹಾಡುತ್ತೇವೆ.
15. ಕರುಳೆಂಬ ಕುಡಿಗೆ ಮಿಂಚನ್ನು  ಮುಡಿಸುತ್ತೇವೆ.

16 ರಿಂದ 19 ರವರೆಗೆ ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

20. ಕವಿ ಡಿಎಸ್ ಕರ್ಕಿ ಅವರು 1907ರ ಡಿಸೆಂಬರ್ 15ರಂದು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಹಿರೇ ಕೊಪ್ಪದಲ್ಲಿ ಜನಿಸಿದರು ನಕ್ಷತ್ರ ಗಾನ ಭಾವ ತೀರ್ಥ ಗೀತ ಗೌರವ ನಮನ ಬಣ್ಣದ ಚೆಂಡು ಮುಂತಾದ ಕವನ ಸಂಕಲನಗಳನ್ನು ರಚಿಸಿದ್ದಾರೆ.

21.ಕನ್ನಡಿಗರು ತಮ್ಮಲಿರುವ ಭೇದ-ಭಾವವನ್ನು ಮರೆತು ,ಒಲವನ್ನು ಎರೆದು, ನರಗಳನ್ನು ದಾರದಂತೆ ಮಾಡಿ ಅದನ್ನು ದೀಪದಲ್ಲಿಟ್ಟು ಕನ್ನಡದ ದೀಪ ಹಚ್ಚುತ್ತಾರೆ.

22. ಕವಿಯು ವಿವಿಧತೆಗಳಲ್ಲಿ ಏಕತೆಯನ್ನು ಕಂಡ ನಾಡು ನಮ್ಮದು. ಜನರು ತೊಡುವ ಉಡುಗೆ-ತೊಡುಗೆ, ಆಹಾರ - ವಿಹಾರ, ನಡೆ- ನುಡಿಗಳಲ್ಲಿ ವಿವಿಧತೆಯೊಂದಿಗೆ ನಾವೆಲ್ಲ ಒಂದು ಎಂಬ ಒಗ್ಗಟ್ಟಿನಿಂದ ಬದುಕಿ ಬಂದವರು. ನಮ್ಮ ನಾಡಿನ ಭಾಷೆ ಕನ್ನಡ.  ನಾಡ ಭಾಷೆಯಾದ ಕನ್ನಡ ಇಂದು ವಿವಿಧ ಕಾರಣಗಳಿಂದ ನಾಡಿನವರಿಂದ ದೂರವಾಗುತ್ತಿದೆ. ಭಾಷೆ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆ ನಮ್ಮ ಮೇಲಿದೆ. ಇಂತಹ ಸುಂದರ ಭಾಷೆಯನ್ನು ನಮ್ಮ ನಾಡಿನಲ್ಲಿ, ಜೊತೆಗೆ ನಮ್ಮ ನಾಡಿನ ಹೊರಗೂ  ಪಸರಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಮ್ಮವರು ಗಳಿಸಿದ ಹೆಸರು ಉಳಿಸಬೇಕು ಕನ್ನಡ ಮಾತೆಯನ್ನು ನಮ್ಮ ಎದೆಯಲ್ಲಿ ಮಿಡಿಯುವ ಭಾಷೆಯನ್ನು  ಆಡುವುದರ ಮೂಲಕ ಪೂಜಿಸಬೇಕು. ನಮ್ಮ ಭಾಷೆಯ ಬೆಳಕು ಪ್ರಪಂಚದಲ್ಲೆಡೆ ಪಸರಿಸಬೇಕು.  ಹೀಗೆ ಕನ್ನಡ ಮಾತೆಯನ್ನು ನಾವು ಆದರಿಸಬೇಕು ಎಂದಿದ್ದಾರೆ.

## ಪದ್ಯಪಾಠ – 6
## ಬಿಡುಗಡೆಯ ಹಾಡು

1. ನರಕ
2. ಮುದೇನೂರು ಸಂಗಣ್ಣ
3. ಸಿಂಹ
4. ತ್ರಿವರ್ಣ ಧ್ವಜ
5. ಹಕ್ಕಿ

6. ನಮ್ಮ ರಾಷ್ಟ್ರ ಪಿತ ಮಹಾತ್ಮ ಗಾಂಧೀಜಿಯವರು.
7.ಪಕ್ಷಿಯು ಪಂಜರದ ಕದ ಮುರಿದು ಹೊರ ಬರಬೇಕು.
8. ಕಡಲುಗಳ ರಾಣಿ ಇಂಗ್ಲೆಂಡ್.
9. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಮ್ಮ ಸ್ವಾತಂತ್ರ ಹೋರಾಟಗಾರರೇ ಸಿಡಿಲ ಮರಿಗಳು.
10. ನಾವು ಬಿಡುಗಡೆಯ ಹಾಡನ್ನು ಹಾಡಬೇಕು.

11 ಪಂಜರದ ಪಕ್ಷಿ ಎಂಬುದು ಭಾರತೀಯರು ಮತ್ತು ಅವರ ದಾಸ್ಯದ ಬದುಕಿನ ಚಿತ್ರಣವಾಗಿದ್ದು, ಕಡಲುಗಳ ರಾಣಿ ಅಂದರೆ ಭಾರತೀಯರನ್ನು ಪಾಪದ ಬದುಕಿಗೆ ತಳ್ಳಿದ ಇಂಗ್ಲೆಂಡ್ ದೇಶ ಹಾಗೂ ಅದರ ಆಡಳಿತ ನೀತಿಯಾಗಿದೆ.
12. ನೀರು ಹರಿಯದೆ ಮಡುಗಟ್ಟಿ ನಿಂತಾಗ ಕೊಳಕಾಗುತ್ತದೆ ಎಂದು ತಿಳಿಸಲಾಗಿದೆ.
13. ಪಂಜರದ ಪಕ್ಷಿ ಸ್ವತಂತ್ರವಾಗಲು ಹಂಗಿ ನರ ಮನೆಯ ಮುಳ್ಳಿನ ಪಂಜರದ ಕದ ಮುರಿದು ಹೊರಬಂದು ಬಾನಾಡಿಯಾಗಬೇಕು.
14. ನಮ್ಮ ಗುಡಿ ಎಂಬುದು ನಮ್ಮ ರಾಷ್ಟ್ರಧ್ವಜವಾಗಿದ್ದು ಮೂರು ಬಣ್ಣದ ಗುಡಿಯ ಹಿಡಿದು ಸರ್ವರಿಗು ಸಮ ನಾವು ಎಂದು ಮನದುಂಬಿ ಬಿಡುಗಡೆಯ ಒಕ್ಕೊರಲ ಗೀತೆಯನ್ನು ಹಾಡಬೇಕೆಂದು ವರ್ಣಿಸಲಾಗಿದೆ.
15. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.
16. ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಬಾಲಗಂಗಾಧರನಾಥ ತಿಲಕ್, ಬಿಪಿನ್ ಗೋಪಾಲಕೃಷ್ಣ, ದಾದಾಬಾಯಿ ನವರೋಜಿ, ಭಗತ್ ಸಿಂಗ್, ಲಕ್ಷ್ಮೀಬಾಯಿ, ಕಿತ್ತೂರ್ ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮುಂತಾದವರು
17. ಸ್ವಾತಂತ್ರ್ಯವನ್ನು ಪಡೆಯಲು ಪ್ರತಿಯೊಬ್ಬ ಭಾರತೀಯನ ಮೈ ಮನದಲ್ಲಿರುವ ಭಯ, ಆತಂಕ, ಬೇಜವಾಬ್ದಾರಿ, ಸೋಮಾರಿತನ ಎಂಬ ಕೊಳೆ ತೊಳೆದು ಹೋಗಿ ಅವರ ಮೈಮನಸ್ಸು ತಿಳಿ ನೀರಿನಂತೆ ತಿಳಿಯಾಗಬೇಕಾದರೆ ತಿಳಿ ನೀರ ಮಳೆ ಎಂಬ ಸ್ವಾತಂತ್ರ್ಯದ ಪ್ರೋಕ್ಷಣೆ, ರಾಷ್ಟ್ರ ಅಭಿಮಾನ ಎಲ್ಲರಲ್ಲೂ ಮೂಡಬೇಕು.

ಪ್ರಶ್ನೆ ಸಂಖ್ಯೆ 18.ಮತ್ತು 19 ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.)

20. ಚಡಪಡಿಸು=ಒದ್ದಾಡು, ಕಳವಳಗೊಳ್ಳು
21. ಪಣ=ಒತ್ತೆ ಇಡು, ಬಾಜಿ ಕಟ್ಟು

22. ಹದ್ದು=ಒಂದು ವಿಧದ ಪಕ್ಷಿ, ಎಲ್ಲೆ, ಗಡಿ, ಮಿತಿ

23. ಸೆರೆ=ಬಂಧನ, ಕೂಡಿ ಹಾಕು, ಹೆಂಡ

24. ಜಾತಿ ಮತಗಳ ಹುಟ್ಟು ರುಹಿ ಮನುಜಮತ
ಮೆರೆಸುವೆವು ಮೂರು ಬಣ್ಣದ ಗುಡಿಯ ಹಿಡಿದು,
ಸರ್ವರಿಗೂ ಸಮ ನಾವು ಮನದುಂಬಿ ದನಿಯೆತ್ತಿ
ಹಾಡುವೆವು ಬಿಡುಗಡೆಯ ಒಕ್ಕೊರಲ ಹಾಡು

25.ರಾಷ್ಟ್ರಧ್ವಜದ ಚಿತ್ರ ಬಿಡಿಸಿ, ಬಣ್ಣ ಹಚ್ಚುವರು.

ವಿವರಣೆ: ನಮ್ಮ ರಾಷ್ಟ್ರಧ್ವಜವು ಕೇಸರಿ, ಬಿಳಿ, ಹಸಿರು ಬಣ್ಣಗಳನ್ನೊಳಗೊಂಡಿದ್ದು, ನಡುವೆ ನೀಲಿ ಬಣ್ಣದ ಚಕ್ರವಿರುತ್ತದೆ .ಕೇಸರಿ ಬಣ್ಣವು ತ್ಯಾಗದ ಸಂಕೇತವಾಗಿದ್ದು, ಬಿಳಿ ಬಣ್ಣವು ಶಾಂತಿಯ ಸಂಕೇತವಾಗಿದ್ದು, ಹಸಿರು ಬಣ್ಣವು ಸಮೃದ್ಧಿಯ ಸಂಕೇತವಾಗಿರುತ್ತದೆ. ನಡುವೆ ನೀಲಿ ಬಣ್ಣದ ಚಕ್ರವು ಅಶೋಕ ಚಕ್ರ ವಾಗಿದ್ದು, ಇದರಲ್ಲಿ 24 ಗೆರೆಗಳು ದಿನದ 24 ಗಂಟೆಗಳನ್ನು ಸೂಚಿಸುತ್ತದೆ.

**ಪದ್ಯಪಾಠ – 7**
**ತಿರುಕನ ಕನಸು**
**(ಉತ್ತರಗಳು)**

1. ವಿಷಯದ ಆಯ್ಕೆ, ಮಾಹಿತಿ ಸಂಗ್ರಹಣೆ , ನಿರ್ದಿಷ್ಟ ಚೌಕಟ್ಟಿನಲ್ಲಿ ವಿಷಯದ ಮಂಡನೆ,ಪರಿಶೀಲನೆ.
2. ಅಶಾಂತಿ
3. ರಾಯ,ಅರಸ,ದೊರೆ
4. ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದರಂತೆ
5. ಉದಾಹರಣೆ ಘಟ್ಟ. ಗಲ್ಲ, ವೇಗ
6. ತಿರುಕ
7. ಹೆಂಗಸರು.
8. ಭಾವಸೂಚಕ ಚಿನ್ಹೆ.
9. ಇ)ಮುರುಕು ಧರ್ಮಶಾಲೆಯಲ್ಲಿ
10. ಆ)ವರಕುಮಾರರು
11. ಆ)ಆನೆ
12. ಇ)ತಿರುಕನ
13. ಆ) ಕನ್ಯೆಯರನ್ನು
14. ಈ) ಚತುರಂಗ ಬಲ
15. ಅ) ಮದುವೆ
16. ಇ) ರಾಜರ ದಂಡು ಮುತ್ತಿದ್ದರಿಂದ
17. ಕೊಳ್ಳೇಗಾಲ
18. ದೊರೆ, ಮುಖಂಡ, ಅರಸು, ರಾಜ
19. ತಿರುಕ
20. ಕುಸುಮ ಮಾಲೆ
21. ಪುರದ ರಾಜ
22. ಕನಸಿನಲ್ಲಿ
23. ಮಗ
24. ಛತ್ರಿ ,, ಕೊಡುವುದು
25. ರಾಯ
26. ಅಧರ್ಮ

27.

೧. ಆನೆ
೨. ಧರ್ಮಶಾಲೆ
೩.ಸುಭೋದ ಸಾರ
೪.ಮದುವೆ
೫.ರಾಯ
೬.ಸೈನ್ಯದ ನಾಲ್ಕು ಭಾಗ
೭.ಧನ,ರಾಜ್ಯ, ತನುಜ,ಯುವತಿ
೮.ಸೈನ್ಯ

28. ಮೆಚ್ಚುವ+ಅಂದದಿ
29. ಬಂದೆವು+ಎನಲು
30. ಮಕ್ಕಳು+ಆದುವು+ಆಗಲೇ
31. ನುಡಿದನು+ಅನಿತು
32. ಬಿಟ್ಟರು+ಅಲ್ಲಿಯೇ

33. ತಿರುಕ ಊರಿನ ಹೊರಗೆ ಮುರುಕು ಧರ್ಮ ಶಾಲೆಯಲ್ಲಿ ವಾಸಿಸುತ್ತಿದ್ದನು.
34. ತಿರುಕನ ಕನಸಿನಲ್ಲಿ ಪುರದ ರಾಜನು ಸತ್ತಿದ್ದನು.
35. ಆನೆಯ ಕೈಯಲ್ಲಿ ತಿರುಕನು ಮಾಲೆ ಹಾಕಿಸಿಕೊಂಡನು.
36. ಕನಸಿನಲ್ಲಿ ರಾಜ ಸುಖವಾಗಿ ರಾಜ್ಯವಾಳುತ್ತಿದ್ದನು.
37. ಲೋಲನಾದ ರಾಜ ಮಂತ್ರಿಗೆ ಕನ್ಯೆಯರನ್ನು ಹುಡುಕಿ ಮಕ್ಕಳಿಗೆ ಮದುವೆ ಮಾಡಬೇಕು ಎಂದನು.
38. ಉಳಿದ ರಾಯರೆಲ್ಲರು ಮೆಚ್ಚುವಂತೆ ರಾಜನು ಮಕ್ಕಳಿಗೆ ಮದುವೆ ಸಂಭ್ರಮಗಳನ್ನು ಮಾಡಿದನು.
39. ಧನದ ಮದ, ರಾಜ್ಯ ದ ಮದ, ತನುಜಮದ, ಯುವತಿಯರ ಮದದಿಂದ ರಾಜನು ಹಿಗ್ಗುತ್ತಿದ್ದನು.
40. ತಿರುಕರಾಜನಿಗೆ ನೃಪರ ದಂಡು ಮನೆಯನ್ನು ಮುತ್ತಿದಂತೆ ಆಯಿತು.
41. ಪುರದ ರಾಜನಿಗೆ ಪುತ್ರ ಸಂತಾನವಿಲ್ಲದೆ ಮುಂದಿನ ಪಟ್ಟ ಯಾರಿಗೆ ಕಟ್ಟಬೇಕೆಂಬ ಸಮಸ್ಯೆ ಉಂಟಾಯಿತು. ಆದ್ದರಿಂದ ಪಟ್ಟದಾನೆಗೆ ಕುಸುಮಮಾಲೆ ನೀಡಿ ಅದು ಯಾರ ಕೊರಳಿಗೆ ಹಾಕುವುದು ಅವರನ್ನೇ ರಾಜನನ್ನಾಗಿ ಆಯ್ಕೆ ಮಾಡಲು ಕರಿಯ ಕೈಗೆ ಮಾಲೆ ನೀಡಿದರು
42. ಪಟ್ಟದ ಆನೆಯು ಯಾರ ಕೊರಳಿಗೆ ಹಾರ ಹಾಕುತ್ತದೆಯೋ ಅವರೇ ಪುರದರಾಜ ಆಗುವರು ಎಂದು ನಿರ್ಧರಿಸಲಾಗಿತ್ತು. ಆನೆಯೂ ಕೂಡ ತಿರುಕನಿಗೆ ಮಾಲೆ ಹಾಕಿತು ಇದರಿಂದ ತಿರುಕನಿಗೆ ರಾಜನಾಗುವ ಅದೃಷ್ಟ ಬಂತು
43. ನೃಪರೆಲ್ಲರೂ ತಿರುಕನಿಗೆ ಪಟ್ಟವನ್ನು ಕಟ್ಟಿ, ಕನ್ಯೆಯರನ್ನು ನೋಡಿ ವಿವಾಹ ಮಾಡಿದರು. ತಿರುಕನು ಅರಮನೆಯಲ್ಲಿ ಮಂತ್ರಿಗಳು, ಸೈನಿಕರು, ಮಕ್ಕಳು ಎಲ್ಲರೊಂದಿಗೆ ಸಂತೋಷದಿಂದಿದ್ದನು.
44. ತಿರುಕ ರಾಜನು ಸಂತೋಷದಿಂದ ಮಕ್ಕಳೊಡನೆ ಆಡುತ್ತಾ ಆನೆ, ಕುದುರೆ, ರಥ, ಕಾಲಾಳಿನ ಬಲದೊಂದಿಗೆ ಲೋಲನಾಗಿರಲು ಸುತರುಗಳ ಮದುವೆಯನ್ನು ಮಂತ್ರಿಗೆ ಹೇಳಿ, ವಧು ಹುಡುಕಿಸಿ ಸಕಲ ಕಾರ್ಯವನ್ನು ರಾಜರೆಲ್ಲರೂ ಮೆಚ್ಚುವ ರೀತಿ ಮಾಡಿದನು.
45. ತಿರುಕರಾಜನು ಮಂತ್ರಿಗಳಿಗೆ ಮಕ್ಕಳಿಗೆ ಬಾಲೆಯರನ್ನು ನೋಡಿ ಮದುವೆ ಮಾಡಬೇಕು ಎನ್ನಲು ಅದನ್ನು ಸ್ವೀಕರಿಸಿದ ಮಂತ್ರಿಗಳು ಮದುವೆಗೆ ಸಿದ್ಧತೆಯನ್ನು ಅತ್ಯಂತ ಸಂಭ್ರಮದಲ್ಲಿ ಮಾಡಿದರು.ತಿರುಕರಾಜನು ಎಲ್ಲಾ ರಾಜರು ಮೆಚ್ಚುವಂತೆ ಮದುವೆ ಕಾರ್ಯ ಮಾಡಿದನು.
46. ರಾಜನು ಆನೆ, ಕುದುರೆ, ರಥ, ಕಾಲಾನುಗಳ ಸೇನಾ ಬಲದೊಂದಿಗೆ ಸಂತುಷ್ಟನಾಗಿ, ರಾಜ್ಯವೆಲ್ಲ ಗೆದ್ದು, ಇದರ ಮದದೊಂದಿಗೆ ಧನದ ಮದ, ಸುತರ ಮದ ಹಾಗೂ ಸಖಿಯರು ಮದದಲ್ಲಿ ಸುಖವಾಗಿದ್ದನು.
47. ರಾಜನು ಎಲ್ಲಾ ರೀತಿಯ ಸುಖದಲ್ಲಿ ಮೈ ಮರೆತಿದ್ದಾಗ, ಇದ್ದಕ್ಕಿದ್ದಂತೆ ನೆರೆರಾಜರ ದಂಡು ಮುತ್ತಿಗೆ ಹಾಕಿದಂತಾಗಿ, ಭಯದಿಂದ ಕನಸಿನಿಂದ ಕಣ್ಣು ತೆರೆದನು.
48. ವಿದ್ಯಾರ್ಥಿಗಳ ಅಭಿವ್ಯಕ್ತಿಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

## ಪದ್ಯಪಾಠ – 8
## ಅಭಿಮನ್ಯು ಪರಾಕ್ರಮ

1. ಅಗ್ನಿ ಜ್ವಾಲೆ ಮಂಜಿಗೆ ಹೆದರುವುದೇ?
2. ಗಾಳಿಯು ಬೆವರುವುದೇ?
3. ಲೋಹದ ಹಾವನ್ನು ಹಿಡಿಯಲು ಗರುಡ ಮಂತ್ರವು ಏಕೆ?
4. ಮರೀಚಿಕೆಯ ನದಿಯಲ್ಲಿ ದೋಣಿಯನ್ನು ನಡೆಸಲು ಸಾಧ್ಯವೇ?
5. ಕಡು ಬೇಸಿಗೆಯಲ್ಲಿ ಮಂಜಿನ ಸ್ಪರ್ಧೆ( ಯುದ್ಧ)

6. ಅರ್ಜುನ ಸುಭದ್ರೆಯ ಮಗ
7. ದ್ರೋಣಾಚಾರ್ಯ
8. ಪಾಂಡವ ಕೌರವರಿಗೆ ಬಿಲ್ವಿದ್ಯೆ ಕಲಿಸಿದ ಗುರು
9. ಕರ್ಣ
10. ಪಾಂಡವರಲ್ಲಿ ಹಿರಿಯವ

11. ಯುದ್ಧ
12. ಕುಮಾರವ್ಯಾಸ
13. U
14. ಗುರು
15. ಕರ್ಣಾಟ ಭಾರತ ಕಥಾಮಂಜರಿ

16. ಈ ಮಾತನ್ನು ಅಭಿಮನ್ಯು ಧರ್ಮರಾಯನಿಗೆ ಹೇಳಿದನು.
    ಸಂದರ್ಭ: ಅಭಿಮನ್ಯು ಚಕ್ರವ್ಯೂಹವನ್ನು ಭೇದಿಸಲು ಧರ್ಮರಾಯನ ಬಳಿ ಅಪ್ಪಣೆ ಕೇಳುವಾಗ ಈ ಮಾತನ್ನು ಹೇಳುತ್ತಾನೆ.

17. - U - U U U U U U U U U
    ಕೋ ಳಿ ಕೂ ಗಿ ತು ಬೆ ಳ ಕು ಹ ರಿ ಯಿ ತು

18. ರಾಜ ( ಧರ್ಮರಾಯ)ನ ಪಾದಗಳಿಗೆ ನಮಸ್ಕರಿಸಿ ನನಗೆ ಅಪ್ಪಣೆ ನೀಡಿ ತಂದೆ ನನಗೆ ಆ ಚಕ್ರವ್ಯೂಹವನ್ನು ಭೇದಿಸುವ ಬಗ್ಗೆ ಗೊತ್ತಿದೆ.

19. ಶರ ,ಕುಸುಮ ,ಭೋಗ, ಭಾಮಿನಿ ,ಪರಿವರ್ಧಿನಿ,ವಾರ್ಧಕ

20. ಭಾಮಿನಿ ಷಟ್ಪದಿ ಸ್ವರೂಪ